ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೧೮
ವಿಚಾರ ಸಾಹಿತ್ಯಮಾಲೆ – ೩೯
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
ಡಾ. ಪ್ರಧಾನ್ ಗುರುದತ್ತ

ಸಂಪಾದಕರು
ಡಾ. ಎ. ವಿ. ನರಸಿಂಹಮೂರ್ತಿ

ಶ್ರೀ ವಿದ್ಯೆಯ ಸಾರ

ಭವನದ ಗ್ರಂಥ ವಿಶ್ವವಿದ್ಯಾನಿಲಯ

ಶ್ರೀ ವಿದ್ಯೆಯ ಸಾರ

ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತ:

(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)

–ಋಗ್ವೇದ, I. ೮೯–೧

ಮೂಲ

ಚಾಗಂಟಿ ಸೂರ್ಯನಾರಾಯಣಮೂರ್ತಿ

ಅನುವಾದ

ಡಾ. ಎ.ವಿ. ನರಸಿಂಹಮೂರ್ತಿ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು

ಮತ್ತು

ಭಾರತೀಯ ವಿದ್ಯಾ ಭವನ, ಮೈಸೂರು

Sri Vidyeya Sara : Kannada translation of *Essence of Sri Vidya* by **Chaganti Suryanarayana Murty;** Kannada translation by **A.V. Narasimha Murthy;** Editor-in-Chief : **Dr. Pradhan Gurudatta;** Editor of the series : **Dr. A.V. Narasimha Murthy;** published under the joint auspices of **Kuvempu Bhasha Bharati Pradhikara**, Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara : 2010; Pp. xxvi + 49 ; Price: Rs. 10/-

ಮುದ್ರಣ : ೨೦೧೦
ಪುಟಗಳು : xxvi + ೪೯
ಬೆಲೆ : ರೂ. ೧೦/–

ಪ್ರಕಾಶಕರು :
ಪಿ. ನಾರಾಯಣಸ್ವಾಮಿ
ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
ಮೆ|| ಮಯೂರ ಪ್ರಿಂಟ್ ಆಡ್ಸ್
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ : ೫–೮–೨೦೦೯
ಸಿಎಂ/ಪಿಎಸ್/೧೪೭/೦೯

ಮೊದಲ ಮಾತು

ಕನ್ನಡ ನಾಡಿನ ಹೆಮ್ಮೆಯ ಮಹಾಕವಿ ಶ್ರೀ ಕುವೆಂಪು ಅವರು ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿದ ಮಹಾಚೇತನ. ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸಂಸ್ಥಾಪಿಸಿರುವ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'** ರಾಷ್ಟ್ರೀಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಬೇಕೆಂಬುದು ಸರ್ಕಾರದ ಸದಾಶಯ. ಬೆಂಗಳೂರು **'ಜ್ಞಾನಭಾರತಿ'** ಆವರಣದಲ್ಲಿ ನಿರ್ಮಿಸಲಾಗಿರುವ ಬೃಹತ್ ಭವನದ ಸಮುಚ್ಚಯದಲ್ಲಿ ಶಿಕ್ಷಣ, ತರಬೇತಿ ಮತ್ತು ಪ್ರಕಟಣೆಗಳ ರೂಪದಲ್ಲಿ ಬಹು–ಆಯಾಮದ ಅದರ ಚಟುವಟಿಕೆಗಳು ಅರಳಿ ನಿಲ್ಲಲಿವೆ.

ಅದು ಆರಂಭಿಸಲಿರುವ ಭಾಷಾಂತರ ಮತ್ತು ತೌಲನಿಕ ಸಾಹಿತ್ಯ ಸಂಬಂಧವಾದ ವಿಶಿಷ್ಟ ಶಿಕ್ಷಣಗಳು ಆಡಳಿತ ಕ್ಷೇತ್ರ, ನ್ಯಾಯಾಂಗ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಪೂರಕವಾಗಿ, ಕನ್ನಡವನ್ನು ಸರ್ವತೋಮುಖವಾಗಿ ಬೆಳೆಸಲು ಸಹಾಯಕವಾಗಲಿವೆ.

ಭಾರತೀಯ ಭಾಷಾ–ಸಾಹಿತ್ಯಗಳ ಉತ್ತಮೋತ್ತಮ ಕೃತಿಗಳನ್ನು ಮಾತ್ರವಲ್ಲದೆ, ವಿಶ್ವಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳನ್ನು ಜಾಗತಿಕ ಸಾಹಿತ್ಯಕ್ಕೆ ಪರಿಚಯಿಸಿಕೊಡುವ ಕರ್ತವ್ಯದ ಜೊತೆಗೆ, ಜ್ಞಾನ–ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ತರ ಕಾರ್ಯವನ್ನೂ ಅದು ಹಮ್ಮಿಕೊಳ್ಳಬೇಕಾದ ಅಗತ್ಯವಿದೆ.

ನಾಡಿನ ಶ್ರೇಷ್ಠ ವಿದ್ವಾಂಸರ ಸಲಹೆ–ಸೂಚನೆ–ಮಾರ್ಗದರ್ಶನಗಳ ಬೆಳಕಿನಲ್ಲಿ ಅದರ ಕೆಲಸ ಕಾರ್ಯಗಳು ಆದರ್ಶಪ್ರಾಯವಾಗಿ ಮೂಡಿಬರಲಿ ಹಾಗೂ ಇದೊಂದು ವಿಶಿಷ್ಟ ಸಂಸ್ಥೆಯಾಗಿ ದೇಶ–ವಿದೇಶಗಳ ಗಮನವನ್ನೂ ಸೆಳೆಯುವಂತಾಗಲಿ ಎಂದು ಹಾರೈಸುತ್ತೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬೇಕೆಂಬ, ಇದರ ಪ್ರಕಟಣೆಗಳನ್ನು ಜನಸಮುದಾಯ ಆದರ–ವಿಶ್ವಾಸಗಳಿಂದ ಸ್ವೀಕರಿಸುವರೆಂಬ ಆಶಯ ನಮ್ಮದಾಗಿದೆ.

ಭಾರತೀಯ ವಿದ್ಯಾಭವನದಂಥ ರಾಷ್ಟ್ರೀಯ ಮಹತ್ವದ ಸಂಸ್ಥೆಯ ಸಹಯೋಗದೊಂದಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾಲಯ ಮಾಲೆಯ ಪುಸ್ತಕಗಳನ್ನು ಹೊರತರುವ ಯೋಜನೆಯನ್ನು ಹಾಕಿಕೊಂಡಿರುವುದು ಸಂತೋಷದ ಬೆಳವಣಿಗೆಯೇ ಆಗಿದೆ. ಈ ಮಾಲೆಯ ಪುಸ್ತಕಗಳು ಕುವೆಂಪು ಭಾಷಾ ಭಾರತಿ ಮತ್ತು ಭಾರತೀಯ ವಿದ್ಯಾಭವನದ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದೂ ಸಂತೋಷದ ಸಂಗತಿಯೇ ಆಗಿದೆ.

(ಬಿ.ಎಸ್.ಯಡಿಯೂರಪ್ಪ)

ಕರ್ನಾಟಕ ಸರ್ಕಾರ

ಗೋವಿಂದ ಎಂ. ಕಾರಜೋಳ
ಕನ್ನಡ ಮತ್ತು ಸಂಸ್ಕೃತಿ, ಸಣ್ಣ ನೀರಾವರಿ ಹಾಗೂ
ಜವಳಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿಸುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

ಗೋವಿಂದ ಎಂ. ಕಾರಜೋಳ

ಕರ್ನಾಟಕ ಸರ್ಕಾರ

ರಮೇಶ್ ಬಿ.ಝಳಕಿ, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಕಾಸ ಸೌಧ
ಬೆಂಗಳೂರು – ೦೧

ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ನಮ್ಮ ನಾಡಿನ ಜನಸಮುದಾಯದ ಗಮನವನ್ನು ಸೆಳೆಯುವ ದಿಕ್ಕಿನಲ್ಲಿ ಮುನ್ನಡೆಯುತ್ತಿರುವುದು ತುಂಬ ಸಂತೋಷದ ಸಂಗತಿಯೇ ಆಗಿದೆ. ಪ್ರಾಧಿಕಾರದ ಒಂದು ಭಾಗವೇ ಆಗಿ ಕಲ್ಪಿಸಿಕೊಳ್ಳಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಹೊರತರಲಾಗಿದ್ದ ಸುಮಾರು ೬೦ ಗ್ರಂಥಗಳ ಜೊತೆಗೆ, ಪ್ರಾಧಿಕಾರ ಮತ್ತಷ್ಟು ಮಹತ್ವಪೂರ್ಣ ಗ್ರಂಥಗಳನ್ನು ಹೊರತರುತ್ತಿದ್ದು, ಸದ್ಯದಲ್ಲಿಯೇ ಈ ಸಂಖ್ಯೆ ನೂರರ ಗಡಿಯನ್ನು ದಾಟಲಿದೆ. 'ಭಾರತೀಯ ವಿದ್ಯಾಭವನ'ದಂಥ ರಾಷ್ಟ್ರೀಯ ಸಂಸ್ಥೆಯೊಂದಿಗೆ ಸಂಯುಕ್ತ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಪ್ರಾಧಿಕಾರ ಮುನ್ನಡೆಯಲಿರುವುದು ಪ್ರಾಧಿಕಾರದ ಚಟುವಟಿಕೆಗಳಿಗೆ ಹೊಸ ಆಯಾಮವನ್ನೇ ನೀಡಲಿದೆ ಎಂದು ನಂಬಿದ್ದೇನೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ೧೪ ಸಂಪುಟಗಳ ಕನ್ನಡ ಅನುವಾದದ ಪರಿಷ್ಕರಣ, ೧೫ ರಿಂದ ಮುಂದಿನ ಸಂಪುಟಗಳ ಅನುವಾದ ಕಾರ್ಯ, ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡ ಅನುವಾದದ ಪ್ರಕಟಣೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರ ಸಂಚಯಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳ ಪ್ರಕಟಣೆ – ಇವೇ ಮೊದಲಾದ ಮಹತ್ವದ ಕಾರ್ಯಕ್ರಮಗಳನ್ನು ಈ ಪ್ರಾಧಿಕಾರ ಹಮ್ಮಿಕೊಂಡಿರುವುದು ಸ್ತುತ್ಯರ್ಹವಾದ ಸಂಗತಿಯೇ ಆಗಿದೆ. 'ಕಾವೇರಿ ನ್ಯಾಯಾಧಿಕರಣ'ದ ತೀರ್ಪಿನ ಕನ್ನಡ ಆವೃತ್ತಿಯೂ ಸದ್ಯದಲ್ಲಿಯೇ ಹೊರಬರಲಿದೆ. ವೈಜ್ಞಾನಿಕ, ತಾಂತ್ರಿಕ ಮತ್ತು ವೈದ್ಯಕೀಯ ಸಾಹಿತ್ಯ ಪ್ರಕಟಣೆಯತ್ತಲೂ ಪ್ರಾಧಿಕಾರ ಗಮನಹರಿಸಿದೆ. ಪ್ರಾಧಿಕಾರದ ಮುನ್ನಡೆಗೆ ಕರ್ನಾಟಕ ಸರ್ಕಾರದ ಎಲ್ಲ ಬಗೆಯ ನೆರವೂ ಲಭಿಸಲಿದೆ.

ಈ ಎಲ್ಲ ಚಟುವಟಿಕೆಗಳು ಕನ್ನಡಿಗರ ಆದರ, ಮೆಚ್ಚಿಕೆ, ಸಂತೋಷಗಳಿಗೆ ಪಾತ್ರವಾಗುತ್ತದೆಂದು ನಂಬಿದ್ದೇನೆ.

(ರಮೇಶ್ ಬಿ.ಝಳಕಿ)

ಕರ್ನಾಟಕ ಸರ್ಕಾರ

ಮನು ಬಳಿಗಾರ್
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ದಿನಾಂಕ : ೦೭.೦೮.೨೦೦೯

ಪ್ರಾಸ್ತಾವಿಕ ನುಡಿ

ಕುವೆಂಪು ಭಾಷಾ ಭಾರತಿ ಅಂಗವಾಗಿ ಕರ್ನಾಟಕ ಸರ್ಕಾರ ೨೦೦೫ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕೇವಲ ಮೂರು ವರ್ಷಗಳಲ್ಲಿ ಮಾಡಿರುವ ವೈವಿಧ್ಯಮಯವಾದ ಕಾರ್ಯವನ್ನು ನಾನು ಗಮನಿಸಿದ್ದೇನೆ. ಕುವೆಂಪು ಭಾಷಾ ಭಾರತಿಯ ಕಟ್ಟಡ ಸಮುಚ್ಚಯದ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಅದರ ಉದ್ಘಾಟನ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ. ವೈವಿಧ್ಯಮಯವಾದ ಮತ್ತು ವ್ಯಾಪಕವಾದ ಕಾರ್ಯಯೋಜನೆಗಳನ್ನು, ಧ್ಯೇಯೋದ್ದೇಶಗಳನ್ನು ಹೊಂದಿರುವ ಕುವೆಂಪು ಭಾಷಾ ಭಾರತಿ ಕುವೆಂಪು ಅವರ ಹೆಸರಿನಲ್ಲಿಯೇ ಸ್ಥಾಪಿತವಾಗಿದ್ದರೂ ಕುವೆಂಪು ಸಾಹಿತ್ಯದ ಪ್ರಚಾರ ಪ್ರಸಾರಗಳಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ. ಕುವೆಂಪು ಮಾಡಿರುವ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿ ಈ ಸಂಸ್ಥೆಗೆ ಆ ಹೆಸರನ್ನು ಕೊಡಲಾಗಿದೆ. ಕನ್ನಡ ಭಾಷಾ ಸಾಹಿತ್ಯಗಳ ಹಿರಿಯ ಸಾಧನೆಯನ್ನು ಕನ್ನಡೇತರರಿಗೆ, ದೇಶ–ವಿದೇಶಗಳ ಸಾಹಿತ್ಯಿಕ ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವುದಲ್ಲದೆ, ಸಾಹಿತ್ಯ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗೆ ಕನ್ನಡವನ್ನು ಅಣಿಗೊಳಿಸುವ ಧ್ಯೇಯವನ್ನೂ ಇದು ಇರಿಸಿಕೊಂಡಿದೆ. ಹೀಗೆ ಇದು ಸರ್ವಭಾಷೆಗಳ ಸಾಮರಸ್ಯದ ಪ್ರತೀಕವಾದ ಸಾಹಿತ್ಯಿಕ ಸಂಸ್ಥೆಯಾಗಿ ಕೆಲಸ ಮಾಡಲಿದೆ. ಭಾಷಾಂತರ ಶಿಕ್ಷಣ, ವಿದೇಶ ಭಾಷೆಗಳ ಶಿಕ್ಷಣ, ತೌಲನಿಕ ಸಾಹಿತ್ಯಾಧ್ಯಯನ, ತರಬೇತಿ ಕಾರ್ಯಕ್ರಮಗಳು, ಪ್ರಕಟಣೆಗಳು – ಹೀಗೆ ಬಹುಮುಖವಾದ ಕಾರ್ಯಚಟುವಟಿಕೆಗಳಿಂದ ಕುವೆಂಪು ಭಾಷಾ ಭಾರತಿ ನಾಡಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆದು ಬರಬೇಕೆಂಬ ಆಶಯವನ್ನು ಇರಿಸಿಕೊಳ್ಳಲಾಗಿದೆ. ಕುವೆಂಪು ಭಾಷಾ ಭಾರತಿಯ ಅಂಗವಾಗಿ ಈ ಹಿಂದೆ ಸ್ಥಾಪಿತವಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕುವೆಂಪು ಭಾಷಾ ಭಾರತಿಯಲ್ಲಿ ಈಗ ವಿಲೀನಗೊಂಡಿದ್ದು, ಹೆಚ್ಚಿನ ವೈವಿಧ್ಯ ಮತ್ತು ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಅದು ತನ್ನನ್ನು ತೊಡಗಿಸಿಕೊಳ್ಳಲಿದೆ. ಈ ಅಕಾಡೆಮಿಯ ಮೂರು ವರ್ಷಗಳ ಅಲ್ಪಾವಧಿಯಲ್ಲಿ ಅಭಿನಂದನೀಯವಾದ ಕಾರ್ಯವನ್ನು ಮಾಡಿದ ಹಿರಿಯ ಬಹುಭಾಷಾ ವಿದ್ವಾಂಸರಾದ ಡಾ. ಪ್ರಧಾನ್ ಗುರುದತ್ತ ಅವರನ್ನು ಕುವೆಂಪು ಭಾಷಾ ಭಾರತಿಯ ಪ್ರಥಮಾಧ್ಯಕ್ಷರಾಗಿ ಕರ್ನಾಟಕ ಸರ್ಕಾರ ನೇಮಕ ಮಾಡಿದ್ದು,

ಅವರು ಈ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಂಕಲ್ಪಬದ್ಧರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ.

ಕುವೆಂಪು ಭಾಷಾ ಭಾರತಿ ತನ್ನ ವಿಶಿಷ್ಟ ಕಾರ್ಯಚಟುವಟಿಕೆಗಳಿಂದ ಕನ್ನಡಿಗರ ಮೆಚ್ಚಿನ ಸಾಹಿತ್ಯಿಕ – ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ಸಂಸ್ಥೆಯ ಉದ್ಘಾಟನೆಯ ಹೊತ್ತಿಗೆ ಅದರ ಅನೇಕ ಪ್ರಕಟಣೆಗಳು ಹೊರತರುತ್ತಿರುವುದು ಅದರ ಕಾರ್ಯಚಟುವಟಿಕೆಗಳ ಪ್ರತೀಕವಾಗಿದೆ. ಈ ಸಂಸ್ಥೆ ಇತೋಪ್ಯತಿಶಯವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಭಾರತೀಯ ಸಂಸ್ಕೃತಿ, ಇತಿಹಾಸ ಸಾಹಿತ್ಯ ಕ್ಷೇತ್ರಗಳಿಗೆ ತನ್ನ ಪ್ರಕಟಣೆಗಳ ಮೂಲಕ ಹಾಗೂ ಶೈಕ್ಷಣಿಕ ಕಾರ್ಯಗಳ ಮುಖೇನ ಸ್ಮರಣೀಯ ಸೇವೆಯನ್ನು ಸಲ್ಲಿಸುವ ಮೂಲಕ ಭಾರತೀಯ ವಿದ್ಯಾ ಭವನ ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿ ಪರಿಣಮಿಸಿದೆ. 'ಹಿಸ್ಟರಿ ಅಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್' ಮಾಲೆಯ ಸಂಪುಟಗಳ ಮೂಲಕ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳ ನೈಜ ಚಿತ್ರಣವನ್ನು ಮುಂದಿರಿಸಿದ ಹಿರಿಮೆಯೂ ಅದರದಾಗಿದೆ. ಜನಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿಕೊಂಡು ರಚಿಸಲಾದ ಅದರ 'ಬುಕ್ ಯೂನಿವರ್ಸಿಟಿ' ಮಾಲೆಯ ಪುಸ್ತಕಗಳ ಕನ್ನಡ ಆವೃತ್ತಿ ಭಾರತೀಯ ವಿದ್ಯಾ ಭವನ ಮತ್ತು ಕುವೆಂಪು ಭಾಷಾ ಭಾರತಿಯ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷ ಸಮಾಧಾನಗಳನ್ನು ತಂದಿದೆ. ಈ ಪುಸ್ತಕಗಳನ್ನು ಕನ್ನಡ ಜನತೆ ಎಂದಿನಂತೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

(ಮನು ಬಳಿಗಾರ್)

ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ-ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು. ಶ್ರೀ ಕುವೆಂಪು ಅವರ ಶೈಕ್ಷಣಿಕ-ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ-ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು, 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ-ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ-ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ-ಗರಿಮೆಗಳನ್ನು ರಾಷ್ಟ್ರೀಯ-ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ಆವರಣದಲ್ಲಿ ಎರಡು ಎಕರೆಗಳಷ್ಟು ವಿಶಾಲವಾದ ಸ್ಥಳದಲ್ಲಿ 'ಕುವೆಂಪು ಭಾಷಾ ಭಾರತಿ'ಯ ಕಟ್ಟಡದ

ಶಿಲಾನ್ಯಾಸ ಕಾರ್ಯಕ್ರಮ ದಿನಾಂಕ: ೦೧-೦೯-೨೦೦೫ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್. ಧರ್ಮಸಿಂಗ್ ಅವರಿಂದ ನೆರವೇರಿತು. 'ವಿಶ್ವಚೇತನ' ಮತ್ತು 'ಕಾಜಾಣ' ಎಂದು ಹೆಸರಿಸಲಾಗಿರುವ ಎರಡು ಬೃಹತ್ ಕಟ್ಟಡಗಳ ಸಮುಚ್ಚವನ್ನು ಒಳಗೊಂಡಿರುವ ಕುವೆಂಪು ಭಾಷಾ ಭಾರತಿಯ ಕಟ್ಟಡದ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೨೦೦೯ರಲ್ಲಿ ಇದರ ಕಾಮಗಾರಿ ಪೂರ್ಣಗೊಂಡಿದೆ. ಇದೇ ದಿನಾಂಕ: ೧೯-೦೮-೨೦೦೯ರ ಬೆಳಗ್ಗೆ ೧೧-೦೦ ಗಂಟೆಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಈ ಕಟ್ಟಡ-ಸಮುಚ್ಚಯದ ಉದ್ಘಾಟನ ಸಮಾರಂಭವನ್ನು ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆಗಳ ಮೊದಲ ಕಂತಿನ ಹತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಸ್ವರೂಪ ಮೂರು ಮುಖದ್ದಾಗಿರುತ್ತದೆ :

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು
(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
(ಇ) ಪ್ರಕಟಣೆಗಳು

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು :

(i) "ಕನ್ನಡ ಸಾಹಿತ್ಯ ಹಿರಿಮೆ-ಗರಿಮೆಗಳಲ್ಲಿ ಯಾವ ಭಾರತೀಯ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ. ಅದರ ಮಹತ್ವವನ್ನು ಎತ್ತಿತೋರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಅಷ್ಟೇ" ಎಂಬುದಾಗಿ ಕುವೆಂಪು ಅವರು ಉದ್ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅಂಗವಾಗಿ ಅನುವಾದ, ತೌಲನಿಕ ಸಾಹಿತ್ಯ, ವಿದೇಶಿ ಭಾಷೆಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಶಿಕ್ಷಣ ಕ್ರಮಗಳನ್ನು ಆರಂಭಿಸಬೇಕೆಂದು ಯೋಜಿಸಲಾಗಿದೆ :

(೧) ಭಾಷಾಂತರ ಡಿಪ್ಲೊಮಾ ಶಿಕ್ಷಣ – ಮೊದಲ ಹಂತದಲ್ಲಿ ಇಂಗ್ಲಿಷ್, ಹಿಂದೀ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಬಂಗಾಳಿ, ಮರಾಠಿ ಭಾಷೆಗಳಲ್ಲಿ ವಿಶೇಷ ತರಬೇತಿಗೆ ಒತ್ತುಕೊಟ್ಟು ಈ ಶಿಕ್ಷಣವನ್ನು ಪ್ರಾರಂಭಿಸಲಾಗುತ್ತದೆ.
(೨) ಭಾಷಾಂತರದಲ್ಲಿ ಎಂ.ಫಿಲ್ ಶಿಕ್ಷಣ : ವಿಶೇಷ ವಿಷಯಕ್ಕೆ ಒತ್ತುಕೊಟ್ಟು
(೩) ಪತ್ರಿಕೋದ್ಯಮ ಮತ್ತು ಭಾಷಾಂತರ
(೪) ಕಾನೂನುಶಾಸ್ತ್ರ, ಆಡಳಿತ ಭಾಷೆ ಮತ್ತು ಭಾಷಾಂತರ
(೫) ವಿಜ್ಞಾನ ಮತ್ತು ಮಾನವಿಕಶಾಸ್ತ್ರ ಕೃತಿಗಳು ಮತ್ತು ಭಾಷಾಂತರ ; ಮತ್ತು
(೬) ತೌಲನಿಕ ಸಾಹಿತ್ಯ
(೭) ವಿದೇಶೀ ಭಾಷೆಗಳ ಶಿಕ್ಷಣ (ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ)

(ii) ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಮಟ್ಟದಲ್ಲಿ ಪ್ರಚುರಪಡಿಸಬೇಕಾದರೆ – ಜಾಗತಿಕ ಪ್ರಾಚುರ್ಯದ ವಿದೇಶಿ ಭಾಷೆಗಳಿಗೆ ಕನ್ನಡದ ಶ್ರೇಷ್ಠ ಕೃತಿಗಳನ್ನು

ಕೊಂಡೊಯ್ಯುವ ಮಹತ್ವದ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಮೊದಲ ಹಂತದಲ್ಲಿ ಸ್ಪ್ಯಾನಿಷ್, ಜಪಾನಿ, ಫ್ರೆಂಚ್, ರಷ್ಯನ್, ಜರ್ಮನ್, ಚೀಣೀ, ಆಫ್ರಿಕನ್ ಭಾಷೆಗಳು – ಈ ಎಲ್ಲ ಶಿಕ್ಷಣಗಳಿಗೆ ಸಂಬಂಧಿಸಿದಂತೆ, ತಜ್ಞರೊಂದಿಗೆ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸುವುದು, ಶಿಕ್ಷಣಕ್ಕೆ ಮತ್ತು ತರಬೇತಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಮೊದಲಾದ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತದೆ. ವಿದೇಶಿ ದೂತಾವಾಸಗಳ ನೆರವಿನೊಂದಿಗೆ ಈ ಶಿಕ್ಷಣ ಕ್ರಮಗಳನ್ನು ಯೋಜಿಸಲಾಗುತ್ತದೆ.

ವಿವಿಧ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ತರುಣ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ತರಬೇತಿ ನೀಡಿ ಪ್ರಕಟಣಾವಕಾಶಗಳನ್ನು ಕಲ್ಪಿಸಿಕೊಡಲು ಅನುಕೂಲವಾಗುವಂತೆ ವಿಚಾರಗೋಷ್ಠಿಗಳು, ವಿಚಾರಸಂಕಿರಣಗಳು, ಕಾರ್ಯಶಿಬಿರಗಳು ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕುವೆಂಪು ಅವರು ಸಾಹಿತ್ಯ ಮತ್ತು ವಿಜ್ಞಾನ–ತಂತ್ರಜ್ಞಾನಗಳನ್ನು ಮಾನವ ಸಂಸ್ಕೃತಿಯ ಕಣ್ಣುಗಳೆಂದೇ ಭಾವಿಸಿದ್ದವರು. ಹೀಗಾಗಿ, ಜ್ಞಾನದ ಇತರ ಕ್ಷೇತ್ರಗಳತ್ತಲೂ ಕುವೆಂಪು ಭಾಷಾಭಾರತಿ ಕೈಚಾಚಲಿದೆ. ಈ ದೃಷ್ಟಿಯಲ್ಲಿ ಕನ್ನಡವನ್ನು ಸರ್ವಾಂಗ ಸಮೃದ್ಧವಾಗಿ ಬೆಳೆಸುವ ಅವರ ಆಶಯ ಕಾರ್ಯರೂಪಕ್ಕೆ ಬರಬಹುದಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಅನುವಾದ ಮಿಶನ್ ಯೋಜನೆ ಕಾರ್ಯರೂಪಕ್ಕೆ ಬರಲಿರುವ ಹಿನ್ನೆಲೆಯಲ್ಲಿ, ಇಂಥ ಶಿಕ್ಷಣಗಳನ್ನು ಪ್ರಾರಂಭಿಸುವುದಕ್ಕೆ ಹೆಚ್ಚಿನ ಅರ್ಥ ಮತ್ತು ಔಚಿತ್ಯ ದೊರೆಯುವಂತಾಗುತ್ತದೆ.

(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :

ಕೇಂದ್ರ ಸಾಹಿತ್ಯ ಅಕಾಡೆಮಿ ರವೀಂದ್ರನಾಥ ಠಾಗೂರ್ ಅವರ ಪ್ರಾತಿನಿಧಿಕ ಸಂಕಲನಗಳನ್ನೊಳಗೊಂಡ 'ರವೀಂದ್ರ ಸಂಚಯ'ವನ್ನು ಹೊರತಂದಿರುವ ರೀತಿಯಲ್ಲಿಯೇ 'ಕುವೆಂಪು ಸಂಚಯ' ಮತ್ತು 'ಪು.ತಿ.ನ ಸಂಚಯ'ಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಹೊರತರಲಾಗುತ್ತದೆ. ಮುಂಬರುವ ದಿನಗಳಲ್ಲಿ ಜಿ. ಎಸ್. ಶಿವರುದ್ರಪ್ಪ ಮೊದಲಾದ ಕನ್ನಡದ ಮಹತ್ವದ ಕವಿಗಳ ಸಂಕಲನಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ತರುವ ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತದೆ. ಇದೇ ರೀತಿಯಲ್ಲಿ ಭಾರತೀಯ ಜ್ಞಾನಪೀಠ ಮತ್ತು ಇತರ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗಳಿಸಿರುವ ಶ್ರೇಷ್ಠ ಸಾಹಿತಿಗಳ ಪ್ರಾತಿನಿಧಿಕ ರಚನೆಗಳನ್ನು ಒಳಗೊಂಡ ಸಂಚಯ ಕೃತಿಗಳನ್ನು ಹೊರತರಲೂ ಕ್ರಮಕೈಗೊಳ್ಳಲಾಗುತ್ತದೆ. ಉದಾ: ಮೈಥಿಲಿ ಶರಣಗುಪ್ತ ಸಂಚಯ, ಜಯಶಂಕರ ಪ್ರಸಾದ್ ಸಂಚಯ (ಹಿಂದೀ), ವಿಶ್ವನಾಥ ಸಂಚಯ (ತೆಲುಗು), ಆಶಾಪೂರ್ಣಾದೇವಿ ಸಂಚಯ (ಬಂಗಾಳಿ), ಶಿವಶಂಕರ ಪಿಳ್ಳೈ ಮತ್ತು ಎಂ. ಟಿ. ವಾಸುದೇವ ನಾಯರ್ ಸಂಚಯ (ಮಲಯಾಳಂ) ಇತ್ಯಾದಿ.

ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮತ್ತು ಜಾಗತಿಕ ಸ್ತರಗಳಲ್ಲಿ ಪ್ರಚುರಪಡಿಸಲು ವಿಚಾರಗೋಷ್ಠಿಗಳನ್ನು ಸಮಾರಂಭಗಳನ್ನು ಏರ್ಪಡಿಸುವಂತೆಯೇ, ಇತರ ಭಾರತೀಯ ಭಾಷಾಸಾಹಿತ್ಯ ಮತ್ತು ವಿಶ್ವಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಇದೇ ಬಗೆಯ ಅರ್ಥಪೂರ್ಣ ಕಾರ್ಯಕ್ರಮಗಳನ್ನೂ ರೂಪಿಸಲಾಗುತ್ತದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಧ್ಯೇಯೋದ್ದೇಶಗಳಿಗೆ ಪೂರಕವೂ–ಪ್ರೇರಕವೂ ಆಗುವಂತೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅಂತೆಯೇ, ರಾಷ್ಟ್ರಮಟ್ಟದ ಸಾಹಿತ್ಯಿಕ ಸಂಘ–ಸಂಸ್ಥೆಗಳಾಗಿರುವ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಬಿರ್ಲಾ ಪ್ರತಿಷ್ಠಾನ ಮೊದಲಾದವುಗಳಲ್ಲಿನ ಕಾರ್ಯಕ್ರಮಗಳ ಪುನರಾವರ್ತನೆಯಾಗದಂತೆ ವಿಶಿಷ್ಟ ರೀತಿಯಲ್ಲಿ ಕುವೆಂಪು ಭಾಷಾಭಾರತಿ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತದೆ.

ರಾಷ್ಟ್ರೀಯ ಪ್ರಶಸ್ತಿ : ರಾಷ್ಟ್ರಮಟ್ಟದಲ್ಲಿ ಕುವೆಂಪು ಅವರ ಹೆಸರಿನಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಯೊಂದನ್ನು ಸ್ಥಾಪಿಸಿ, ನಾಡಿನ ಶ್ರೇಷ್ಠ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸಲು ಹಾಗೂ ಅಂತಹವರ ಪ್ರಮುಖ ಕೃತಿಗಳನ್ನು ಕನ್ನಡದಲ್ಲಿ ಹೊರತರಲು ಯೋಜನೆಗಳನ್ನು ರೂಪಿಸಲಾಗುತ್ತದೆ.

ತರುಣ ಪ್ರತಿಭೆಗಳಿಗೆ ಪ್ರೋತ್ಸಾಹ : ತರುಣ ಪ್ರತಿಭೆಗಳನ್ನು ಗುರುತಿಸಿ, ವಿವಿಧ ಭಾರತೀಯ ಭಾಷೆಗಳಲ್ಲಿ ವಿಶೇಷ ತರಬೇತಿ ಲಭ್ಯವಾಗುವಂತೆ ಮಾಡಿ, ಮುಂದೆ ಸಾಹಿತ್ಯಿಕ ಕೊಳು–ಕೊಡೆ ಕಾರ್ಯದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ವಿವಿಧ ರಾಜ್ಯಸರ್ಕಾರಗಳ ನೆರವಿನೊಂದಿಗೆ ಶಿಷ್ಯವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಯೋಜಿಸಲಾಗಿದೆ.

(ಇ) ಪ್ರಕಟಣೆಗಳು :

'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಸ್ಥಾಪಿಸಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕಳೆದ ವರ್ಷವಷ್ಟೇ ೫೬ ಪುಸ್ತಕಗಳನ್ನು ಹೊರತಂದಿದ್ದು, ಕಳೆದ ೮ ತಿಂಗಳ ಅವಧಿಯಲ್ಲಿ ಸುಮಾರು ೧೦.೦೦ ಲಕ್ಷ ರೂಗಳನ್ನು ಮಾರಾಟದ ಮೂಲಕವೇ ಗಳಿಸಿಕೊಂಡಿದೆ. ಮುಂದೆ ಹಮ್ಮಿಕೊಳ್ಳಲಿರುವ ಹಾಗೂ ಮುನ್ನಡೆಯುತ್ತಿರುವ ಮಹತ್ವದ ಯೋಜನೆಗಳಲ್ಲಿ ಜೆ. ಡಿ. ಬರ್ನಾಲ್ ಅವರ 'ಸೈನ್ಸ್ ಇನ್ ಹಿಸ್ಟರಿ' ಗ್ರಂಥದ ನಾಲ್ಕು ಸಂಪುಟಗಳು, ವಿಲ್ ಡ್ಯೂರಾಂಟ್ ಅವರ 'ಸ್ಟೋರಿ ಆಫ್ ಸಿವಿಲಿಜೇಷನ್'ನ ಎಂಟು ಸಂಪುಟಗಳು (೪ರಿಂದ ೧೧), ವಿಜ್ಞಾನ–ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸುಮಾರು ೧೦೦ ಗ್ರಂಥಗಳು, ಸೋಮದೇವನ 'ಕಥಾಸರಿತ್ಸಾಗರ'ದ ಐದು ಸಂಪುಟಗಳು (೬ರಿಂದ ೧೦) – ಇವನ್ನು ಮುಖ್ಯವಾಗಿ ಹೆಸರಿಸಬಹುದಾಗಿದೆ. 'ಭಾರತೀಯ ವಿಜ್ಞಾನ ಸಂಸ್ಥೆ'ಯಂಥ ಅಂತರರಾಷ್ಟ್ರೀಯ ಖ್ಯಾತಿಯ ಸಂಶೋಧನ ಸಂಸ್ಥೆಯ ಸಹಕಾರದೊಂದಿಗೆ ಇಂಗ್ಲಿಷ್ ಮತ್ತು ಜಾಪನೀಸ್ ಭಾಷೆಗಳಲ್ಲಿ ಮಾತ್ರ ಲಭ್ಯವಿರುವ 'ಶಾಕ್ ವೇವ್ಸ್'ನಂಥ ಗ್ರಂಥವೂ ಕನ್ನಡದಲ್ಲಿ ಹೊರಬರಲಿದೆ. ಭಾರತೀಯ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾನಿಲಯ ಮಾಲಿಕೆಯ ಮೊದಲಕಂತಿನಲ್ಲಿ ಈ ಮಾಲಿಕೆಯ ೨೫ ಪುಸ್ತಕಗಳು ಸಂಯುಕ್ತ ಪ್ರಕಟಣೆಗಳಾಗಿ ಬರಲಿವೆ. 'ಅಂತರರಾಷ್ಟ್ರೀಯ ಕನಕದಾಸ ಮಿಷನ್' ಸಂಸ್ಥೆಯ ನೆರವಿನೊಂದಿಗೆ ಕನಕದಾಸರ ಸಾಹಿತ್ಯದ ಅನುವಾದ ಕಾರ್ಯವೂ ಆರಂಭಗೊಳ್ಳಲಿದೆ. ಹೀಗಾಗಿ, ಕನ್ನಡ ಪ್ರಕಾಶನದ ಕ್ಷೇತ್ರದಲ್ಲಿಯೂ, ಮಹತ್ವದ ಹೆಜ್ಜೆ ಗುರುತುಗಳನ್ನು ಕುವೆಂಪು ಭಾಷಾ ಭಾರತಿ ಮೂಡಿಸುತ್ತ ಮುನ್ನಡೆಯಲಿದೆ.

ಖಾಸಗಿ ಪ್ರಕಾಶಕರ ಸಹಭಾಗಿತ್ವ : ಖಾಸಗಿ ಪ್ರಕಾಶಕರ ಸಹಾಯ–ಸಹಕಾರಗಳೊಂದಿಗೆ ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರಚುರಗೊಳಿಸುವ

ಸಲುವಾಗಿ ರಾಜ್ಯ ಸರ್ಕಾರ ವಿಶೇಷ ಯೋಜನೆಯೊಂದಕ್ಕೆ ಅನುಮತಿ ನೀಡಿದೆ. ಅದರ ಮೇರೆಗೆ ಕನ್ನಡ ಸಾಹಿತ್ಯ ಕೃತಿಗಳನ್ನು ಇತರ ಭಾರತೀಯ ಮತ್ತು ವಿದೇಶೀ ಭಾಷೆಗಳಲ್ಲಿ ಹೊರತರುವ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಗೆ ಪ್ರಕಟಣೆಯ ಮೂಲಧನವನ್ನು ಮುಂಗಡವಾಗಿ ನೀಡಿ, ಮೂರು ವರ್ಷಗಳಲ್ಲಿ ಅವರು ಈ ಮುಂಗಡ ಹಣವನ್ನು ಹಿಂದಿರುಗಿಸುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಇತರ ಕ್ಷೇತ್ರಗಳಿಗೆ ಸರ್ಕಾರಗಳು ಅನೇಕ ರೀತಿಯಲ್ಲಿ ನೆರವಾಗುತ್ತಿದ್ದರೂ, ಪ್ರಕಟಣ ಕ್ಷೇತ್ರಕ್ಕೆ ಈ ಬಗೆಯ ನೆರವು ಇಲ್ಲದಿದ್ದರಿಂದ ಇದೊಂದು ಬಗೆಯ ವಿನೂತನ ಯೋಜನೆ ಆಗಿದೆ ಎಂದೂ, ಇಂಥ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿಯೂ ಅನೇಕ ಪ್ರಕಾಶನ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಈ ದಿಕ್ಕಿನಲ್ಲಿ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಹೀಗೆ ಪ್ರಕಟಣೆಯ ಕಾರ್ಯ ಕೈಗೊಳ್ಳುವ ಮೂಲಕ ಕನ್ನಡೇತರ ಭಾಷಾ-ಸಾಹಿತ್ಯ ವಲಯಗಳಲ್ಲಿ ಕನ್ನಡದ ಮೇರು ಕೃತಿಗಳು ಪರಿಚಯಗೊಳ್ಳಲೂ, ಜನಪ್ರಿಯವಾಗಲೂ ಸಹಾಯವಾಗುತ್ತದೆಂದು ನಂಬಲಾಗಿದೆ.

ಕರ್ನಾಟಕ ಸರ್ಕಾರದ ಉದಾರ ನೆರವಿನಿಂದ ಇಂಥ ಮಹತ್ವದ ಮತ್ತು ಬಹು ಆಯಾಮದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಭಾರತೀಯ ಮತ್ತು ವಿದೇಶಿ ಭಾಷೆಗಳ ನಡುವೆ ಒಂದು ಸಾಂಸ್ಕೃತಿಕ ಸೇತುವೆಯಾಗಿ, ಮಿನಿ ವಿಶ್ವವಿದ್ಯಾನಿಲಯವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಕಾರ್ಯ ನಿರ್ವಹಿಸಲಿದೆ. ನಾಡಿನ ಗಣ್ಯ ವಿದ್ವಾಂಸರ ಸಹಾಯ-ಸಹಕಾರಗಳನ್ನು ಪಡೆದುಕೊಂಡು ಈ ಕಾರ್ಯ ನಿರ್ವಹಿಸಲಾಗುತ್ತದೆ. ಹೀಗಾಗಿ, ಕುವೆಂಪು ಭಾಷಾ ಭಾರತಿ ಕನ್ನಡ ನಾಡಿನ ಇತಿಹಾಸದಲ್ಲಿ ಮಾತ್ರವಲ್ಲದೆ, ಭಾರತೀಯ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಸಂಸ್ಥೆಯಾಗಿ ರೂಪುಗೊಳ್ಳಲಿದೆಯೆಂದೂ, ಕನ್ನಡ ನಾಡಿನ ವಿದ್ವತ್‌ವಲಯಕ್ಕೆ, ಸಾಹಿತ್ಯ ಪ್ರೇಮಿಗಳಿಗೆ, ಕುವೆಂಪು ಅವರ ಅಭಿಮಾನಿಗಳಿಗೆ ಇದು ಸಂತಸದ ಸಂಗತಿ ಆಗಲಿದೆ ಎಂದೂ ನಂಬಿದ್ದೇವೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ-ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ

ಡಾ. ಎ.ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ ವಿದ್ಯಾ ಭವನದ ಬೆಂಗಳೂರು ಶಾಖೆಯ ಕಾರ್ಯಕಾರಿ ನಿರ್ದೇಶಕರಾಗಿರುವ ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ ಅವರಿಗೂ, ಕಾರ್ಯಕ್ರಮ ಮತ್ತು ಯೋಜನೆಗಳ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಭಾರತೀಯ ವಿದ್ಯಾ ಭವನದ ಕೇಂದ್ರ ಕಛೇರಿಯ ಪದಾಧಿಕಾರಿಗಳಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಅರುವತ್ತರ ದಶಕದಲ್ಲಿ ಈ ಮಾಲೆಯನ್ನು ಆರಂಭಿಸಿದಾಗ ಇದನ್ನು 'ಒಂದು ರೂಪಾಯಿ ಮಾಲೆ' ಎಂದೇ ಕರೆಯಲಾಗಿತ್ತು. ಈಗಲೂ ಜನಸಾಮಾನ್ಯರಿಗೆ ಸುಲಭ ದರದಲ್ಲಿ ಈ ಪುಸ್ತಕಗಳನ್ನು ತಲುಪಿಸುವ ಉದ್ದೇಶದಿಂದ ಈ ಮಾಲೆಯ ಎಲ್ಲ ಪುಸ್ತಕಗಳಿಗೂ ಹತ್ತು ರೂ.ಗಳ ಸಾಂಕೇತಿಕ ದರವನ್ನೇ ಗೊತ್ತು ಪಡಿಸಲಾಗಿದೆ. ಪ್ರಕಟಣೆಯ ವೆಚ್ಚದ ಒಂದು ಭಾಗವನ್ನು ವಿದ್ಯಾ ಭವನ ಭರಿಸಿರುವುದು ಇದಕ್ಕೆ ಕಾರಣವಾಗಿದೆ. ಈ ಸೌಹಾರ್ದತೆಗಾಗಿಯೂ ನಾವು ವಿದ್ಯಾ ಭವನದ ಎಲ್ಲ ಪದಾಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಬಯಸುತ್ತೇವೆ.

ಈ ಮಾಲೆಯ ೨೫ ಪುಸ್ತಕಗಳು ಒಮ್ಮೆಗೇ ಹೊರ ಬರುತ್ತಿರುವುದಕ್ಕೆ ಬೆಂಗಳೂರು ಕೇಂದ್ರದ ತ್ರಿಮೂರ್ತಿಗಳ ಸಹಾಯ ಸಹಕಾರ ಮತ್ತು ಮಾರ್ಗದರ್ಶನಗಳು ಮಾತ್ರವಲ್ಲದೆ ಡಾ. ಎ. ವಿ. ನರಸಿಂಹಮೂರ್ತಿಯವರ ದಕ್ಷ ಸಂಪಾದಕತ್ವ ಮತ್ತು ಕಾರ್ಯಪಟುತ್ವಗಳು ಕಾರಣವಾಗಿವೆ. ಇದು ನಮಗೆ ಸಂತೋಷವನ್ನೂ ಹೆಮ್ಮೆಯನ್ನೂ ತಂದುಕೊಟ್ಟಿದೆ. ಇವನ್ನು ಸುಂದರವಾಗಿ ಹೊರತರುವಲಿಯೂ ಅವರಿಂದ ನಮಗೆ ಸಲಹೆ ಸೂಚನೆಗಳು ದೊರೆತಿವೆ. ಈ ಎಲ್ಲ ಕೃಪೆಗಾಗಿ ನಾನು ಆ ಎಲ್ಲ ಮಹನೀಯರಿಗೂ ಕೃತಜ್ಞತಾಪೂರಕವಾದ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಈ ಪುಸ್ತಿಕೆಯ ಕನ್ನಡ ಆವೃತ್ತಿಯನ್ನು ಸಿದ್ಧಪಡಿಸಿ ಕೊಟ್ಟಿರುವ ಡಾ. ಎ.ವಿ. ನರಸಿಂಹಮೂರ್ತಿ ಅವರಿಗೂ, ಕರಡುಗಳ ಪರಿಶೀಲನೆಯಲ್ಲಿ ಸಹಕರಿಸಿರುವ ಶ್ರೀಮತಿ ಬಿ. ಸುಧಾ ಅವರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ-ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು - ೫೬

ಪ್ರಧಾನ್ ಗುರುದತ್ತ
ಅಧ್ಯಕ್ಷ

ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಪ್ರಸ್ತುತ, 'ಶ್ರೀ ವಿದ್ಯೆಯ ಸಾರ' ಎಂಬ ಪುಸ್ತಕ ಖ್ಯಾತ ಲೇಖಕರಾದ ಡಾ. ಎ.ವಿ. ನರಸಿಂಹಮೂರ್ತಿ ಅವರ ಸಮರ್ಥ ಅನುವಾದ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

ಎನ್. ರಾಮಾನುಜ
ಅಧ್ಯಕ್ಷರು
ಭಾರತೀಯ ವಿದ್ಯಾಭವನ, ಕರ್ನಾಟಕ

ಎ. ವಿ. ನರಸಿಂಹಮೂರ್ತಿ
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ

ಮೂಲ ಸಂಪಾದಕರ ಪ್ರಸ್ತಾವನೆ

ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳು ವಿಶೇಷ ಸಾಫಲ್ಯವನ್ನು ಕಂಡಿವೆ. ಈ ಹನ್ನೊಂದು ವರ್ಷಗಳಲ್ಲಿ ಸುಮಾರು ಒಂದೂಕಾಲು ಮಿಲಿಯನ್ ಪುಸ್ತಕಗಳು ಮಾರಾಟಗೊಂಡಿವೆ. ಆದರೂ ಭವನವು ಆಗಾಗ್ಗೆ ಪ್ರಕಾಶನಗೊಳಿಸುತ್ತಿರುವ ಕಡಿಮೆ ಬೆಲೆಯ ಕೆಲವು ಬಿಡಿ ಪುಸ್ತಕಗಳಿಗೆ ವಿಶೇಷ ಬೇಡಿಕೆ ಇದೆ. ಇದನ್ನು ಪೂರೈಸುವ ದೃಷ್ಟಿಯಿಂದ ಹೊಸ ಒಂದು ರೂಪಾಯಿ ಪುಸ್ತಕಗಳನ್ನು ಹಾಗೂ ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳನ್ನೂ ಒಟ್ಟೊಟ್ಟಿಗೆ ಪ್ರಕಟಿಸಲು ತೀರ್ಮಾನಿಸಿದೆ.

ಈ ಹೊಸ ಒಂದು ರೂಪಾಯಿ ಮಾಲಿಕೆಯ ಪುಸ್ತಕಗಳು, ಇತರ ಮಾಲಿಕೆಯ ಪುಸ್ತಕಗಳಂತೆ ಸಾಫಲ್ಯವನ್ನು ಪಡೆದು ಭಾರತೀಯ ಸಂಸ್ಕೃತಿಯ ಮೌಲ್ಯದಲ್ಲಿ ಆಸಕ್ತಿ ಇರುವವರಿಗೆ ಇಷ್ಟವಾಗಿ, ಹೆಚ್ಚಿನ ಓದುಗರನ್ನು ತಲಪುತ್ತದೆ ಎಂದು ನಾನು ಭಾವಿಸಿದ್ದೇನೆ.

ಭಾರತೀಯ ವಿದ್ಯಾಭವನ
ಚೌಪಾಟಿ ರೋಡ್, ಬೊಂಬಾಯಿ–೭ **ಕೆ. ಎಂ. ಮುನ್ಷಿ**
ವಿಜಯದಶಮಿ, ಸೆಪ್ಟೆಂಬರ್ ೨೮, ೧೯೬೩

ಪರಮಪೂಜ್ಯ
ಶ್ರೀ ಕಾಂಚಿ ಕಾಮಕೋಟಿ ಪೀಠಾಧಿಪತಿಗಳಾದ
ಜಗದ್ಗುರು
ಶ್ರೀ ಶಂಕರಾಚಾರ್ಯ ಸ್ವಾಮಿಗಳ ಮಠ
ಕಾಂಚೀಪುರಂ - 631 502

ಕ್ಯಾಂಪ್ : ಕಾಂಚೀಪುರಂ ತಾ|| 14-8-1978

ಗೆ,

ಶ್ರೀ ಚಾಗಂಟಿ ಸೂರ್ಯನಾರಾಯಣಮೂರ್ತಿ, ಎಂ.ಬಿ.ಬಿ.ಎಸ್.
ಹೈದರಾಬಾದ್-8

ನೀವು ಟೈಪ್ ಮಾಡಿಕಳುಹಿಸಿದ 'ಎಸೆನ್ಸ್ ಆಫ್ ಶ್ರೀ ವಿದ್ಯಾ' ಎಂಬ ಪುಸ್ತಕದ ಹಸ್ತಪ್ರತಿ ತಲಪಿತು. ಅದನ್ನು ಪರಮ ಪೂಜ್ಯಸ್ವಾಮಿಗಳ ಅವಗಾಹನೆಗೆ ಅರ್ಪಿಸಲಾಯಿತು.

ನೀವು ಅಧ್ಯಯನ ಮಾಡಿರುವ ವಿಷಯ ಬಹಳ ಚೆನ್ನಾಗಿದೆ ಎಂದು ತಿಳಿಸಲು ಪರಮ ಪೂಜ್ಯರಿಂದ ನಿರ್ದೇಶಿತನಾಗಿದ್ದೇನೆ. ಪರಮಪೂಜ್ಯರಿಂದ ಆಶೀರ್ವದಿಸಲ್ಪಟ್ಟ ಪ್ರಸಾದವನ್ನು ಇದರೊಂದಿಗೆ ಕಳುಹಿಸುತ್ತಿದ್ದೇನೆ.

ಮೇನೇಜರ್

ಮುನ್ನುಡಿ

ಶ್ರೀ ವಿದ್ಯೆಯ ಅಭ್ಯಾಸವನ್ನು ಯಾರಾದರೂ ಆರಂಭಿಸಿದರೆ, ಅವರು ಅದರ ಸಮಗ್ರತೆಯ ಆಳದಿಂದ ಸೆಳೆತಕ್ಕೆ ಒಳಗಾಗುತ್ತಾರೆ. ಇದರ ಬಗ್ಗೆ ಯಾರು ಏನನ್ನಾದರೂ ಬರೆಯಲಿ, ಅಥವಾ ಹೇಳಲಿ, ಅದು ಆ ಆನಂದದ ಹೊರವಲಯವನ್ನು ಮುಟ್ಟಲು ಮಾತ್ರ ಸಾಧ್ಯವಾಗುತ್ತದೆ. ಇದರ ಆನಂದವನ್ನು ಎಲ್ಲರಿಗೂ ಹೆಚ್ಚು ಹೆಚ್ಚಾಗಿ ತಿಳಿಸಬೇಕೆಂಬ ಆಕಾಂಕ್ಷೆ ಉಂಟಾಗುತ್ತದೆ. ಚಾಗಂಟಿ ಸೂರ್ಯನಾರಾಯಣ ಮೂರ್ತಿಯವರು ತಾವು ಸಂಪಾದಿಸಿದ ಕೀರ್ತಿಯಿಂದ ತೃಪ್ತರಾಗದೆ ಇರುವ ಸಾಧಕರು. ಅವರು ತಮ್ಮದೇ ದೃಷ್ಟಿಕೋನದಿಂದ ಆಧುನಿಕ ಕಾಲಕ್ಕೆ ತಕ್ಕಂತೆ ಶ್ರೀಲಲಿತಾ ಸಹಸ್ರನಾಮವನ್ನು ಕುರಿತು ಬರೆದಿದ್ದಾರೆ. ಅವರು ಶ್ರೀ ಲಲಿತಾ ತ್ರಿಶತಿಯ ಬಗೆಯೂ ಬರೆದು ತಮ್ಮ ಶ್ರಮ ಮತ್ತು ತಿಳಿಸಿಹೇಳುವ ಗುಣದ ಶ್ರದ್ಧೆಯಿಂದ ಓದುಗರು ಅವರಿಗೆ ಕೃತಜ್ಞರಾಗಿರುವಂತೆ ಮಾಡಿದ್ದಾರೆ. ಈಗ ಇವರು ದಿವ್ಯಮಾತೆಯನ್ನು ಕುರಿತಾದ ಕೃತಿಯನ್ನು ರಚಿಸಿ ಒಟ್ಟು ಮೂರು ಗ್ರಂಥಗಳನ್ನು ನೀಡಿದ್ದಾರೆ.

ಅವರ ಶ್ರೀ ವಿದ್ಯೆಯ ಸಾರವು ಪ್ರಶ್ನೆ ಮತ್ತು ಉತ್ತರಗಳ ಮೂಲಕ ಬಹಳ ಕ್ರಮವಾಗಿ ಯೋಜಿತವಾಗಿದೆ. ಶ್ರೀವಿದ್ಯೆಯ ಉಪಾಸನೆಯನ್ನು ಅಭ್ಯಾಸ ಮಾಡಲು ಆರಂಭಿಸಿದರೆ, ಇಪ್ಪತ್ತನೆಯ ಶತಮಾನದ ಓದುಗರ ಮನಸ್ಸಿನಲ್ಲಿ ಉಂಟಾಗಬಹುದಾದ ಸಂಶಯ ಗಳನ್ನು ಅವರೇ ಭಾವಿಸಿಕೊಂಡು ಇದನ್ನು ರಚಿಸಿದ್ದಾರೆ. ಲೇಖಕರು ತಮ್ಮ ಆಳವಾದ ಹಾಗೂ ಕೇಂದ್ರೀಕೃತ ಅಧ್ಯಯನದ ಸಹಾಯದಿಂದ, ಅನೇಕ ವಿವರಣೆಗಳನ್ನು ನೀಡಿ ಓದುಗರ ಸಂಶಯಗಳಿಗೆ ಸಮಾಧಾನಗಳನ್ನು ನೀಡಿದ್ದಾರೆ. ಉದಾಹರಣೆಗೆ ಅವರು ಶ್ರೀಚಕ್ರದ ವಿಷಯದಲ್ಲಿ ನೀಡಿರುವ ವರ್ಣನೆ ಪ್ರತಿಯೊಂದು ಸಣ್ಣಪುಟ್ಟ ವಿವರಗಳನ್ನೂ ಒಳಗೊಂಡು ಮೂರು ರೀತಿಯ ವ್ಯಾಖ್ಯೆಗಳನ್ನು ನೀಡಿರುವುದು ತೃಪ್ತಿಕರವಾಗಿದೆ. ಚಕ್ರಗಳು ಅಥವಾ ಪದ್ಮಗಳನ್ನು ಕುರಿತು ಬರೆಯುವಾಗ, ಇವೆಲ್ಲವೂ ಭೌತಿಕ ಶರೀರದಲ್ಲಿ ಕಾಣಬರುವುದಿಲ್ಲ, ಆದರೆ ಸೂಕ್ಷ್ಮ ಅವಸ್ಥೆಯ ಪದರಗಳಲ್ಲಿ ಮಾತ್ರ ಅನುಭವಕ್ಕೆ ಬರುತ್ತದೆ ಎಂಬ ಎಚ್ಚರಿಕೆಯನ್ನೂ ನೀಡಿದ್ದಾರೆ. ಗುರು-ಶಿಷ್ಯರ ವಿಚಾರವನ್ನು ಚರ್ಚಿಸುವಾಗ ಗುರುವಿಗಿಂತ, ಶಿಷ್ಯನ ಅರ್ಹತೆಗಳಿಗೇ ಹೆಚ್ಚಿನ ಪ್ರಾಮುಖ್ಯ ನೀಡಬೇಕೆಂಬ ಅಂಶವನ್ನು ಮೃದುವಾದ ಎಚ್ಚರಿಕೆಯ ಮೂಲಕ ತಿಳಿಯ ಹೇಳಿದ್ದಾರೆ. ಏಕೆಂದರೆ ಶಿಷ್ಯನು ಸಿದ್ಧನಾಗಿದ್ದರೆ ಗುರುವು ಕಾಣಿಸಿಕೊಳ್ಳುತ್ತಾನೆ. ಲೇಖಕರು ಶ್ರೀ ವಿದ್ಯೆಯನ್ನು ಕುರಿತಾಗಿ ರಚಿಸಿರುವ ಎರಡು ಪುಸ್ತಕಗಳಿಗೆ ಜೊತೆಯಾಗಿರುವ ಈ ಗ್ರಂಥವನ್ನು ನಾನು ಸ್ವಾಗತಿಸುತ್ತೇನೆ. ಕೊನೆಯಲ್ಲಿ ಕೊಟ್ಟಿರುವ ಟಿಪ್ಪಣಿಗಳಲ್ಲಿ ಉತ್ತಮ ಮಾಹಿತಿಗಳು ಸಂಗ್ರಹರೂಪದಲ್ಲಿದ್ದು ನಮ್ಮ ಉಪಾಸನೆಯ

ರೂಪದಲ್ಲಿರುವ ಪ್ರಾಯೋಗಿಕ ಮನೋವಿಜ್ಞಾನದ ವಿದ್ವಾಂಸರು ಅಥವಾ ವಿದ್ಯಾರ್ಥಿಗಳಿಗೆ ವಿಶೇಷ ಮಹತ್ವವುಳ್ಳದ್ದಾಗಿದೆ. ಮಾನವರ ಆಕಾಂಕ್ಷೆಗಳಿಗೂ ಸದಾ ಕೃಪಾಕಟಾಕ್ಷ ಪ್ರವಹಿಸುವ ಆಕೆಯ ದಿವ್ಯಪಾದಗಳಿಗೂ ಸಂಪರ್ಕವನ್ನು ಏರ್ಪಡಿಸುವ ಲೇಖಕರ ಪರಿಶ್ರಮವನ್ನು ಆ ದಿತ್ಯಮಾತೆಯು ಹರಸಲಿ ಎಂದು ಹಾರೈಸುತ್ತೇನೆ.

ಪಾಂಡಿಚೆರಿ
24-09-1978

ಎಂ.ಪಿ. ಪಂಡಿತ್
ಶ್ರೀ ಅರಬಿಂದೊ ಆಶ್ರಮ

ಪರಿವಿಡಿ

Blank Page

ಶ್ರೀ ವಿದ್ಯೆಯ ಸಾರ

ಪ್ರಸ್ತಾವನೆ

ಅತ್ಯಂತ ಶ್ರೇಷ್ಠನಾದ ಪರಮಾತ್ಮನನ್ನು ಯಾವುದಾದರೊಂದು ರೂಪದಲ್ಲಿ ಪೂಜಿಸುವ ಪದ್ಧತಿಯು ಮಾನವನಷ್ಟೇ ಪ್ರಾಚೀನವಾದುದು. ಆರಂಭ ಕಾಲದ ಮಾನವನು ಸೂರ್ಯ, ಚಂದ್ರ, ನೀರು ಇತ್ಯಾದಿ ವಸ್ತುಗಳನ್ನು ಭಯ ಮತ್ತು ಆಶ್ಚರ್ಯದಿಂದ ಗಮನಿಸಿದನು. ಇವುಗಳನ್ನು ತೃಪ್ತಿಪಡಿಸಿ ಈ ಪ್ರಾಕೃತಿಕ ತತ್ತ್ವಗಳಿಂದ ಉಂಟಾಗಬಹುದಾದ ಅಪಾಯಗಳನ್ನು ತಡೆಗಟ್ಟಿ, ತನಗೆ ಅನುಕೂಲಗಳನ್ನು ಪಡೆಯಲು ಯೋಚಿಸುತ್ತಿದ್ದನು. ಮಾನವನ ಆರಂಭ ಕಾಲದ ಸಂಸ್ಕೃತಿಯ ಸಮಯದಿಂದ ಇಂದಿನ ಆಧುನಿಕತೆಯವರೆಗೆ ಇವುಗಳನ್ನು ಕಾಣಬಹುದಾಗಿದೆ. ಈ ಸಂಗತಿಯು ಅವನು ಮಾಡುವ ಪ್ರಾರ್ಥನೆ, ಧಾರ್ಮಿಕ ಕ್ರಿಯೆಗಳು ಹಾಗೂ ದೈನಂದಿನ ಚಟುವಟಿಕೆಗಳಲ್ಲಿ ಕಾಣಿಸಿಕೊಳ್ಳುತ್ತವೆ. ಈ ರೀತಿಯ ಕ್ರಿಯೆಗಳು ಕಾಲದಿಂದ ಕಾಲಕ್ಕೆ ಬದಲಾವಣೆ ಹೊಂದಿ, ಅವನ ವಿಕಾಸ ಮತ್ತು ಪರಿಸರಕ್ಕೆ ಹೊಂದಿಕೊಂಡವು. ಒಂದು ಹಂತದಲ್ಲಿ ಆಗಮಗಳು ಮತ್ತು ತಂತ್ರಗಳು ಹಾಗೂ ಋಕ್ಕುಗಳನ್ನು ಸಾಮಗಳನ್ನು ಪಠಿಸುವುದು ಆಗಿದ್ದರೆ; ಮತ್ತೊಂದು ಹಂತದಲ್ಲಿ ಜಪ-ತಪಗಳನ್ನು ಮಾಡುವುದು; ಮುಂದಿನ ಹಂತದಲ್ಲಿ ವ್ರತಗಳು ಹಾಗೂ ಕಲ್ಪಗಳನ್ನು ಆಚರಿಸುವುದು ಇತ್ಯಾದಿಗಳಾಗಿದ್ದವು. ಪ್ರಾಚೀನ ಋಷಿಗಳು ಇದನ್ನು ಕಾಲ ಮತ್ತು ಪರಿಸರಗಳಿಗನುಗುಣವಾಗಿ ಆದರೆ ಮೂಲದಲ್ಲಿ ಯಾವ ಬದಲಾವಣೆಯೂ ಇಲ್ಲದಂತೆ, ಇವೆಲ್ಲವನ್ನೂ ಅಳವಡಿಸಿದರು. ಮಾನವನು ಬೇಟೆಯಾಡುವ ಹಂತದಿಂದ ಆಕಾಶಮಾನವನಾಗಿ ಇಂದು ಕಾಣಿಸಿಕೊಳ್ಳುತ್ತಿದ್ದಾನೆ. ಆದುದರಿಂದ ಇವರಿಬ್ಬರಿಗೂ ಒಂದೇ ವಿಧವಾದ ನಿಯಮಗಳನ್ನು ಅಳವಡಿಸಲಾಗುವುದಿಲ್ಲ. ವಿಶ್ವವನ್ನೇ ಸುತ್ತುತ್ತಿರುವ ಇಂದಿನ ಒಬ್ಬ ವಿಶ್ವಸಂಸ್ಥೆಯ ಅಧಿಕಾರಿಯು ಅಗ್ನಿಹೋತ್ರ, ಅಥವಾ ನವಾವರಣ ಪೂಜೆಗಳನ್ನು ಮಾಡುವುದು ಸಾಧ್ಯವಿಲ್ಲದ ಮಾತು. ಆದುದರಿಂದ ತಾತ್ವಿಕ ನಿಯಮಗಳನ್ನು ಇಂದಿನ ಆಧುನಿಕ ಜೀವನಕ್ಕೆ ಹೊಂದಿಕೊಂಡಂತೆ ಅಳವಡಿಸುವುದು ಅಗತ್ಯವಾಗಿದೆ. ಆದುದರಿಂದ ಈ ಸಣ್ಣ ಪುಸ್ತಕದಲ್ಲಿ ಶ್ರೀವಿದ್ಯೆಯ ಸಾರವನ್ನು ಆಧುನಿಕ ಕಾರ್ಯಶೀಲ ಭಕ್ತನಿಗೆ ವಿವರಿಸುವ ಪ್ರಯತ್ನ ಮಾಡಲಾಗಿದೆ. ಈ ಪುಸ್ತಕದ ಕರ್ತೃವು (ಮೂಲ) ಈ ವಿಷಯದಲ್ಲಿ ಅಧಿಕೃತ ವಿದ್ವಾಂಸನೇನಲ್ಲ; ಅವನು ಇದರ ವಿದ್ಯಾರ್ಥಿ ಹಾಗೂ ಸಾಧಕನಾಗಿದ್ದು, ಕೆಲವು ಗ್ರಂಥಗಳನ್ನು ಅಧ್ಯಯನ ಮಾಡಿದವನಾಗಿದ್ದಾನೆ

ಎಂಬುದನ್ನು ಸ್ಪಷ್ಟಪಡಿಸಬೇಕು.

ಆದುದರಿಂದ ಲೇಖಕನು ಶ್ರೀ ವಿದ್ಯೆಯ ಮುಖ್ಯ ಲಕ್ಷಣಗಳನ್ನು ಮತ್ತು ಸಾರವನ್ನು ಓದುಗರ ಮುಂದೆ ಪ್ರಸ್ತುತಪಡಿಸಿ ಅವರಲ್ಲಿ ಉಂಟಾಗಬಹುದಾದ ನಿಜವಾದ ಸಂದೇಹಗಳು, ತಪ್ಪು ಕಲ್ಪನೆಗಳನ್ನು ನಿವಾರಿಸುವುದೇ ಅವನ ಮುಖ್ಯ ಉದ್ದೇಶವಾಗಿದೆ. ಸೌಂದರ್ಯಲಹರಿ, ಶ್ರೀ ಲಲಿತಾಸಹಸ್ರನಾಮ, ಶ್ರೀ ಲಲಿತಾತ್ರಿಶತೀ ಮುಂತಾದ ಶ್ರೇಷ್ಠಗ್ರಂಥಗಳಿಗೆ ಈ ಅಧ್ಯಯನ ಪರ್ಯಾಯವಲ್ಲ; ಇಂತಹ ಗ್ರಂಥಗಳಲ್ಲಿ ಅಡಗಿರುವ ಪ್ರಧಾನ ತತ್ತ್ವಗಳನ್ನು ಜನಸಾಮಾನ್ಯರಿಗೆ ತಿಳಿಸುವುದೇ ಇದರ ಮುಖ್ಯ ಉದ್ದೇಶ. ಆದುದರಿಂದ ಇಲ್ಲಿ ಹೇಳಿರುವ ತತ್ತ್ವಗಳನ್ನು ವಿವರವಾಗಿ ಚರ್ಚಿಸಿಲ್ಲ; ಆದರೆ ಅವಶ್ಯಕತೆ ಬಿದ್ದಾಗ ಪ್ರಧಾನ ಮೂಲಪಾಠಗಳನ್ನು ಉದಾಹರಿಸಲಾಗಿದೆ. ಇವುಗಳ ಆಕರಗಳು, ವೇದಗಳು, ಉಪನಿಷತ್ತುಗಳು, ತಂತ್ರಗಳು, ಆಗಮಗಳು, ಪುರಾಣಗಳು, ಸಂಹಿತೆಗಳು, ಇತ್ಯಾದಿ. ಆದುದರಿಂದ ವಿವಿಧ ಆಕರಗಳಿಂದ ಉದಾಹರಿಸುವುದರಿಂದ, ಅಭಿಪ್ರಾಯ ಭೇದಗಳಿಗೆ ಅವಕಾಶವಿದೆ ಎಂಬ ವಿಷಯವನ್ನು ಗಮನಿಸಬೇಕು. ಆದರೂ ಕೂಡ ಲೇಖಕನು ಸಾಮಾನ್ಯವಾಗಿ ಸರ್ವಸಮ್ಮತವಾದ ಹಾಗೂ ಲೇಖಕನಿಗೆ, ಇದರ ಸಾರವೆಂದು ಮನದಟ್ಟಾದ ಅಭಿಪ್ರಾಯಗಳನ್ನು, ಈ ಶ್ರೇಷ್ಠ ಗ್ರಂಥಗಳು ಪ್ರತಿಪಾದಿಸಿರುವ ರೀತಿಯಲ್ಲಿ ಓದುಗರ ಮುಂದೆ ಇಟ್ಟಿದ್ದಾನೆ. ಹೀಗಾಗಿ ಪುಸ್ತಕ ಸಣ್ಣದಾಗಿರುವುದರಿಂದ ಎಲ್ಲ ವಿವರವಾದ ಚರ್ಚೆಗಳಿಗೆ ಇಲ್ಲಿ ಅವಕಾಶವಿಲ್ಲವಾಗಿದೆ ಎಂಬ ವಿಷಯವನ್ನು ಗಮನಿಸಬೇಕು. ಜೊತೆಗೆ ಈ ವಿವರಗಳ ಚರ್ಚೆಯೇ ಪ್ರಧಾನವಾಗಿ ಪ್ರಮುಖ ಅಂಶಗಳು ಗೌಣವಾಗುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ.

ಪ್ರಶ್ನೆ ೧ : ಶ್ರೀ ವಿದ್ಯೆ ಎಂದರೇನು? ಅದರ ಮುಖ್ಯ ಗುರಿ ಏನು?

ಉತ್ತರ : ಶ್ರೀ ಅಂದರೆ ಶ್ರೇಷ್ಠ;ವಿದ್ಯೆ ಅಂದರೆ ಜ್ಞಾನ ಅಥವಾ ಮಂತ್ರ. ಆದುದರಿಂದ ಇದು ಬ್ರಹ್ಮವಿದ್ಯೆ ಅಥವಾ ಈ ಕೆಳಗಿನ ನಾಲ್ಕು ಶ್ರೇಷ್ಠ ಮಂತ್ರಗಳು.

1. ಮೊದಲನೆಯದು ಗಾಯತ್ರಿ ಮಂತ್ರ; ಅದರಲ್ಲಿಯೂ ಇದರ ನಾಲ್ಕನೆಯ ಪಾದ.[1] ಇಲ್ಲಿ ಕಾಮಕಲಾವಿಲಾಸದ 18 ಮತ್ತು 19ನೆಯ ಸೂತ್ರಗಳನ್ನು ಓದುಗರು ಗಮನಿಸಬೇಕು. ಶ್ರೀವಿದ್ಯೆ ಯಾವುದೆಂಬುದನ್ನು ಇದು ತಿಳಿಸುತ್ತದೆ.
2. ಶ್ರೀ ಪಂಚದಶಿ
3. ಶ್ರೀ ಷೋಡಶಾಕ್ಷರಿ
4. ಶ್ರೀ ಬಾಲಾ ತ್ರಿಪುರಸುಂದರಿ

ಆದರೆ ಸಾಮಾನ್ಯವಾಗಿ ಶಕ್ತಿಮಾತೆಯೇ ಪ್ರಧಾನವಾಗಿರುವ ಮಹಾತ್ರಿಪುರ ಸುಂದರಿಯನ್ನು ಆರಾಧಿಸುವ ಮಂತ್ರವೇ ಇದು. ಇದರ ಮೂಲ ಬೀಜ ಶ್ರೀ. ಇದು

ಎಲ್ಲವುದರಲ್ಲಿಯೂ ಇರುತ್ತದೆ. ಗಾಯತ್ರಿಯನ್ನು ದ್ವಿಜತ್ವ ಸಾಧನೀ ವಿದ್ಯಾ ಎಂದೂ ಕರೆಯುತ್ತಾರೆ.[2] ಇದರಿಂದ ತಾತ್ವಿಕ ಜೀವನದ ಪುನರ್ಜನ್ಮವೂ ದೊರಕುತ್ತದೆ. ಸಚ್ಚಿದಾನಂದ ತತ್ವದೊಡನೆ ತಾದಾತ್ಮ್ಯ ಹೊಂದಬಹುದು.

ಇದರಲ್ಲಿ ಹಿಂದು ಗ್ರಂಥಗಳು ಹೇಳಿರುವ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳೂ ಸೇರಿವೆ. ಇದರಲ್ಲಿ ಮೊದಲ ಮೂರು, ನಾಲ್ಕನೆಯದಕ್ಕೆ ಎಡೆಮಾಡಿಕೊಡುತ್ತವೆ. ಆದುದರಿಂದ ಎಲ್ಲ ಸಾಧನೆಗಳ ಪ್ರಧಾನ ಗುರಿಯೇ ಮೋಕ್ಷ.

ಪ್ರಶ್ನೆ ೨: ಇದರ ತಾತ್ವಿಕ ನೆಲೆಯೇನು? ಅದನ್ನು ಪ್ರತಿಪಾದಿಸಿದವರು ಯಾರು?

ಉತ್ತರ : ಆದಿಶಂಕರಾಚಾರ್ಯರು ತಮ್ಮ ನಾಲ್ಕು ಮಹಾತತ್ವಗಳಲ್ಲಿ ಪ್ರತಿಪಾದಿಸಿರುವ ಅದ್ವೈತವೇ ಇದು. ಅದರ ಪರಮಗುರಿ ಏನೆಂದರೆ ನಾವು ನೋಡತಕ್ಕಂಥ ವಿಶ್ವವನ್ನು ಸೃಷ್ಟಿಸುವುದು; ಆಚಾರ್ಯ ಶಂಕರರ ಪ್ರಕಾರ ಇದು ಮಾಯಾವಾದ; ದ್ವೈತ, ವಿಶಿಷ್ಟಾದ್ವೈತ ಮತ್ತು ಸಾಂಖ್ಯರ ಪ್ರಕಾರ ಅದು ಆಪೇಕ್ಷಿಕ ಸತ್ಯ. ಇದಕ್ಕೆ ಕಾಮಕಲಾ ಎಂದೂ ಹೆಸರುಂಟು. ಆಗಮ ರಹಸ್ಯದ ಪ್ರಕಾರ ಕಾಮಕಲಾ ಎಂಬುದೇ ಶಿವ ಮತ್ತು ಶಕ್ತಿಯರ ಸಂಗಮ. ಇದು ಕಾಮಕಾಮೇಶ್ವರ ಮತ್ತು ಕಾಮಕಾಮೇಶ್ವರಿಯಲ್ಲಿ ಕಾಣಬರುತ್ತದೆ.[3] ಈ ವಿಷಯದಲ್ಲಿ ಹೆಚ್ಚಿನ ಮಾಹಿತಿ ತಿಳಿಯುವುದಕ್ಕೆ ಓದುಗನು ಕಾಮಕಲಾವಿಲಾಸ ಗ್ರಂಥವನ್ನು ಅಧ್ಯಯನ ಮಾಡಬೇಕು.

ಇದರ ಉಗಮವನ್ನು ವೈದಿಕ ಗ್ರಂಥಗಳಾದ ಋಕ್ ಮತ್ತು ಯಜುರ್ ವೇದಗಳಲ್ಲಿ, ತ್ರಿಪುರತಾಪಿನಿ ಉಪನಿಷತ್ತುಗಳಲ್ಲಿ, ಬ್ರಹ್ಮಾಂಡ ಪುರಾಣವೇ ಮೊದಲಾದವುಗಳಲ್ಲಿ ಕಾಣಬಹುದು. ವೈದಿಕ ಮತ್ತು ವಾಮಕಾಮೇಶ್ವರ ತಂತ್ರ, ಪ್ರಪಂಚಸಾರ, ಕಾಮಕಲಾವಿಲಾಸ ಮುಂತಾದ ತಾಂತ್ರಿಕ ಗ್ರಂಥಗಳಲ್ಲಿ ಹಾಗೂ ಸನಕ, ಸನಂದನ ಮುಂತಾದ ಆಗಮಗಳಲ್ಲಿ ಕಾಣಬರುವ ಸಮನ್ವಯ ಇದು. ಆದಿಶಂಕರ ಭಗವತ್ಪಾದರ ಶ್ರೇಷ್ಠ ಗ್ರಂಥ ಸೌಂದರ್ಯಲಹರಿಯಲ್ಲಿ ಪ್ರತಿಪಾದಿತವಾಗಿದ್ದು, ವಿಶ್ವಾಮಿತ್ರ, ವಸಿಷ್ಠ, ಅಗಸ್ತ್ಯ ಮತ್ತ ರಾಮಕೃಷ್ಣ ಮುಂತಾದ ಋಷಿಗಳಿಂದ ಅಭ್ಯಾಸಮಾಡಲ್ಪಟ್ಟ ತತ್ತ್ವವೇ ಇದು. ಅನೇಕ ಅದ್ವೈತ ಆಶ್ರಮಗಳಲ್ಲಿ ಸಾಂಪ್ರದಾಯಿಕವಾಗಿ ಅಧ್ಯಯನ ಮಾಡಲಾಗುವ ವಿಷಯವೇ ಇದು. ಇದನ್ನು ಬಾಣ, ಕಾಳಿದಾಸ ಮುಂತಾದ ಕವಿಗಳೂ ಶ್ಲಾಘಿಸಿದ್ದಾರೆ. ವ್ಯಾಸರು ಇದನ್ನು ಮಹಾಭಾರತದಲ್ಲಿ ಉಲ್ಲೇಖಿಸಿದ್ದಾರೆ. ಇದಕ್ಕೆ ಬೌದ್ಧ ಮತ್ತು ಜೈನರ ಧಾರ್ಮಿಕ ಗ್ರಂಥಗಳಲ್ಲಿಯೂ ಮಾನ್ಯತೆ ಉಂಟು.

ಪ್ರಶ್ನೆ ೩: ಇದನ್ನು ಅಭ್ಯಾಸಮಾಡಲು ಯಾರು ಅರ್ಹರು ?

ಉತ್ತರ : ಹಿಂದು ಧರ್ಮದಲ್ಲಿ ಹುಟ್ಟಿದ ಯಾರಾದರೂ ಇದನ್ನು ಆಚರಿಸಬಹುದು; ಅಥವಾ ಹಿಂದು ತತ್ತ್ವಗಳಲ್ಲಿ ಹಾಗೂ ಅದರ ಪ್ರಮುಖ ಅಂಗಗಳಲ್ಲಿ ನಂಬಿಕೆ ಇರುವ ಯಾರಾದರೂ ಇದನ್ನು ಅಭ್ಯಾಸಮಾಡಬಹುದು. ಪ್ರಮುಖ ಅಂಗಗಳು ಯಾವುವೆಂದರೆ

1. ವಿಶ್ವದ ಸೃಷ್ಟಿಗೆ ಕಾರಣವಿದೆ ಎಂಬುದು
2. ಸನಾತನ ಧರ್ಮ ಹಾಗೂ ಕರ್ಮಸಿದ್ಧಾಂತಗಳಲ್ಲಿ ನಂಬಿಕೆ.

ಇವೆರಡೂ ವೈದಿಕ ಮತ್ತು ಇತರ ಗ್ರಂಥಗಳಲ್ಲಿ ಪ್ರತಿಪಾದಿಸಲ್ಪಟ್ಟಿವೆ. ಇದರಲ್ಲಿ ನಂಬಿಕೆ ಇರುವ ಹಾಗೂ ಸರಿಯಾದ ಭಾವನೆ ಮತ್ತು ಗುರಿಯನ್ನು ಹೊಂದಿರುವವರು ಇದನ್ನು ಅಭ್ಯಾಸ ಮಾಡಬಹುದು.

ಪ್ರಶ್ನೆ ೪ : ಅದರ ಸರಿಯಾದ ಭಾವನೆಗಳೇನು ಮತ್ತು ಗುರಿಗಳೇನು?

ಉತ್ತರ : ನಿಮಗೆ ಅತ್ಯಂತ ಪ್ರಿಯವಾದ ಇಷ್ಟದೇವತೆಗೆ ನೀವು ಶರಣಾಗಿರಿ ಹಾಗೂ ತಾದಾತ್ಮ್ಯವನ್ನು ಹೊಂದುವುದರ ಮೂಲಕ ಆಕೆಯಿಂದ ಆಶೀರ್ವಾದ ಪಡೆಯಿರಿ. ಈ ಭಾವನೆಯು, ತೀವ್ರವಾಗಿದ್ದು ಫಲಿತಾಂಶವನ್ನು ನೀಡಲು ಸಮರ್ಥವಾಗಿರಬೇಕು. ಪಾರ್ಶ್ವತಃ ಸತ್ವಯುತವಾಗಿರುವ ಭಾವನೆಯು ಉಪಯೋಗಕ್ಕೆ ಬರುವುದಿಲ್ಲ. ಇದರಲ್ಲಿ ಇನ್ನೂ ಕೆಲವು ಅವಶ್ಯ ಗುಣಗಳಿವೆ. ಮನಸ್ಸು, ಶರೀರ ಮತ್ತು ಪಂಚೇಂದ್ರಿಯಗಳ ಮೇಲೆ ಹಿಡಿತ, ಅಡತಡೆಗಳಿದ್ದಾಗ್ಯೂ, ಅವುಗಳನ್ನು ಎದುರಿಸುವ ಸಾಮರ್ಥ್ಯ ಹಾಗೂ ಫಲ ದೊರಕುವವರೆಗೂ ಕಾಯುವ ತಾಳ್ಮೆ, ಇವುಗಳಿರಬೇಕು.

ಪ್ರಶ್ನೆ ೫ : ಇಷ್ಟ ಅಂದರೇನು?

ಉತ್ತರ : ಇಷ್ಟ ಅಂದರೆ 'ಅತ್ಯಂತ ಪ್ರಿಯವಾದ' ಎಂದರ್ಥ. ಇಲ್ಲಿ ನಾವು ಗಮನಿಸುತ್ತಿರುವ ಸಮಯಮತ ಎನ್ನುವ ಶ್ರದ್ಧೆಯಲ್ಲಿ ಅದನ್ನು ಗಮನಿಸುತ್ತೇವೆ. ಇದಕ್ಕೆ ಸಮಯಕಲಾ ಎಂಬ ಹೆಸರೂ ಉಂಟು.

ಸಮಯ ಎಂದರೆ ವೇದ ಎಂದೂ ಅರ್ಥ; ಕಲಾ ಎಂದರೆ ಅದರ ಹೊರರೂಪ. ದಕ್ಷಿಣಾಚಾರ ಎಂದೂ ಪ್ರಸಿದ್ಧವಾಗಿರುವ ಸಮಯಾಚಾರದಲ್ಲಿ ಅದನ್ನು ಪೂಜಿಸುವ ವಸ್ತು ಎಂದು ಹೇಳಿದೆ. ದಕ್ಷಿಣಾಚಾರದಲ್ಲಿ ಗಣಪತಿ, ಸುಬ್ರಹ್ಮಣ್ಯ ಮುಂತಾದ ದೇವತೆಗಳನ್ನು ಪೂಜಿಸಿದರೂ, ಇದರಿಂದ ಗುರಿಗಳಿಗೆ ಯಾವ ಬಾಧಕವೂ ಆಗುವುದಿಲ್ಲ.

ಪ್ರಶ್ನೆ ೬ : ಈ ವಿಷಯದಲ್ಲಿ ಯಾವ ತಾಂತ್ರಿಕತೆಯನ್ನು ಹೇಳಲಾಗಿದೆ ?

ಉತ್ತರ : ತಾಂತ್ರಿಕತೆಗಳು ಹಲವು. ಆದರೆ ಸರ್ವಸಮ್ಮತವಾದ ಅಂಗಗಳ ವಿಷಯ

ಇಲ್ಲಿ ಉಕ್ತವಾಗಿದೆ. ನಂಬಿಕೆ ಅಥವಾ ಭಕ್ತಿಯೇ ಇದರ ಮೂಲಕ್ರಿಯಾ ಶಕ್ತಿಯಾದುದರಿಂದ, ಭಕ್ತಿ ಎಂದರೇನು ತಿಳಿಯುವುದು ಅವಶ್ಯಕ. ಭಜನೆಯನ್ನು ಮಾಡುವ ಬುದ್ಧಿ ಅಥವಾ ಪೂಜಿಸುವ ಭಾವನೆಯೇ ಭಕ್ತಿ ಎಂಬುದು ಆದಿಶಂಕರರ ಅಭಿಪ್ರಾಯ. ಇದನ್ನು ಮುಂದುವರಿಸಿ 'ಸ್ವಸ್ವರೂಪಾನು ಸಂಧಾನ ಭಕ್ತಿರಿತ್ಯಭಿ ದೀಯತೆ' ಎಂದರೆ ಆತ್ಮನನ್ನೇ ಕುರಿತು ಧ್ಯಾನಿಸುವುದು ಎಂದು ಅವರು ಹೇಳಿದ್ದಾರೆ. ಅದು ಮುಖ್ಯವಾಗಿ ಮಾನಸಿಕವಾದದ್ದು. ಎಂದರೆ ಉಪಾಸನೆಗೆ ಅದೇ ಅತ್ಯಂತ ಪ್ರಮುಖ ಅಂಗ. ಉಪಾಸನೆ ಎಂದರೆ ಸಮೀಪದಲ್ಲಿ ಕುಳಿತುಕೊಳ್ಳುವುದು ಎನ್ನುವ ಅರ್ಥವೂ ಉಂಟು ('ಯಥಾಶಾಸ್ತ್ರಂ ಉಪಸ್ಯಾರ್ಥಸ್ಯ ವಿಷಯ ಕರಣೇನ ಸಮೀಪ್ಯಮುಪಾಗಮ್ಯ ತೈಲಧಾರವತ್ ಸಮಾನ ಪ್ರತ್ಯಯ ಪ್ರವಾಹೇನ ದೀರ್ಘ ಕಾಲಂ ಯದಾಸನಂ'). ಉಪಾಸನೆ ಎಂದರೆ ಇಷ್ಟದೇವತೆಗೆ ಒಂದು ರೂಪವನ್ನು ಕಲ್ಪಿಸಿ, ಅದರ ಸಮೀಪದಲ್ಲಿ ಕುಳಿತುಕೊಂಡು ಸಂಪ್ರದಾಯಕ್ಕೆ ಅನುಗುಣವಾಗಿ, ನಿರಂತರವಾಗಿ, ಯಾವ ರೀತಿ ಎಣ್ಣೆಯು ಸುರಿಯುತ್ತದೆಯೋ ಅದೇ ರೀತಿ ಅಡಚಣೆಯಿಲ್ಲದೆ ಇಷ್ಟದೇವತೆಯನ್ನು ಕುರಿತು ಪ್ರಜ್ಞೆಯ ರೂಪದಲ್ಲಿ ಧ್ಯಾನಿಸಬೇಕು(ಶಂಕರ ಭಗವತ್ಪಾದರ ಗೀತಾಭಾಷ್ಯಂ).

ಪ್ರಶ್ನೆ ೭ : ಪೂಜೆ ಎಂದರೇನು ?

ಉತ್ತರ : ಆಗಲೇ ಗಮನಿಸಿರುವಂತೆ ಗುರಿಯನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಮಂತ್ರದ ಮೂಲಕ ಪ್ರತಿಮೆ ಅಥವಾ ಚಿತ್ರಯುಕ್ತ ಶ್ರೀ ಚಕ್ರದ ಪೂಜೆ ಮಾಡಬೇಕು; ಮನಸ್ಸನ್ನು ನಿಯಂತ್ರಿಸಿ ಪ್ರಾಣಾಯಾಮವನ್ನು ಮಾಡಬೇಕು. ಈ ರೀತಿಯ ಪೂಜೆಗಳನ್ನು 8 ಮತ್ತು 20ನೆಯ ಪ್ರಶ್ನೆಗಳಿಗೆ ಉತ್ತರ ರೂಪದಲ್ಲಿ ನೀಡಲಾಗಿದೆ.

ಪ್ರಶ್ನೆ ೮ : ಅಂತರ್ಯಾಗ ಎಂದರೇನು ?

ಉತ್ತರ : ಮಾನಸಿಕ ಅಥವಾ ಆಂತರಿಕಪೂಜೆಯೇ ಅಂತರ್ಯಾಗ. ಬಾಹ್ಯಪೂಜೆಯೇ ಬಹಿರ್ಯಾಗ. ಕಾರ್ಯತಃ ಅವೆರಡೂ ಅಂತಹ ಭಿನ್ನತೆಯನ್ನು ತೋರುವುದಿಲ್ಲ. ಸೌಂದರ್ಯಲಹರಿಯ ಇಪ್ಪತ್ತೇಳನೆಯ ಶ್ಲೋಕ ಶ್ರೀ ಲೊಲ್ಲನ ಪ್ರಕಾರ 'ಜಪೋಜಲ್ಪ' ಎಂದು ಅದು ಆರಂಭವಾಗುತ್ತದೆ[4]. ಅದೇ ಜ್ಞಾನಯಜ್ಞದ ಸಾರ: ಇದರಲ್ಲಿ ಎಲ್ಲ ಕರ್ಮಗಳೂ ಪರಮಾತ್ಮನಿಗೇ ಅರ್ಪಿತವಾದವು; ಇಲ್ಲಿ ಪರಮಾತ್ಮ ಎಂದರೆ ಶ್ರೀ ತ್ರಿಪುರ ಸುಂದರಿ; ಅಂದರೆ ಇಲ್ಲಿ ಎಲ್ಲ ಕಾರ್ಯಗಳೂ, ಕರ್ಮಗಳೂ ಆ ದೇವಮಾತೆಯ ಹೆಸರಿನಲ್ಲಿ ನಡೆಯಬೇಕು. ಇದನ್ನು ತಿಳಿಯಲು ಓದುಗನು ಭಾವನೋಪನಿಷತ್ತನ್ನು ಗಮನಿಸಬೇಕು.[5] ಇಲ್ಲಿ ಧಾರ್ಮಿಕ ಕ್ರಿಯೆಗಳಿಗಿಂತ ಆಂತರಿಕ ಶ್ರದ್ಧೆಗೇ ಹೆಚ್ಚು ಪ್ರಾಧಾನ್ಯ. ಅಂತರ್ಯಾಗವೇ ಆಗಲಿ ಬಹಿರ್ಯಾಗವೇ ಆಗಲಿ, ಅದಕ್ಕೆ ನಾಲ್ಕು ಅಥವಾ ಆರು

ಅಂಗಗಳಿವೆ. ಇದು ಆ ಅಂಗದ ತಾತ್ವಿಕತೆಯಿಂದ ಹೊರಹೊಮ್ಮುತ್ತದೆ. ಅವು ಯಾವುದೆಂದರೆ 1) ಪರಮಾತ್ಮ ಮತ್ತು ಶ್ರೀಚಕ್ರ: 2) ಬ್ರಹ್ಮಾಂಡ ಮತ್ತು ಶ್ರೀ ಚಕ್ರ; 3) ಜೀವ ಹಾಗೂ ಆರು ಚಕ್ರಗಳೂ ಸೇರಿದ ವಿಶ್ವ ಮತ್ತು ಪಿಂಡಾಂಡ ; 4)ಅಕ್ಷರ ಅಥವಾ ನಿರ್ದಿಷ್ಟ ಚಿಹ್ನೆ ಅಂದರೆ ಅಕ್ಷರ ಪ್ರಪಂಚ ಹಾಗೂ ಪರಮಾತ್ಮ. 'ತತ್ಮಮಸಿ', 'ಸರ್ವಂ ಖಲ್ವಿದಂ ಬ್ರಹ್ಮ' ಮುಂತಾದ ಮಹಾವಾಕ್ಯಗಳನ್ನು ಕುರಿತು ಮನನ ಮಾಡುವುದು ಈ ಕ್ರಿಯೆಯ ಪ್ರಮುಖ ಅಂಶ. ಇದೇ ಏಕತೆಯ ನಾಲ್ಕು ವಿಷಯಗಳನ್ನು ಕುರಿತು ಧ್ಯಾನಿಸುವುದು. ಇದನ್ನೇ ಷಡ್ವಿಧೈಕ್ಯಂ ಎಂದೂ ಹೇಳುತ್ತಾರೆ. ಶ್ರೀಚಕ್ರ, ಮಾತೃಕೆಯರು, ವಿಶ್ವ, ಜೀವ, ಅದರ ಕಾರಣಭಾವ ಹಾಗೂ ಸಂಬಂಧಗಳು, ಇವುಗಳಿಂದ ಶ್ರೀ ಲಲಿತೆಯೊಡನೆ ತಾದಾತ್ಮ್ಯವನ್ನು ಪಡೆಯುವುದೇ ಇದು. ಇದನ್ನು ಶ್ರೀಲೊಲ್ಲ ಸೌಂದರ್ಯಲಹರಿಯ 41ನೆಯ ಶ್ಲೋಕದ ಮೇಲೆ ಬರೆದಿರುವ ಟೀಕೆಯಲ್ಲಿ ವಿವರಿಸಿದ್ದಾನೆ.[6] ಸಾಧಕನು ದಾರಿತಪ್ಪಿ ತನ್ನ ಗುರಿಯನ್ನು ಮರೆಯುವುದನ್ನು ಹಾಗೂ ಮಾರ್ಗವನ್ನೇ ಗುರಿಯೆಂದು ಭಾವಿಸುವುದನ್ನು ತಪ್ಪಿಸುತ್ತದೆ. ಗುಣಲಕ್ಷಣಗಳು ಏನೇ ಆದರೂ, ಇವುಗಳಿಗಿರುವ ಏಕತೆಯನ್ನು ಯಾವಾಗಲೂ ಮರೆಯಬಾರದು. ಮಾರ್ಗವು ದ್ವೈತವಾಗಿ ಕಂಡರೂ, ಗುರಿ ಎಂದರೆ ಮಾತೆ; ಅಂದರೆ ಎಲ್ಲದರಲ್ಲಿಯೂ ಪ್ರಸರಿಸಿರುವ ಏಕತೆ. ಮಾರ್ಗದಲ್ಲಿ ನೀವು ಮತ್ತು ನಿಮ್ಮ ಮಾತೆ ಕಾಣಬರುವುದರಿಂದ ಅದು ದ್ವೈತ; ಆದರೆ ನೀವು ಮಾತೆಯೊಡನೆ ತಾದಾತ್ಮ್ಯವನ್ನು ಹೊಂದುವುದರಿಂದ ಆ ಗುರಿಯು ಅದ್ವೈತ. ಆದರೆ ಕೆಲವು ಸಿದ್ಧಾಂತಗಳ ಪ್ರಕಾರ ಮಾರ್ಗ ಮತ್ತು ಗುರಿ ಎರಡೂ ಒಂದೇ ಎಂದು ಭಾವಿಸಿ ಅವುಗಳಲ್ಲಿ ಭಿನ್ನತೆಯನ್ನು ಗಮನಿಸುವುದಿಲ್ಲ. ಏಕೆಂದರೆ ನಿಮ್ಮ ಮನಸ್ಸು ಅದನ್ನು ಸಾಧಿಸುತ್ತದೆ. ಶ್ರೀಮಾತೆಯ ಮಾನಸಿಕ ಪೂಜೆಯ ಅನೇಕ ರೀತಿಗಳನ್ನು ಶಂಕರ ಭಗವತ್ಪಾದರು ತಿಳಿಸಿದ್ದಾರೆ.[7] ಅವುಗಳೇ 5, 16 ಮತ್ತು 64 ಉಪಚಾರ ಪೂಜೆಗಳು. ಅವರು ಈ ಮಾನಸಿಕ ಪೂಜೆಗಳನ್ನು ಕುರಿತು 16 ಅಥವಾ 64 ಶ್ಲೋಕಗಳನ್ನು ರಚಿಸಿದ್ದಾರೆ. ಸಾಧಕನ ಅಭಿಪ್ರಾಯಗಳು ಏನೇ ಇರಲಿ, ಮಾನಸಿಕ ಪೂಜೆಯು ಮನಸ್ಸಿಗೆ ಸಂಬಂಧಿಸಿದ್ದಾಗಿದ್ದು, ಕೆಲವು ವಿಷಯಗಳಲ್ಲಿ ಅದೇ ಹೆಚ್ಚು ಸಮರ್ಪಕವಾದುದು; ಮಾತೃಕಪೂಜೆಯ ಷೋಡಶೋಪಚಾರದಲ್ಲಿ ಕಲ್ಹಾರದಿಂದ ಆರಂಭವಾಗುವ ಶ್ಲೋಕದಲ್ಲಿ ಕಮಲ ಪುಷ್ಪದಿಂದ ಹಿಡಿದು ಕೆಂಪು ಕರವೀರದ ವರೆಗಿನ ಎಲ್ಲ ಪುಷ್ಪಗಳನ್ನೂ ಮಾನಸಿಕವಾಗಿ ಅರ್ಪಿಸುವ ಕ್ರಮವಿದೆ. ಒಬ್ಬ ಭಕ್ತನು ಈ ವಿವಿಧ ಪುಷ್ಪಗಳಲ್ಲಿ ಎಷ್ಟನ್ನು ತರಲು ಮತ್ತು ಅರ್ಪಿಸಲು ಸಾಧ್ಯ? ಆದುದರಿಂದ ಮಾನಸಿಕ ಪೂಜೆಯನ್ನು ಮಾತೆಗೆ ಅರ್ಪಿಸುವುದರಿಂದ ಉತ್ತಮವಾದ ಎಲ್ಲ ಹೂವುಗಳನ್ನು ಅರ್ಪಿಸಲು ಸಾಧ್ಯ. ಅಂತರ್ಯಾಗದ ಮೂಲಕ ಅತ್ಯುತ್ತಮತೆಯನ್ನು ನಿರಂತರವಾಗಿ ಸಾಧಿಸಿದರೆ, ಗುರಿಯನ್ನು ಸಾಧಿಸುವುದರ ಮೂಲಕ, ನೀವು ಗುರಿಯೊಡನೆ ಏಕತೆಯನ್ನು

ಪಡೆಯುತ್ತೀರಿ. ಇದು ಎಲ್ಲರಿಗೂ ಸಾಧ್ಯವಿಲ್ಲ; ಕೇವಲ ಶ್ರೇಷ್ಠ ಮಟ್ಟದ ಸಾಧಕರು ಮಾತ್ರ ಈ ಉನ್ನತ ಮಟ್ಟವನ್ನು ತಲುಪಬಲ್ಲರು, ಹಾಗೂ ಅದರಲ್ಲಿ ಇರಬಲ್ಲರು. ಅಂತಹವರು ಜೀವನ್ಮುಕ್ತರು; ಅವರಿಗೆ ಮತ್ತೆ ಹುಟ್ಟುಸಾವುಗಳ ಕಷ್ಟವಿಲ್ಲ(ಪುನರಾವರ್ತನೆ ಇಲ್ಲದ್ದು). ಸಾಧಕನು ಅಪರೂಪಕ್ಕೆ ತಾನು ತಾದಾತ್ಮ್ಯವನ್ನು ಪಡೆದಿದ್ದೇನೆ ಎಂಬ ಭಾವನೆಯನ್ನು ಹೊಂದಿ, ತಾನು ಶಾಶ್ವತವಾಗಿ ಜೀವನ್ಮುಕ್ತನಾಗಿದ್ದೇನೆ ಎಂಬ ಅಭಿಪ್ರಾಯಕ್ಕೆ ಒಳಗಾಗಬಾರದು ಎನ್ನುವ ದೃಷ್ಟಿಯಿಂದ ಈ ಮಾತನ್ನು ಇಲ್ಲಿ ಹೇಳಲಾಗಿದೆ.

ಪ್ರಶ್ನೆ ೯ : ಬಹಿರ್ಯಾಗ ಎಂದರೇನು?

ಉತ್ತರ : ಹೊರಗಿನಿಂದ ಕಾಣುವಂತೆ ಮಾಡುವ ಪೂಜೆಯೇ ಬಹಿರ್ಯಾಗ. ಇದರಲ್ಲಿ ಸಾಧಕನು ಪ್ರತಿಮೆ ಅಥವಾ ಜೀವಂತ ಮಾತೆಯಂತೆ ಶ್ರೀಚಕ್ರವನ್ನು ಕಲ್ಪಸೂತ್ರಗಳಲ್ಲಿ ಹೇಳಿರುವಂತೆ ಪೂಜಿಸುತ್ತಾನೆ. ಇಲ್ಲಿಯೂ ಸಾಧಕನು, ತಾನು ಮಾತೆಯನ್ನೇ ಪೂಜಿಸುತ್ತಿದ್ದೇನೆ ಎಂಬ ವಿಷಯವನ್ನು ಮರೆಯಬಾರದು. ಅದರಲ್ಲಿನ 'ನಾನು' ಎಂಬ ಭಾವನೆ 'ಸ್ವಾತ್ಮೈವ ಶ್ರೀ ಲಲಿತಾ' ಎನ್ನುವುದರೊಡನೆ ಏಕತೆಯನ್ನು ಪಡೆದಿರಬೇಕು. 5, 16 ಮತ್ತು 64 ಉಪಚಾರಗಳೊಡನೆ ಬಹಿರ್ಯಾಗವನ್ನು ಮಾಡಬಹುದು. ಸಾಧಕನು ಸ್ನಾನಮಾಡಿ, ನಿತ್ಯ-ನೈಮಿತ್ತಿಕ ಕಾರ್ಯಗಳನ್ನು ಹಾಗೂ ಇತರ ಕಾರ್ಯಗಳನ್ನುಪೂರೈಸಿ, ದೇವತೆಯ ಮುಂದೆ ಪದ್ಮಾಸನದಲ್ಲಿ ಕುಳಿತು, ತನ್ನ ಗುರು ಹೇಳಿಕೊಟ್ಟಿರುವ ರೀತಿಯಲ್ಲಿ ಪೂಜೆಯನ್ನು ಆರಂಭಿಸಬೇಕು. ಅವನಿಗೆ ಉಪದೇಶವಾಗಿರುವ ಮಂತ್ರಗಳನ್ನು ಪಠಿಸಬೇಕು. ಪಂಚೋಪಚಾರ ಪೂಜೆಯಲ್ಲಿ ಐದು ಬೀಜಾಕ್ಷರಗಳಾದ ಲ, ಹ, ಯ, ರ, ವ ಗಳ ಮೂಲಕ ಪೂಜಿಸಬೇಕು. ಇವು ಪಂಚಭೂತಗಳ ಸಂಕೇತಗಳು. ಇದರ ಮೂಲಕ ಗಂಧ, ಹೂವು, ಧೂಪ, ದೀಪ ಮತ್ತು ಅಮೃತಗಳನ್ನು ಅರ್ಪಿಸಬೇಕು. ಇಲ್ಲಿ ಸಾಧಕನು ಜೀವವೇ ಮೈವೆತ್ತಿದಂತಿರುವ ಪ್ರತಿಮೆಯ ಅಥವಾ ಶ್ರೀಚಕ್ರದ ಮುಂದೆ ಕುಳಿತುಕೊಂಡು ಸ್ತೋತ್ರ ಮತ್ತು ಇತರ ವಸ್ತುಗಳ ಮೂಲಕ ಪೂಜಿಸಬೇಕು. ಬಹಿರ್ಯಾಗ ಪೂಜೆಯು ಮಾತೆಯ ದ್ವಾರ ಪೂಜೆಯಿಂದ ಆರಂಭವಾಗಿ, ಪೀಠ ಅಥವಾ ಸಿಂಹಾಸನ, ನ್ಯಾಸಗಳ ಮೂಲಕ ಪ್ರತಿಮೆಗೆ ಜೀವಕಳೆ ತುಂಬಿ, ಪ್ರತಿಯೊಂದು ಅಂಗವನ್ನೂ ಪ್ರತ್ಯೇಕವಾಗಿ ಪೂಜಿಸಬೇಕು. ಅದು ಶ್ರೀಚಕ್ರವಾಗಿದ್ದರೆ ವಿವಿಧ ಆವರಣಗಳ ಪೂಜೆಯನ್ನು ಮಾಡಬೇಕು. ಶ್ರೀಚಕ್ರದ ಆವರಣಗಳು ಗರ್ಭಗುಡಿಯನ್ನು ಹಾಗೂ ಒಳಗಿನ ಬಿಂದುವನ್ನು ಒಳಗೊಂಡಿರುತ್ತವೆ. ಈ ರೀತಿಯ ಶ್ರೀಚಕ್ರ ಪೂಜೆಯನ್ನು ಮಹಾಯಾಗ ಎಂದೂ ಕರೆಯುತ್ತಾರೆ.

ಪ್ರಶ್ನೆ 10 : ಮಂತ್ರ ಎಂದರೇನು ?

ಉತ್ತರ : ಅದು ದೇವತೆಯನ್ನು ಸಂಕೇತಿಸುವ ಒಂದು ಶಬ್ದ. ಅದರ ಪದಗಳಿಗೆ ಅಥವಾ ಅಕ್ಷರಗಳಿಗೆ ಅರ್ಥವಿರಬಹುದು ಅಥವಾ ಇಲ್ಲದೇ ಇರಬಹುದು. ಅದರ ಬಗ್ಗೆ ಧ್ಯಾನಿಸುವುದರಿಂದ ಅದು ಕಾಪಾಡುತ್ತದೆ. ಆದುದರಿಂದ ಅದಕ್ಕೆ ಮಂತ್ರ ಎಂದು ಹೆಸರು (ಮನನೇನ ತ್ರಾಯತಿ ಇತಿ ಮಂತ್ರಃ). ಅದನ್ನು ಗಟ್ಟಿಯಾಗಿ ಉಚ್ಚರಿಸದೆ, ನಿಶ್ಯಬ್ದವಾಗಿ, ಮನಸ್ಸನ್ನು ಅದರ ಅರ್ಥದ ಕಡೆ ಇರಿಸಿಕೊಂಡು, ಅನೇಕ ಸಾರಿ ಅದನ್ನು ಪುನಃ ಪುನಃ ಮನನ ಮಾಡಬೇಕು. ಪ್ರತಿಯೊಂದು ಮಂತ್ರಕ್ಕೂ ಒಂದು ಛಂದಸ್ಸು. ಒಬ್ಬ ಋಷಿ, ಒಂದು ಬೀಜಾಕ್ಷರ, ಒಂದು ಶಕ್ತಿಯ ಅಕ್ಷರ ಹಾಗೂ ಒಂದು ಮುಖ್ಯ ಅಕ್ಷರ (ಕೀಲಕ ನ್ಯಾಸ) ಗಳಿರುತ್ತವೆ. ಅದರ ಮೇಲೆ ಮನನ ಮಾಡಲು ಅನುಕೂಲವಾಗುವಂತೆ ದೇವತೆಯನ್ನು ಸಂಕೇತಿಸುವ ಧ್ಯಾನಶ್ಲೋಕಗಳಿರುತ್ತವೆ. ಸಾಧಕನು ಈ ಎಲ್ಲ ವಿಷಯಗಳನ್ನೂ ಚೆನ್ನಾಗಿ ತಿಳಿದುಕೊಂಡಿರಬೇಕು.

ಈ ಎಲ್ಲ ವಿಷಯಗಳನ್ನೂ ಪರಿಚಯಿಸುವ ಸಲುವಾಗಿ, ಇಲ್ಲಿ ಗಾಯತ್ರೀ ಮಂತ್ರದ ಅರ್ಥವನ್ನು ಉದಾಹರಣೆಯಾಗಿ ಆರಿಸಿಕೊಳ್ಳಲಾಗಿದೆ.[9]

"ಮೂರು ಲೋಕಗಳನ್ನೂ ಬೆಳಗುವ ಆ ದಿವ್ಯ ಜ್ಯೋತಿಯನ್ನು ಕುರಿತು ಧ್ಯಾನಿಸುತ್ತೇನೆ. ಅದೇ ಜ್ಯೋತಿಯು ಎಲ್ಲೆಡೆಯೂ ಬೆಳಗಿ ನಮ್ಮೆಲ್ಲರ ಒಳಗೂ ದೇದೀಪ್ಯಮಾನವಾಗಿದೆ. ಈ ಜ್ಯೋತಿಯು ನಮ್ಮ ಹೃದಯ ವೈಶಾಲ್ಯಕ್ಕೆ ನೆರವಾಗಿ ನಮ್ಮೆಲ್ಲರ ಬುದ್ಧಿಯು ಬೆಳಗುವಂತೆ ಮಾಡಿ ಲೋಕ ಸಂಗ್ರಹ ಕಾರ್ಯದಲ್ಲಿ ನಾವು ತೊಡಗುವಂತೆ ಮಾಡಲಿ. ವೇದಗಳು ಮತ್ತು ಇತರ ಪವಿತ್ರ ಪಠ್ಯಗಳಲ್ಲಿ ಹೇಳಿರುವಂತೆ, ಇದು ನಮ್ಮನ್ನು ಪಾಪಗಳಿಂದ ಮತ್ತು ದೌರ್ಬಲ್ಯಗಳಿಂದ ಮುಕ್ತಿಗೊಳಿಸಲಿ. ಸೃಷ್ಟಿ, ಸ್ಥಿತಿ ಮತ್ತು ಲಯಗಳಿಗೆ ಕಾರಣನಾದ ತ್ರಿಮೂರ್ತಿಗಳು ನಮಗೆ ಆಶ್ರಯವಾಗಲಿ. ಈ ಎಲ್ಲ ಉಪಾಧಿಗಳನ್ನು ಮೀರಿರುವ ಆ ಮಾತೆಯು ನಮ್ಮನ್ನು ಕಾಪಾಡಲಿ".

ಪ್ರಶ್ನೆ ೧೧: ಮಂತ್ರದ ಉಗಮವೇನು?

ಉತ್ತರ : ಪ್ರಾಚೀನ ಕಾಲದಲ್ಲಿ ಋಷಿಗಳು ಶ್ರೇಷ್ಠ ತತ್ವದೊಡನೆ ಅಂದರೆ ಪರಮಾತ್ಮ ತತ್ವದೊಡನೆ ಸಂಪರ್ಕವಿಟ್ಟುಕೊಂಡಿದ್ದರು ಹಾಗೂ ಅದರ ದರ್ಶನವನ್ನೂ ಅಕ್ಷರ ಅಥವಾ ಪದದ ಮೂಲಕ ಪಡೆದಿದ್ದರು. ಅದೇ ಮಂತ್ರ; ಈ ಋಷಿಗಳೇ ಮಂತ್ರದ ದ್ರಷ್ಟಾರರೆನಿಸಿಕೊಂಡರು. ಈ ಮಂತ್ರವೇ ದೇವತೆಯನ್ನು ಸಾಕ್ಷಾತ್ಕಾರಗೊಳಿಸುತ್ತದೆ.

ಪ್ರಶ್ನೆ೧೨ : ಶಬ್ದವು ದೇವತೆಯ ಮೂರ್ತಿಯನ್ನು ಹೇಗೆ ಸಾಕ್ಷಾತ್ಕಾರ ಗೊಳಿಸುತ್ತದೆ ?

ಉತ್ತರ : ಪ್ರತಿಯೊಂದು ಅಕ್ಷರವೂ ಒಂದು ಶಬ್ದ. ಅರ್ಥವಿರುವ ಪ್ರತಿಯೊಂದು ಶಬ್ದವೂ ವಾಕ್, ಅಥವಾ ವಾಗ್ದೇವಿ. ಶಾಸ್ತ್ರ ಗ್ರಂಥಗಳು ನಾಲ್ಕು ರೀತಿಯ ವಾಕ್ ಅನ್ನು ವರ್ಣಿಸುತ್ತವೆ.[10] ಇವು ಶ್ರೇಷ್ಠ ತತ್ತ್ವದ ವಿವಿಧ ರೂಪಗಳನ್ನು ಪ್ರತಿನಿಧಿಸುತ್ತವೆ. ಮೊದಲನೆಯದು ವೈಖರೀ. ಇದರಲ್ಲಿ ಶಬ್ದವನ್ನು ಹೇಳಿದಾಗ ಅದು ಅರ್ಥವನ್ನು ತಿಳಿಸುತ್ತದೆ. ಮುಂದಿನದೇ ಮಧ್ಯಮ; ಇದರಲ್ಲಿ ಅಕ್ಷರಗಳು ಉಚ್ಚರಿಸಲ್ಪಡುವುದಿಲ್ಲ. ಇದಕ್ಕೂ ಸೂಕ್ಷ್ಮವಾದದ್ದು ಪಶ್ಯಂತಿ. ಇದರಲ್ಲಿ ಅಕ್ಷರವನ್ನು ಮನಸ್ಸಿನ ಮೂಲಕ ತಿಳಿಯಬೇಕಾಗುತ್ತದೆ. ನಾಲ್ಕನೆಯದು ಪರಾವಾಕ್; ಇದು ಅತ್ಯಂತ ಸೂಕ್ಷ್ಮವಾಗಿದ್ದು, ಹಿಂದಿನ ಮೂರು ಅಕ್ಷರಗಳನ್ನು ಸೃಷ್ಟಿಸುತ್ತದೆ. ಅಂದರೆ ಈ ನಾಲ್ಕು ವಾಕ್‌ಗಳು ಅತ್ಯಂತ ಶ್ರೇಷ್ಠ ತತ್ವದಲ್ಲಿ ಕಾಣಿಸುವ ಅಥವಾ ಕಾಣಿಸದೇ ಇರುವ ಶಕ್ತಿಯನ್ನು ಹೊಂದಿರುತ್ತವೆ. ಹೀಗೆ ಒಂದು ಅಕ್ಷರ ಅಥವಾ ಅದರ ಗುಂಪುಗಳಲ್ಲಿ ಒಂದು ರೂಪವನ್ನು ಸೃಷ್ಟಿಸುವ ಶಕ್ತಿ ಇರುತ್ತದೆ. ಈ ಶಕ್ತಿಯನ್ನೇ ಶಬ್ದಬ್ರಹ್ಮ ಎಂದು ಕರೆಯಲಾಗಿದೆ. ಪ್ರತಿಯೊಂದು ಹೆಸರಿಗೂ (ನಾಮ) ಒಂದು ರೂಪವಿದೆ. ರಾಮ ಎಂದು ಹೇಳಿದ ತಕ್ಷಣ ನಮ್ಮ ಮನಸ್ಸು ವಾಲ್ಮೀಕಿ ಪ್ರಸ್ತುತ ಪಡಿಸಿರುವ ಶ್ರೀರಾಮನ ಕಡೆಗೆ ತೆರಳುತ್ತದೆ. ವಸ್ತು ನಿಷ್ಠವಾದದಲ್ಲಿಯೂ ಇದು ಹಾಗೆಯೇ ಇರುತ್ತದೆ. ಹೀಗಾಗಿ ಅನಂತಕ್ಕೂ ಒಂದು ಹೆಸರಿದೆ. ಓಂ ಎನ್ನುವ ಅಕ್ಷರ ಇದೇ ಗುಂಪಿಗೆ ಸೇರುತ್ತದೆ. ಹೀಗೆ ಪ್ರತಿಯೊಂದೂ ಒಬ್ಬ ಋಷಿ ಅಥವಾ ದ್ರಷ್ಟಾರನಿಗೆ ಮಾತ್ರ ಇದನ್ನು ಅರಿಯುವ ಶಕ್ತಿ ಇರುತ್ತದೆ. ಪ್ರತಿಯೊಂದು ಶ್ಲೋಕದಲ್ಲಿಯೂ ಈ ರೀತಿಯ ಶಕ್ತಿಯಿದೆ ಎಂಬುದು ಸೌಂದರ್ಯಲಹರಿಯನ್ನು ಅಧ್ಯಯನ ಮಾಡಿದವರಿಗೆ ತಿಳಿಯುತ್ತದೆ. ಒಂದು ಸಿದ್ಧಾಂತದ ಪ್ರಕಾರ ಗಣಪತಿಯಂತಹ ಪುರುಷ ದೇವತೆಗಳಿಗೆ ಮಂತ್ರವು ಅನ್ವಯವಾಗುತ್ತದೆ; ಶ್ರೀಲಕ್ಷ್ಮಿಯಂತಹ ಸ್ತ್ರೀ ದೇವತೆಯಾದರೆ ಆಗ ಅದಕ್ಕೆ ವಿದ್ಯಾ ಎಂದು ಹೆಸರು. ಮಂತ್ರಗಳು ವೈವಿಧ್ಯಮಯವಾಗಿದ್ದು, ಕೆಲವಲ್ಲಿ ಒಂದೇ ಅಕ್ಷರವಿದ್ದರೆ, ಮತ್ತೆ ಕೆಲವಲ್ಲಿ ಪದಗಳಿದ್ದರೆ, ಇನ್ನು ಕೆಲವಲ್ಲಿ ಅಕ್ಷರಗಳ ಮಾಲೆಯೇ ಇರುತ್ತದೆ.

ಪ್ರಶ್ನೆ ೧೩: ಶ್ರೀಚಕ್ರ ಎಂದರೇನು? ಈ ಸಾಧನೆಯಲ್ಲಿ ಅದರ ಸ್ಥಾನವೇನು ಮತ್ತು ಮೂರು ಪ್ರಸ್ತಾರಗಳೆಂದರೇನು?

ಉತ್ತರ : ಈ ಪುಸ್ತಕದ ಮೊದಲ ಪುಟದಲ್ಲಿ ಕಾಣಿಸಿರುವ ಶ್ರೀಚಕ್ರವು ಪವಿತ್ರವಾದದ್ದು ಮತ್ತು ಶ್ರೀಲಲಿತಾ ಉಪಾಸನೆಯಲ್ಲಿ ಪ್ರಧಾನವಾದದ್ದು. ಅದು ಶಕ್ತಿ ಪೂಜೆಯೊಡನೆ ಸೇರಿತ್ತು ಎಂಬುದು ಉಪನಿಷತ್ತುಗಳು, ಪುರಾಣಗಳು ಹಾಗೂ ತಂತ್ರಗಳಿಂದ ತಿಳಿದುಬರುತ್ತದೆ. ತ್ರಿಪುರ ಮತ್ತು ಅರುಣೋಪನಿಷತ್ತು, ಬ್ರಹ್ಮಾಂಡ ಪುರಾಣ, ವಾಮಕೇಶ್ವರ ಮತ್ತು ರುದ್ರಯಾಮಲತಂತ್ರ, ಶ್ರೀಗೌಡಪಾದರ ಸುಭಗೋದಯ ಮುಂತಾದ ಗ್ರಂಥಗಳಲ್ಲಿಯೂ ಇದರ ವಿಷಯ ಚರ್ಚಿತವಾಗಿದೆ. ಓಂ ಎನ್ನುವುದು

ಬ್ರಹ್ಮನ್‌ನ ಸಂಕೇತವಾಗಿದ್ದಂತೆ, ಶ್ರೀ ಚಕ್ರಯಂತ್ರವು ಶ್ರೀ ಲಲಿತೆಯ ಪವಿತ್ರ ಸಂಕೇತವಾಗಿದೆ. ಶಂಕರ ಭಗವತ್ಪಾದರು ತಮ್ಮ ಸೌಂದರ್ಯಲಹರಿಯ ಮೊದಲ ನಾಲ್ಕು ಶ್ಲೋಕಗಳಲ್ಲಿ ಶ್ರೀಚಕ್ರದ ಸಂಕೇತಾರ್ಥ ಮತ್ತು ಅದರ ಪ್ರಾಮುಖ್ಯವನ್ನು ವಿವರಿಸಿರುವುದಲ್ಲದೆ, ಸಮಯಾಚರದ[11] ಹಲವು ಅಂಗಗಳನ್ನು ಪ್ರಸ್ತಾಪಿಸಿದ್ದಾರೆ. ಸೌಂದರ್ಯಲಹರಿಯ ಮೇಲೆ ಟೀಕೆಯನ್ನು ಬರೆದಿರುವ ಕೈವಲ್ಯಾಶ್ರಮನು ಶ್ರೀ ಚಕ್ರವನ್ನು ನಿಖರವಾಗಿ ರಚಿಸುವ ಮಾರ್ಗವನ್ನೂ ದೀರ್ಘವಾಗಿ ಚರ್ಚಿಸಿದ್ದಾನೆ. ಶ್ರೀ ಚಕ್ರವನ್ನು ಸಾಮಾನ್ಯವಾಗಿ ಚಿನ್ನ, ಬೆಳ್ಳಿ, ತಾಮ್ರದ ತಗಡುಗಳ ಮೇಲೆ ಅಥವಾ ಸ್ಫಟಿಕ ಇಲ್ಲವೆ ಶಿಲೆಯ ಮೇಲೆ, ಅಥವಾ ಭೂರ್ಜ ಪತ್ರದ ಮೇಲೆ ಕೆತ್ತಲಾಗುತ್ತದೆ. ಕೆಲವು ಸಾರಿ ಇದನ್ನು ತ್ರಿಮುಖ ಗಾತ್ರದಲ್ಲಿ ಒಂಬತ್ತು ಆವರಣಗಳನ್ನು ಸಂಕೇತಿಸುವಂತೆ ಕಿರೀಟದ ಮಾದರಿಯಲ್ಲಿಯೂ ರಚಿಸಲಾಗುತ್ತದೆ. ಶ್ರೀ ದೇವಿಯನ್ನು ಪೂಜಿಸುವ ದೇವಾಲಯಗಳಲ್ಲಿ ಹಾಗೂ ಮಠಗಳಲ್ಲಿ ವಾಮಕೇಶ್ವರ ತಂತ್ರದಲ್ಲಿ ಉಲ್ಲೇಖಿತವಾಗಿರುವಂತೆ ಐದು ತ್ರಿಕೋನಗಳು ಕೆಳಮುಖವಾಗಿಯೂ ಮತ್ತು ನಾಲ್ಕು ತ್ರಿಕೋನಗಳು ಮೇಲ್ಮುಖವಾಗಿರುವಂತೆಯೂ ರಚಿಸಲಾಗುತ್ತದೆ. ಪರಮಾತ್ಮನು ವಿಶ್ವವನ್ನು ಸೃಷ್ಟಿಸಿರುವುದರ ಸಂಕೇತವಾಗಿಯೂ, ಇದನ್ನು ಸೃಷ್ಟಿಕ್ರಮ ಚಕ್ರ ಎಂದೂ ಕರೆಯಲಾಗುತ್ತದೆ. ಈ ಶ್ರೀಚಕ್ರವನ್ನು ತಲೆಕೆಳಗಾಗಿ ಇಟ್ಟರೆ ಅದನ್ನು ಸಂಹಾರಕ್ರಮ ಚಕ್ರ ಎಂದು ಕರೆಯುತ್ತಾರೆ. ಇದು ವಿಶ್ವದ ಲಯವನ್ನು ಸೂಚಿಸುತ್ತದೆ. ಇದನ್ನು ಕೌಲಾಚಾರದವರು ಪೂಜಿಸುತ್ತಾರೆ.

ಮೇಲ್ನೋಟಕ್ಕೆ ಶ್ರೀಚಕ್ರದಲ್ಲಿ ಮಧ್ಯದಲ್ಲಿ ಒಂದು ಬಿಂದು, ಅನೇಕ ತ್ರಿಕೋನಗಳು, ಕೋನಗಳು, ದಳಗಳು, ಮೇಖಲಾ ಎಂದು ಕರೆಯಲಾಗುವ ವೃತ್ತಗಳು ಮತ್ತು ಮೂರುಗೆರೆಗಳಿಂದ ಮಾಡಿದ ಚೌಕ(ಭೂಪುರ) ಗಳಿರುತ್ತವೆ. ಜೊತೆಗೆ ಎರಡು ಗೆರೆಗಳ ಸಂಧಿಗಳು ಹಾಗೂ ಮೂರು ಗೆರೆಗಳು ಕೊಡುವ ಮರ್ಮಗಳು ಕಾಣಬರುತ್ತವೆ. ಸೂಕ್ಷ್ಮವಾಗಿ ಗಮನಿಸಿದರೆ ಆವರಣ ಎಂದು ಕರೆಯಲಾಗುವ ಒಂಬತ್ತು ಭಾಗಗಳು ಕಾಣಿಸುತ್ತವೆ. ಎಲ್ಲೆಯಿಲ್ಲದ ನಿರಾವರಣ ಚೈತನ್ಯ, ಅಪರಿಮಿತ ಪ್ರಜ್ಞಾರೂಪ ಅಥವಾ ಸತ್ ಜಗತ್ತಿನ ಸೃಷ್ಟಿಯಲ್ಲಿ ಈ ರೂಪಗಳನ್ನು ಧರಿಸಿರುವಂತೆ ತೋರುತ್ತದೆ. ಶ್ರೇಷ್ಠತಮ ಸತ್ಯವಾದ ಸತ್-ಚಿತ್-ಆನಂದವು ನಾಮ-ರೂಪಗಳ ಭೌತಿಕ ಜಗತ್ತಿಗೆ ಒಂಬತ್ತು ಹಂತಗಳಲ್ಲಿ ಇಳಿದುಬರುತ್ತಿರುವಂತೆ ಇದನ್ನು ಸಂಕೇತಿಸಲಾಗಿದೆ. ಇದೇ ಶ್ರೀಲಲಿತೆಯ ಸಂಕೇತವಾದ ಶ್ರೀ ಚಕ್ರ. ಈ ನವಾವರಣಗಳು ಸತ್ ಅನ್ನು ಒಂದು ಎಲ್ಲೆಯೊಳಗೆ ಬಂಧಿಸುವುದಲ್ಲದೆ ಅದನ್ನು ಮುಚ್ಚಿ ಬಿಡುತ್ತವೆ. ಮಧ್ಯದಿಂದ ಅವುಗಳನ್ನು ಗಮನಿಸಿದರೆ; 1) ಶ್ರೀಚಕ್ರದ ಮಧ್ಯದಲ್ಲಿರುವ ಒಂದು ಬಿಂದು ಅಥವಾ ವೃತ್ತ: 2) ಸಂಖ್ಯೆ 1 ನ್ನು ಆವರಿಸಿರುವ ಮೊದಲನೆಯ ತ್ರಿಕೋನ; 3) ಮೇಲಿನ 2ನೆಯ ತ್ರಿಕೋನವನ್ನು

ಸುತ್ತುವರಿದ ಅಷ್ಟಕೋನ; 4) ಮೇಲಿನ 3ನೆಯ ಅಷ್ಟಕೋನವನ್ನು ಸುತ್ತುವರಿದ ಹತ್ತು ಕೋನ ಅಥವಾ ಹತ್ತು ಅರೆಗಳನ್ನು ಹೊಂದಿರುವ ಅಂತರ್‌ದಶಾರ; 5) ಮೇಲಿನ 4ನೆಯ ಅಂತರ್‌ದಶಾರವನ್ನು ಸುತ್ತುವರಿದ ಹೊರಕ್ಕೆ ಮುಖ ಮಾಡಿರುವ ಹತ್ತು ಕೋನಗಳ ಬಹಿರ್‌ದಶಾರ; 6) ಮೇಲಿನ 5ನೆಯದನ್ನು ಸುತ್ತುವರಿದ ಹದಿನಾಲ್ಕು ಅರೆಗಳ ಚತುರ್ದಶಾರ; 7) ಆರನೆಯ ಮತ್ತು ಮುಂದಿನ ವೃತ್ತವನ್ನು ಸುತ್ತುವರಿದಿರುವ ಅಷ್ಟದಳ ಪದ್ಮದ ರೀತಿಯ ವೃತ್ತ; 8) ನಂತರ ಹದಿನಾರು ದಳಗಳ ಷೋಡಶದಳ ಪದ್ಮ. ಇದು ಮೇಲಿನ ಏಳನೆಯ ವೃತ್ತದ ಹಾಗೂ ಹೊರಗಿನ ಮೇಖಲಾತ್ರಯ ಎಂದು ಕರೆಯಲಾದ ಮೂರು ವೃತ್ತಗಳ ಮಧ್ಯದಲ್ಲಿದೆ: 9) ನಂತರ ಮೂರು ಗೆರೆಗಳ ಪ್ರತಿಯೊಂದು ಪಾರ್ಶ್ವದಲ್ಲಿಯೂ ಪ್ರವೇಶ ಇರುವ ಚೌಕಾಕಾರದ ಭೂರೂಪ. ಇದೇ ಶ್ರೀಚಕ್ರದ ಹೊರವಲಯದ ಒಂಬತ್ತನೆಯ ಅಂಗ. ಶ್ರೀಚಕ್ರವು, ಶ್ರೀ ಲಲಿತೆಯ ಸಂಕೇತ ಎಂಬುದನ್ನು ಜ್ಞಾಪಿಸಿಕೊಂಡಾಗ, ಅದು ಇಡೀ ಜಗತ್ತಿನ ನಮ್ಮ ಅನುಭವ, ಶಕ್ತಿ ಮತ್ತು ಸತ್ ಅನ್ನು ಪ್ರತಿನಿಧಿಸುತ್ತದೆ. ನವಾವರಣಗಳು ಮತ್ತು ಇತರ ಅಂಗಗಳನ್ನು ಹೊಂದಿರುವ ಶ್ರೀಚಕ್ರವು, ಶ್ರೀ ಲಲಿತೆಯ ಸಂಕೇತವಾಗಿದ್ದು ಬ್ರಹ್ಮಾಂಡ, ಪಿಂಡಾಂಡ ಮತ್ತು ಮಾತೃಕ (ಅಕ್ಷರ)ಗಳನ್ನು ಪ್ರತಿನಿಧಿಸುತ್ತದೆ.

ಕೆಳಮುಖವಾಗಿರುವ ಐದು ತ್ರಿಕೋನಗಳು ಶಕ್ತಿಯನ್ನೂ, ಮೇಲ್ಮುಖ ವಾಗಿರುವ ನಾಲ್ಕು ತ್ರಿಕೋನಗಳು ಶಿವತತ್ವವನ್ನು ಪ್ರತಿನಿಧಿಸುತ್ತವೆ.

ಸಮಯಮತದಲ್ಲಿ ನವಾವರಣಗಳ ಸಂಕೇತ ಹಾಗೂ ಅವುಗಳನ್ನು ಗುರುತಿಸುವ ಬಗೆಗೆ ಪೂರ್ಣವಾದ ಹಾಗೂ ವಿವರವಾದ ವರ್ಣನೆಗಳಿವೆ. ಪ್ರತಿಯೊಂದು ಆವರಣಕ್ಕೂ ಒಂದು 1) ಆಕಾರ (ಬಿಂದು ಅಥವಾ ತ್ರಿಕೋನ); 2) ಸರ್ವಾಚಕ್ರ ಅಥವಾ ಮಯಚಕ್ರ ಇತ್ಯಾದಿ ಹೆಸರುಗಳು; 3) ಆಕಾಶತತ್ವವೇ ಮುಂತಾದ ತತ್ವಗಳು ; 4) ಸ್ಥಾಯಿ, ಶಾಂತ, ರೌದ್ರ ಮುಂತಾದ ಮಾನಸಿಕ ಸ್ಥಿತಿಗಳು; 5) ಮಧುರ ಮುಂತಾದ ರಸಗಳು; 6) ಮಂತ್ರದ ಅಕ್ಷರ ಅಥವಾ ಮಾತೃಕ; 7) ಮೂಲಾಧಾರವೇ ಮುಂತಾದ ಶರೀರದ ಪದ್ಮಗಳು; 8) ಪ್ರಧಾನ ದೇವತೆ; ಉದಾಹರಣೆಗೆ ಬೈಂದವ ಸ್ಥಾನ ಅಥವಾ ಆಂತರಿಕ ಬಿಂದು; ಚಿತ್‌ಕಲಾ ರೂಪದಲ್ಲಿರುವ ಸಹಸ್ರಧಾರಾ ಪದ್ಮದ ಸ್ವರೂಪದಲ್ಲಿರುವ ಶ್ರೀ ಲಲಿತೆಯ ಸಹಸ್ರಧಾರಾ ಪದ್ಮ; ಬಿಂದುವು ಶ್ರೀಚಕ್ರದೊಡನೆ ಸಂಬಂಧ ಹೊಂದದೇ ಇರುವುದು ಗಮನಿಸಬೇಕಾದ ಸಂಗತಿ. ಮೊದಲನೆಯ ತ್ರಿಕೋನವು ಆಜ್ಞಾಚಕ್ರವನ್ನು ಪ್ರತಿನಿಧಿಸಿದರೆ ಅಷ್ಟಕೋನವು ವಿಶುದ್ಧಿಯನ್ನೂ, ಒಳಗಿನ ಹತ್ತು ಅರೆಗಳ ಚಕ್ರವು ಅನಾಹತವನ್ನೂ, ಹೊರಗಿನ ಹತ್ತು ಅರೆಗಳ ಚಕ್ರವು ಮಣಿಪುರವನ್ನೂ, ಹದಿನಾಲ್ಕು ಅರೆಗಳ ಚಕ್ರವು ಸ್ವಾಧಿಷ್ಠಾನ ಮತ್ತು ಭೂಪುರಗಳನ್ನೂ, ಹೊರಗಿನ ಚೌಕವು ಮೂಲಾಧಾರವನ್ನೂ ಪ್ರತಿನಿಧಿಸುತ್ತವೆ. ಅದಕ್ಕಿರುವ ನಾಲ್ಕು ಬಾಗಿಲುಗಳೇ ನಾಲ್ಕು ವೇದಗಳು. ಈ ಒಂಭತ್ತು ಚಕ್ರಗಳು ಪರಾ,

ಪಶ್ಯಂತಿ, ಮಧ್ಯಮ ಮತ್ತು ವೈಖರೀ ಎಂಬ ನಾಲ್ಕು ಶಬ್ದ ಅಥವಾ ನಾದಗಳನ್ನು ಪ್ರತಿನಿಧಿಸುತ್ತವೆ. ಇವು ಜಾಗ್ರತ, ಸ್ವಪ್ನ, ಸುಷುಪ್ತಿ ಮತ್ತು ತುರೀಯ ಎಂಬುದನ್ನೂ ಪ್ರತಿನಿಧಿಸುತ್ತವೆ.[12]

ಬಿಂದುವಿನ ಸುತ್ತಲ ಪ್ರದೇಶವು ಸ್ವಪ್ರಕಾಶದ ತುರೀಯ ಹಂತಕ್ಕೆ ಸರಿಹೊಂದುತ್ತದೆ. ಬಿಂದುವಿನ ಸುತ್ತ ಇರುವ ತುಂಬ ಒಳಗಿರುವ ತ್ರಿಕೋನವು, ಕೆಳಮುಖವಾಗಿದ್ದು ಅದಕ್ಕೆ ಶಕ್ತಿಚಕ್ರವೆಂದು ಹೆಸರು. ಇದು ವಸ್ತುವಿನ ಕಡೆಗೆ ಚಲಿಸುವ ಮೊದಲ ಶಕ್ತಿಯಾಗಿದ್ದು, ಅದನ್ನು ವಿಮರ್ಶಶಕ್ತಿ ಎಂದು ಕರೆಯಲಾಗುತ್ತದೆ. ಇದರ ಮೂರು ಅಗ್ರಗಳು ಇಚ್ಛಾಶಕ್ತಿ, ಕ್ರಿಯಾಶಕ್ತಿ, ಜ್ಞಾನಶಕ್ತಿ, ಮತ್ತು ವಾಮಶಕ್ತಿ, ಜ್ಯೇಷ್ಠ ಇತ್ಯಾದಿಗಳನ್ನು ಪ್ರತಿನಿಧಿಸುತ್ತದೆ. ಇದು ನಾಮ, ರೂಪಗಳ ಸಹಿತವಾದ ಅವ್ಯಕ್ತ ಅಂದರೆ ಜಗತ್ತಿನ ಶ್ರೇಷ್ಠತೆಯನ್ನು ತೋರಿಸುತ್ತದೆ. ಇವುಗಳ ಜೊತೆಗೆ, ಮೂರುಶಬ್ದಗಳ ಆಕರವಾದ ಪರಾವಾಕ್ ಅಂದರೆ ಮಧ್ಯಮ, ಪಶ್ಯಂತಿ, ವೈಖರಿ ಹಾಗೂ ಐವತ್ತು ಅಕ್ಷರಗಳ ಮಾತೃಕವನ್ನೂ ಪ್ರತಿನಿಧಿಸುತ್ತದೆ. ಮಿಕ್ಕ ಏಳು ಆವರಣಗಳು ಪ್ರಕಾಶ ಮತ್ತು ವಿಮರ್ಶೆಗಳಿಂದ ಬೆಳಗಲ್ಪಡುತ್ತವೆ. ಈ ತ್ರಿಕೋನವು ತ್ರಿಪುಟಿಯನ್ನು ಪ್ರತಿನಿಧಿಸುತ್ತದೆ. ತ್ರಿಪುಟಿ ಎಂದರೆ ತಿಳಿಯುವವನು, ತಿಳಿಯುವ ವಸ್ತು ಮತ್ತು ಜ್ಞಾನ. ಇದಕ್ಕೆ ಕಾಮಕಲಾ ಎಂದೂ ಹೆಸರು. ಇದು ಮುಂದಿನ ಆವರಣದೊಡನೆ ಸೇರಿ ಚಂದ್ರಮಂಡಲ ಅಂದರೆ ಸ್ವಪ್ನವಿಲ್ಲದ ನಿದ್ರೆ ಅಥವಾ ಸುಷುಪ್ತಿಯನ್ನು ಪ್ರತಿನಿಧಿಸುತ್ತದೆ.

ಈ ಎರಡರೊಡನೆ ರುದ್ರಗ್ರಂಥಿಯೂ ಸೇರಿರುತ್ತದೆ. ಅಷ್ಟಕೋನ ಚಕ್ರವು ಶರೀರದ ಪಶ್ಯಂತಿ, ವಾಕ್ ಮತ್ತು ವಿಶುದ್ಧ ಚಕ್ರಗಳನ್ನು ಪ್ರತಿನಿಧಿಸುತ್ತದೆ. ಮುಂದಿನ ಎರಡು ಆವರಣಗಳಾದ ಅಂತರ್ದಶಾರ ಮತ್ತು ಬಹಿರ್ದಶಾರಗಳು ಬಿಂದು ಮತ್ತು ತ್ರಿಕೋನಗಳ ಕಿರಣಗಳೇ ಆಗಿದ್ದು ಜೀವದ ಸ್ವಪ್ನ, ಸೂರ್ಯಮಂಡಲ, ಅದರ ಮೇಲಿರುವ ವಿಷ್ಣು ಗ್ರಂಥಿಯನ್ನು ಪ್ರತಿನಿಧಿಸುತ್ತವೆ. ಅವು ಮಧ್ಯಮ ಮತ್ತು ವಾಕ್ ಅನ್ನು ಪ್ರತಿನಿಧಿಸುವುದಲ್ಲದೆ ಕ್ರಮವಾಗಿ ಅನಾಹತ ಮತ್ತು ಮಣಿಪುರ ಚಕ್ರಗಳನ್ನು ಸಂಕೇತಿಸುತ್ತವೆ. ಚತುರ್ದಶಾರ ಚಕ್ರವು ಶರೀರದ ಸ್ವಾಧಿಷ್ಠಾನ ಚಕ್ರಕ್ಕೆ ಸಮನಾಗಿದ್ದು, ವೈಖರೀ ವಾಕ್ ಮತ್ತು ಮಾತೃಕ (ಅಕ್ಷರಗಳು)ಗಳ ಸಂಕೇತವಾಗಿದೆ. ಶ್ರೀಚಕ್ರದ ಅತ್ಯಂತ ಹೊರವಲಯದ ಭೂಗೃಹ ಅಥವಾ ಚತುರ್ಭುಜಾಕೃತಿ ಶರೀರದ ಮೂಲಾಧಾರಕ್ಕೆ ಸಮನಾಗಿದೆ. ಇಲ್ಲಿಗೆ ಬಿಂದು ಅಥವಾ ಸಹಸ್ರಾರದಿಂದ ಇಳಿಯುವಿಕೆಯು ಪೂರ್ಣಗೊಂಡು ಅದು ಕುಂಡಲಿನಿಯಲ್ಲಿ ನಿಲ್ಲುತ್ತದೆ. ಮೂಲಾಧಾರವು ಸ್ವಾಧಿಷ್ಠಾನದೊಡನೆ ಸೇರಿ ಜೀವದ ಜಾಗ್ರತಾವಸ್ಥೆಯನ್ನು ಪ್ರತಿನಿಧಿಸಿ, ಅಗ್ನಿಮಂಡಲ ಮತ್ತು ಬ್ರಹ್ಮಗ್ರಂಥಿಯೊಡನೆ ಸಂಬಂಧ ಹೊಂದಿರುತ್ತದೆ. ಎಂಟು ಮತ್ತು ಹದಿನಾರು ದಳಗಳ ಪದ್ಮವು ಕೊನೆಯ ಮೂರು ವಾಕ್‌ಗಳ ಹೊರಹೊಮ್ಮುವಿಕೆ.

ಅದು ಮುಂದಿನ ಹಾಗೂ ಶ್ರೀಚಕ್ರದ ಕೊನೆಯ ಭಾಗದೊಡನೆ ಸೇರಿದರೆ, ಪ್ರಕಾಶ ಅಂದರೆ ಪ್ರಕಾಶಾಂಶ ಹಾಗೂ ಮಿಕ್ಕ ಐದರೊಡನೆ ಸೇರಿದರೆ ವಿಮರ್ಶಾಂಶಗಳಾಗುತ್ತವೆ. ಸ್ಥೂಲವಾಗಿ ಸಮಾಯಾಚರದ ಸಾಧಕನು ತಿಳಿಯಬೇಕಾದ ಶ್ರೀಚಕ್ರದ ಮಹತ್ವವೇ ಇದು. ಪುಟಗಳ ಮಿತಿಯಿಂದಾಗಿ ಇಲ್ಲಿ ಇದಕ್ಕಿಂತಲೂ ವಿಶದವಾಗಿ ಹೇಳಲು ಸಾಧ್ಯವಾಗುತ್ತಿಲ್ಲ. ಸೌಂದರ್ಯಲಹರಿಯನ್ನು ಕುರಿತು ಟೀಕೆಗಳನ್ನು ರಚಿಸಿರುವ ಕೈವಲ್ಯಾಶ್ರಮ, ಕಾಮೇಶ್ವರಸೂರಿ ಹಾಗೂ ವಾಮಕೇಶ್ವರಿ ತಂತ್ರ ಇವರುಗಳಲ್ಲಿ ಶ್ರೀ ಚಕ್ರದ ಮಹತ್ವವನ್ನು ಕುರಿತಂತೆ ಅಭಿಪ್ರಾಯ ಭೇದಗಳಿವೆ. ಆದರೆ ನಾವು ಮೇಲೆ ಹೇಳಿರುವುದು ಸಾಮಾನ್ಯವಾಗಿ ಎಲ್ಲರೂ ಒಪ್ಪಿಕೊಂಡಿರುವ ಅಂಶಗಳನ್ನು ಮಾತ್ರ. ಇನ್ನೂ ವಿಶದವಾಗಿ ಶ್ರೀಚಕ್ರವನ್ನು ಕುರಿತು ತಿಳಿಯಲು ಅಪೇಕ್ಷಿಸುವ ಓದುಗರು ನಾವು ಆಗಲೇ ಉಲ್ಲೇಖಿಸಿರುವ ಆಕರಗಳನ್ನು ಗಮನಿಸಬೇಕು. ಶ್ರೀಚಕ್ರ ರಚನೆಯನ್ನು ಕುರಿತು ಹೆಚ್ಚಿನ ಮಾಹಿತಿ ತಿಳಿಯಲು ಅಪೇಕ್ಷಿಸುವವರು ಅಡ್ಯಾರ್‌ನ ಥಿಯೊಸಾಫಿಕಲ್ ಸೊಸೈಟಿಯವರು ಪ್ರಕಟಿಸಿರುವ ಸೌಂದರ್ಯಲಹರಿ ಗ್ರಂಥದ ಪುಟ (2-8)ಗಳನ್ನು ಗಮನಿಸಬೇಕು.

ಗೌಡಪಾದ ಸುಭಗೋದಯದ ಪ್ರಕಾರ ಶ್ರೀ ಚಕ್ರದ ರೇಖಾಚಿತ್ರವನ್ನು ಮೂರು ವಿಧಗಳಲ್ಲಿ ಅರ್ಥೈಸಬಹುದು. ಅವುಗಳೇ ಮೇರು ಪ್ರಸ್ತಾರ, ಕೈಲಾಸಪ್ರಸ್ತಾರ ಮತ್ತು ಭೂಪ್ರಸ್ತಾರ.

ಮೇರು ಪ್ರಸ್ತಾರದಲ್ಲಿ ಹದಿನಾರು ನಿತ್ಯಗಳನ್ನು ಶ್ರೀಚಕ್ರದ ವಿವಿಧ ಅಂಗಗಳಾಗಿ ಗುರುತಿಸಲಾಗಿದೆ. ಕೈಲಾಸಪ್ರಸ್ತಾರದಲ್ಲಿ ಮಾತೃಕದ ವಿವಿಧ ಅಕ್ಷರಗಳನ್ನು ಶ್ರೀಚಕ್ರದ ವಿವಿಧ ಅಂಗಗಳಾಗಿ ಗುರುತಿಸಲಾಗಿದೆ. ಭೂಪ್ರಸ್ತಾರದಲ್ಲಿ, ಶ್ರೀ ಮಹಾತ್ರಿಪುರ ಸುಂದರಿಯಿಂದ ಹೊರಹೊಮ್ಮುವ ಅನೇಕ ಶಕ್ತಿಗಳು ಅಥವಾ ದೇವತೆಗಳನ್ನು ಶ್ರೀ ಚಕ್ರದ ವಿವಿಧ ಅಂಗಗಳಾಗಿ ಗುರುತಿಸಲಾಗಿದೆ. ಇದರಲ್ಲಿ ಶ್ರೀ ತ್ರಿಪುರ ಸುಂದರಿಯನ್ನು ಶ್ರೀ ಚಕ್ರದ ಅತ್ಯಂತ ಆಂತರಿಕ ವೃತ್ತದ ಕೆಳಭಾಗದಲ್ಲಿ ತೋರಿಸಲಾಗಿದೆ. ಈ ಮೂರು ಪ್ರಸ್ತಾರಗಳನ್ನು ಕುರಿತು ಇಲ್ಲಿ ಇನ್ನೂ ಹೆಚ್ಚಿನ ವಿವರಗಳನ್ನು ನೀಡಲು ಸಾಧ್ಯವಿಲ್ಲ.[13]

ಪ್ರಶ್ನೆ ೧೪ : ಪ್ರಾಣಾಯಾಮವು ಏತಕ್ಕೆ ಬೇಕು?

ಉತ್ತರ : ಇದು ಇಲ್ಲಿನ ಚರ್ಚೆಗೆ ಮೀರಿದ ಬೃಹತ್ತಾದ ವಿಷಯ. ತುಂಬ ಸರಳವಾಗಿ ಹೇಳಬೇಕೆಂದರೆ, ಪ್ರತಿಯೊಂದು ಜೀವದಲ್ಲಿಯೂ ಪ್ರಜ್ಞೆಯು ಸುಪ್ತವಾಗಿರುತ್ತದೆ. ಪಾತಂಜಲ ಯೋಗದ ಪ್ರಕಾರ ಉಸಿರನ್ನು ನಿಯಂತ್ರಿಸುವುದರ ಮೂಲಕ ಒಳಗಿರುವ ಆ ಶಕ್ತಿ ಅಥವಾ ಕುಂಡಲಿನಿಯನ್ನು ಜಾಗೃತಗೊಳಿಸಬಹುದು. ಸರಿಯಾದ ಕ್ರಮದಲ್ಲಿ ಜಾಗೃತಗೊಳಿಸಿದರೆ, ನಿಮ್ಮ ಸಾಧನೆಯು ಮುಂದುವರಿದಂತೆ ಆಕೆಯು ಮಾತೆಯಂತೆ

ನಿಮ್ಮನ್ನು ಗುರಿಯ ದಾರಿಯತ್ತ ಕೊಂಡೊಯ್ಯಬಲ್ಲಳು. ಪಾತಂಜಲಯೋಗ, ಸರ್‌ಜಾನ್ ವುಡ್‌ರೋಫ್‌ನ 'ಸರ್ಪೆಂಟ್ ಪವರ್', ರೇಲೆಯವರ 'ಮಿಸ್ಟೀರಿಯಸ್ ಕುಂಡಲಿನಿ' ಹಾಗೂ ಯೋಗವನ್ನು ಕುರಿತಾದ ಇತರ ಗ್ರಂಥಗಳನ್ನು ಓದುಗನು ಅಧ್ಯಯನ ಮಾಡಬೇಕು.[14]

ಪ್ರಶ್ನೆ ೧೫: ವಿವಿಧ ಚಕ್ರಗಳು ಯಾವುವು? ಈ ಅಧ್ಯಯನದಲ್ಲಿ ಅವುಗಳ ಸ್ಥಾನವೇನು?

ಉತ್ತರ : ನಾವು ಆಗಲೇ ಗಮನಿಸಿರುವಂತೆ, ಶಕ್ತಿಗೆ ಸಮಾನವಾದ ಮೂಲಭೂತ ಸತ್ವವು ಪ್ರತಿಯೊಬ್ಬರಲ್ಲಿಯೂ ಕುಂಡಲಿನಿಯ ಅಥವಾ 'ಸರ್ಪೆಂಟೈನ್ ಪವರ್' ರೂಪದಲ್ಲಿ ಇರುತ್ತದೆ. ಅದು ಮೂಲಾಧಾರ ಚಕ್ರದಲ್ಲಿರುತ್ತದೆ. ನಮ್ಮ ಬೆನ್ನುಹುರಿಯಲ್ಲಿ ಈ ಆರು ಚಕ್ರಗಳಿವೆ. ಇವುಗಳನ್ನು ಶರೀರದ ಯಾವ ಅಂಗಕ್ಕೂ ಹೋಲಿಸುವಂತಿಲ್ಲ. ಕುಂಡಲಿನಿ ಯೋಗದ ಆಚರಣೆಯಿಂದ ಈ ಆರುಚಕ್ರಗಳನ್ನು ಜಾಗೃತಗೊಳಿಸಿದರೆ ಅದು ಶಿವತತ್ವದ ಸಾವಿರ ದಳಗಳ ಪದ್ಮದ ರೂಪದ ಸಹಸ್ರಾರವಾಗುತ್ತದೆ. ಆದುದರಿಂದ ಈ ಚಕ್ರಗಳಲ್ಲಿ ತಮ್ಮಲ್ಲಿರುವ ಶಕ್ತಿಯಿಂದ ವಿವಿಧ ಅಸ್ತಿತ್ವಗಳಾಗುತ್ತದೆ. ಇವುಗಳನ್ನು 'ಷಟ್‌ಚಕ್ರ ನಿರೂಪಣ' ಎನ್ನುವ ಗ್ರಂಥದಲ್ಲಿ ವಿಶದವಾಗಿ ವರ್ಣಿಸಲಾಗಿದೆ.

ಸಂಗ್ರಹ ರೂಪದಲ್ಲಿ ಇದನ್ನು ಈ ರೀತಿ ವಿವರಿಸಬಹುದು. ಅತ್ಯಂತ ಕೆಳಗಿನ ಚಕ್ರವಾದ ಮೂಲಾಧಾರವು ಬೆನ್ನು ಹುರಿಯ ಕೆಳಗಿರುತ್ತದೆ. ಈ ಚಕ್ರಗಳನ್ನು ಪದ್ಮ ಎಂದೂ ಕರೆಯುತ್ತೇವೆ. ಆದುದರಿಂದ ಅವುಗಳಿಗೆ ದಳ ಅಥವಾ ಎಲೆಗಳಿರುತ್ತವೆ. ಮೂಲಾಧಾರಕ್ಕೆ ಈ ರೀತಿಯ ನಾಲ್ಕು ದಳಗಳಿವೆ. ಇವು ಸಂಸ್ಕೃತ ವರ್ಣಮಾಲೆಯ ಅಥವಾ ಮಾತೃಕಗಳ ವಂ, ಸಾಂ, ಶಂ, ಮತ್ತು ಸಂ ಎಂಬ ಅಕ್ಷರಗಳಿಗೆ ಸಮನಾಗಿರುತ್ತವೆ. ಶಾಕಿನಿ ಎಂಬ ಶಕ್ತಿಯು ಅಲ್ಲಿ ವಾಸಿಸುತ್ತದೆ. ಈ ಚಕ್ರವು ಪೃಥ್ವೀ ತತ್ವಕ್ಕೆ ಸರಿಹೊಂದುತ್ತದೆ. ಈ ಮೂಲಾಧಾರದ ಮೇಲಿರುವುದೇ ಸ್ವಾಧಿಷ್ಠಾನ. ಇದರಲ್ಲಿ ಬಂ, ಭಂ, ಮಂ, ಯಂ, ರಂ ಮತ್ತು ಲಂ ಎಂಬ ಆರು ದಳಗಳಿವೆ. ಇದರಲ್ಲಿಕಾಕಿನಿ ಶಕ್ತಿಯು ವಾಸಿಸುತ್ತದೆ. ಇದು ಹೊಕ್ಕಳು ಮತ್ತು ಮೂಲಾಧಾರದ ಮಧ್ಯಭಾಗದಲ್ಲಿರುತ್ತದೆ. ಇದು ಜಲತತ್ವ (ನೀರು). ಮುಂದಿನ ಚಕ್ರವಾದ ಮಣಿಪುರವು ಹೊಕ್ಕಳಿನಲ್ಲಿ ವಾಸಿಸುತ್ತದೆ. ಇದಕ್ಕೆ ಹತ್ತು ದಳಗಳು. ಅವುಗಳ ಮಾತೃಕದ ಹತ್ತು ಅಕ್ಷರಗಳಾದ ದಂ, ಧಂ, ನಂ, ತಂ, ಥಂ, ಡಂ, ಢಂ, ಣಂ, ಪಂ, ಫಂ ಗಳಿಗೆ ಸಂವಾದಿಯಾಗಿರುತ್ತವೆ. ಇದು ಅಗ್ನಿತತ್ವಕ್ಕೆ ಸಮನಾಗಿರುತ್ತದೆ. ಲಾಕಿನಿ ಎಂಬ ಶಕ್ತಿಯು ಇಲ್ಲಿ ವಾಸವಾಗಿರುತ್ತದೆ. ಹೃದಯ ಭಾಗದಲ್ಲಿರುವುದೇ ಅನಾಹತ ಚಕ್ರ. ಇದಕ್ಕೆ ಹನ್ನೆರಡು ದಳಗಳುಂಟು. ಇವು ಕ, ಖ, ಗ, ಘ, ಙ, ಚ, ಛ, ಜ, ಝ, ಞ, ಟ, ಠ ಎಂಬ ಅಕ್ಷರಗಳಿಗೆ ಸಂವಾದಿಯಾಗಿರುತ್ತವೆ. ಇದು ವಾಯುತತ್ವ. ಇಲ್ಲಿ ರಾಕಿನಿ ಶಕ್ತಿಯು ವಾಸಿಸುತ್ತದೆ.

ಕತ್ತಿನ ಭಾಗದಲ್ಲಿರುವುದೇ ವಿಶುದ್ಧ ಚಕ್ರ. ಇದಕ್ಕೆ ಹದಿನಾರು ದಳಗಳು. ಇವು 'ಅ' ದಿಂದ 'ಔ' ವರೆಗಿನ ಸ್ವರಗಳನ್ನು ಪ್ರತಿನಿಧಿಸುತ್ತವೆ. ಇದು ಆಕಾಶತತ್ವ. ಇಲ್ಲಿ ಡಾಕಿನಿ ಶಕ್ತಿಯು ವಾಸಿಸುತ್ತದೆ. ಕಣ್ಣಿನ ಎರಡು ಹುಬ್ಬುಗಳ ಮಧ್ಯೆ ಇರುವುದೇ ಆಜ್ಞಾಚಕ್ರ. ಇದಕ್ಕೆ ಎರಡು ದಳಗಳು. ಇವು ಹ ಮತ್ತು ಕ್ಷ ಎಂಬ ಅಕ್ಷರಗಳಿಗೆ ಸಂವಾದಿಯಾಗಿವೆ. ಹಾಕಿನಿ ಎಂಬ ಶಕ್ತಿಯು ಇಲ್ಲಿ ವಾಸಿಸುತ್ತದೆ. ಮನಸ್ಸು ಇಲ್ಲೇ ಇರುವುದೆಂದೂ, ಇದು ಮಜ್ಜ ಎಂಬ ಖಂಡಕ್ಕೆ ಸೇರಿದೆಯೆಂದೂ ಹೇಳಲಾಗುತ್ತದೆ.

ಇವೇ ಆರುಚಕ್ರಗಳು. ಯಾವ ಸಾಧಕರು ಏಕಾಗ್ರತೆಯಿಂದ ಈ ಚಕ್ರಗಳನ್ನು ಕುರಿತು ಧ್ಯಾನಮಾಡುತ್ತಾರೆಯೋ, ಅವರು ಪಂಚಭೂತಗಳ ಮೇಲೆ ನಿಯಂತ್ರಣವನ್ನು ಪಡೆಯುತ್ತಾರೆ. ವೈಯಕ್ತಿಕ ಸಾಧಕನು ಹೃದಯದಲ್ಲಿ ಜ್ವಾಲೆ ಇರುವಂತೆ ಕಾಣಬರುತ್ತಾನೆ ಎಂದು 'ಷಟ್‌ಚಕ್ರ ನಿರೂಪಣ' ಎಂಬ ಗ್ರಂಥದಲ್ಲಿ ವರ್ಣಿತ ವಾಗಿದೆ.[15] ಹಂಸಮಂತ್ರದಿಂದ ಇದನ್ನು ಮೂಲಾಧಾರಕ್ಕೆ ತೆಗೆದುಕೊಂಡು ಹೋಗಬೇಕು. ಅಲ್ಲಿಂದ ಅದನ್ನು ಆರು ಚಕ್ರಗಳ ಮೂಲಕ, ಮಸ್ತಿಷ್ಕದ ಮಧ್ಯದಲ್ಲಿರುವ ಸಹಸ್ರ ದಳಕ್ಕೆ ಕೊಂಡೊಯ್ದು, ಅತ್ಯಂತ ಶ್ರೇಷ್ಠ ವಿಶ್ವಚೇತನ ಅಥವಾ ಶಿವನಲ್ಲಿ ತಾದಾತ್ಮ್ಯವನ್ನು ಪಡೆಯಬೇಕು. ಈ ಸಾವಿರ ದಳಗಳ ಪದ್ಮವು ಮೇಲೆ ವರ್ಣಿಸಿದ ಷಟ್‌ಚಕ್ರಗಳು ಪರಿಧಿಯ ಹೊರಗೆ ಇರುತ್ತದೆ. ಈ ಆರು ಚಕ್ರಗಳನ್ನು ಕುಂಡಲಿನಿ ಯೋಗದಲ್ಲಿ ಮಾರ್ಗ ಎಂದೂ ಶಿವನ ನಿವಾಸವಾದ ಸಾವಿರ ದಳಗಳ ಪದ್ಮವನ್ನು ಗುರಿ ಎಂದೂ ವರ್ಣಿಸಲಾಗಿದೆ. ಶ್ರೀ ಲಲಿತಾ ಸಹಸ್ರನಾಮ ಮತ್ತು ಇತರ ಗ್ರಂಥಗಳಲ್ಲಿ ಅದನ್ನು ಹೀಗೆ ವರ್ಣಿಸಲಾಗಿದೆ;" ಇದು ಮಸ್ತಿಷ್ಕ ಮತ್ತು ಬುರುಡೆಗಳ ಮಧ್ಯದಲ್ಲಿದೆ. ಅದು ಸಾವಿರ ದಳಗಳ ಪದ್ಮ; ಅದು ಎಲ್ಲ ಬಣ್ಣಗಳಿಂದ ಹೊಳೆಯುತ್ತದೆ; ಅದು ಎಲ್ಲ ದಿಕ್ಕುಗಳನ್ನೂ ನೋಡುತ್ತದೆ. ಇದರಲ್ಲಿ ಯಾಕಿನಿ ಶಕ್ತಿಯು ವಾಸಿಸುತ್ತದೆ." ಈ ಆರು ಚಕ್ರಗಳು ವಿವಿಧ ಅಂಗ ಸತ್ವಗಳಾದ ರಕ್ತ, ಮೂಳೆ, ಚರ್ಮ, ಮಾಂಸಖಂಡ, ಮಸ್ತಿಷ್ಕ, ವೀರ್ಯ ಮುಂತಾದವುಗಳಿಗೆ ಹೊಂದಿಕೊಂಡು ಅವುಗಳಲ್ಲಿ ಇರುತ್ತವೆ. ಇವುಗಳನ್ನು ಷಟ್‌ಚಕ್ರ ನಿರೂಪಣ ಎಂಬ ಗ್ರಂಥದಲ್ಲಿ ಹೇಳಲಾಗಿದೆ. ಅಂದರೆ ಈ ಮಾರ್ಗದಲ್ಲಿ ಶಕ್ತಿತತ್ವವು ಶ್ರೇಷ್ಠ ಚೇತನದ ಕಾರಣವೂ, ಶ್ರೇಷ್ಠ ವಿಶ್ವಚೇತನವೂ ಆದ ಶಿವತತ್ವದಲ್ಲಿ ಲೀನವಾಗುವುದನ್ನು ಪ್ರತಿನಿಧಿಸುತ್ತದೆ. ಇದನ್ನೇ ಕುಂಡಲಿನಿ ಯೋಗದ ಪರಾಕಾಷ್ಠೆಯ ಮಾರ್ಗ ಎಂದು ಕರೆಯಲಾಗುತ್ತದೆ. ಶ್ರೀಚಕ್ರವನ್ನು ವಿವರಿಸುವಾಗ, ಈ ಚಕ್ರಗಳನ್ನು ವಿಶದವಾಗಿ ವರ್ಣಿಸಲಾಗಿದೆ.

ಪ್ರಶ್ನೆ ೧೬ : ಅವಸ್ಥೆಗಳೆಂದರೇನು? ಈ ಅಧ್ಯಯನಕ್ಕೆ ಅವು ಯಾವ ರೀತಿ ಸಂಬಂಧಿಸಿವೆ ?

ಉತ್ತರ : ಪ್ರತಿಯೊಂದು ಜೀವವೂ ಸ್ವಲ್ಪ ಶ್ರಮದಿಂದ ಈ ನಾಲ್ಕು ಅವಸ್ಥೆಗಳನ್ನು

ಅನುಭವಿಸಬಹುದು. ಈ ನಾಲ್ಕು ಅವಸ್ಥೆಗಳು ಜೀವನಿಗೆ ಸಂಬಂಧಿಸಿದವುಗಳು; ಶ್ರೇಷ್ಠ ಸತ್ ಇವೆಲ್ಲವನ್ನೂ ಮೀರಿದ್ದುದಾದರೂ ಅವುಗಳ ಮೇಲೆ ಆಧಾರಿತವಾಗಿದೆ.[16] ಆದುದರಿಂದ ಈ ಅವಸ್ಥೆಗಳನ್ನು ಅರ್ಥಮಾಡಿಕೊಳ್ಳದೇ ಇದ್ದರೆ ಆ ಮೂಲಭೂತ ತತ್ವವನ್ನು ಮಾನಸಿಕವಾಗಿ ತಿಳಿಯುವುದು ಸಾಧ್ಯವಾಗುವುದಿಲ್ಲ. ಒಬ್ಬನು ಗಾಢನಿದ್ರೆ ಅಥವಾ ಸುಷುಪ್ತಿಯಲ್ಲಿದ್ದಾನೆಂದರೆ; ಇಲ್ಲಿ ಮನಸ್ಸು ಸ್ಥೂಲಶರೀರದ (ಅನ್ನಮಯ ಕೋಶ, ಸ್ಥೂಲ ಶರೀರ) ಮೂಲಕ ಕಾರ್ಯ ಮಾಡುವುದಿಲ್ಲ; ನರಮಂಡಲದ ಮೂಲಕ ಹಾಗೂ ಸೂಕ್ಷ್ಮಶರೀರದ ಮೂಲಕ ಕಾರ್ಯ ನಿರ್ವಹಿಸುವುದಿಲ್ಲ (ಸೂಕ್ಷ್ಮ ಶರೀರದಲ್ಲಿ ಪ್ರಾಣಮಯ, ಮನೋಮಯ, ವಿಜ್ಞಾನಮಯ ಕೋಶಗಳಿವೆ). ಇಲ್ಲಿ ಮನಸ್ಸು ಕಾರ್ಯ ನಿರ್ವಹಿಸುವುದಿಲ್ಲ. ಏಕೆಂದರೆ ಅದು ಅಜ್ಞಾನದಿಂದ ಅಥವಾ ತಮಸ್ಸಿನಿಂದ ಆವರಿಸಲ್ಪಟ್ಟಿರುತ್ತದೆ. ಅದು ಸುಖ, ದುಃಖಗಳೆರಡನ್ನೂ ಅನುಭವಿಸುವುದಿಲ್ಲ. ಇಲ್ಲಿ ಪ್ರತಿಯೊಂದು ಜೀವಕ್ಕೂ ಪ್ರಜ್ಞಾ ಎಂದು ಹೆಸರು; ಇದು ಕಾರಣ ಶರೀರದೊಡನೆ ಗುರುತಿಸಿಕೊಳ್ಳುತ್ತದೆ. ನಾಲ್ಕನೆಯ ಅವಸ್ಥೆಯೇ ತುರೀಯ. ಇಲ್ಲಿ ಕಾರ್ಯದ ದೃಷ್ಟಿಯಿಂದ ಮನಸ್ಸೂ ಮಾಯವಾಗುತ್ತದೆ; ಆದರೆ ಶುದ್ಧ ಅನುಭವದ ದೃಷ್ಟಿಯಿಂದ ಅದು ಇರುತ್ತದೆ. ಇಲ್ಲಿ ಎಚ್ಚರವಾದ ಜಾಗೃತ ಅವಸ್ಥೆ ಅಥವಾ ಸ್ವಪ್ನಾವಸ್ಥೆ ಇತ್ಯಾದಿಗಳು ಇರುವುದಿಲ್ಲ.[17] ಇಲ್ಲಿ ಅನುಭವವೆಂದರೆ ಶುದ್ಧ ಆನಂದಮಾತ್ರ. ಹೆಚ್ಚಿನ ಪರಿಶ್ರಮದಿಂದ ನಾಲ್ಕನೆಯ ಅವಸ್ಥೆಯನ್ನು ಇತರ ಮೂರು ಅವಸ್ಥೆಗಳಲ್ಲಿಯೂ ಅನುಭವಿಸಬಹುದು. ಅಂದರೆ ಅವನು ಎಚ್ಚರವಾಗಿರುವಾಗ ಅಥವಾ ಸ್ವಪ್ನಾವಸ್ಥೆಯಲ್ಲಿರುವಾಗ ಅಥವಾ ಗಾಢ ನಿದ್ರೆಯಲ್ಲಿರುವಾಗಲೂ ಈ ನಾಲ್ಕನೆಯ ಅವಸ್ಥೆಯನ್ನು ಅನುಭವಿಸಬಹುದು. ಈ ನಾಲ್ಕನ್ನೂ ಮೀರಿದ್ದೇ 'ತುರೀಯಾತೀತ'. ಇದರಲ್ಲಿ ಜೀವನಿಗೆ ಸಾಕ್ಷಿ ಎಂದು ಹೆಸರು. ಲಲಿತಾ ಸಹಸ್ರನಾಮದಲ್ಲಿ ಬ್ರಹ್ಮಗ್ರಂಥಿ, ವಿಷ್ಣುಗ್ರಂಥಿ ಹಾಗೂ ರುದ್ರಗ್ರಂಥಿ ಎಂಬ ಮೂರು ಗ್ರಂಥಿಗಳು ಉಲ್ಲೇಖಿತವಾಗಿವೆ.

ಎಲ್ಲಿಯವರೆಗೆ ಜೀವದ ಪ್ರಜ್ಞೆಯೂ ಬ್ರಹ್ಮಗ್ರಂಥಿಗಿಂತ ಕಡಿಮೆ ಹಂತದಲ್ಲಿರುವುದೋ, ಅಲ್ಲಿಯವರೆಗೆ ಅವನು ಎಚ್ಚರವಾಗಿದ್ದು ಸ್ಥೂಲ ಶರೀರದ ಪ್ರಜ್ಞೆ ಮಾತ್ರ ಅವನಲ್ಲಿರುತ್ತದೆ; ವಿಷ್ಣು ಗ್ರಂಥಿಯವರೆಗೆ ಇದ್ದರೆ ಅವನಿಗೆ ಮನಸ್ಸಿನ ಅರಿವಿರುತ್ತದೆ ಹಾಗೂ ಸ್ಥೂಲ ಮತ್ತು ಸೂಕ್ಷ್ಮ ಶರೀರಗಳ ಮೂಲಕ ಕಾರ್ಯನಿರತನಾಗಿರುತ್ತಾನೆ. ವಿಷ್ಣು ಗ್ರಂಥಿಯಿಂದ ರುದ್ರಗ್ರಂಥಿಯವರೆಗೆ ಅವನು ಗಾಢನಿದ್ರೆಯಲ್ಲಿರುತ್ತಾನೆ. ಅವನು ಯಾವಾಗ ರುದ್ರಗ್ರಂಥಿಯನ್ನು ದಾಟುತ್ತಾನೆಯೋ, ಆಗ ನಾಲ್ಕನೆಯ ಅವಸ್ಥೆಯಿಂದ ತುರೀಯವನ್ನು ತಲುಪುತ್ತಾನೆ. ಕುಂಡಲಿನಿ ಯೋಗದಲ್ಲಿ ಉಲ್ಲೇಖಿತವಾಗಿರುವಂತೆ ಈ ಪ್ರಜ್ಞಾವಸ್ಥೆಗಳಿಗೂ ಗ್ರಂಥಿಗಳಿಗೂ ಆರುಪದ್ಮಗಳಿಗೂ ಸಂಬಂಧವಿರುವುದರಿಂದ ಶ್ರೀವಿದ್ಯೆಗೂ ಈ ಅವಸ್ಥೆಗಳಿಗೂ ಇರುವ ಸಂಬಂಧವನ್ನು ಸುಲಭವಾಗಿ ತಿಳಿಯಬಹುದು.

ಪ್ರಶ್ನೆ ೧೭ : ಮುದ್ರೆ ಎಂದರೇನು? ಶ್ರೀ ವಿದ್ಯೆಯಲ್ಲಿ ಅದರ ಪಾತ್ರವೇನು?

ಉತ್ತರ : ಮುದಂ ದ್ರಾವಯತೀತ ಮುದ್ರಃ ಎಂದು ಹೇಳಿದೆ. ಯಾವುದರಿಂದ ಆನಂದವು ಹರಿದುಬರುತ್ತದೆಯೋ ಅದೇ ಮುದ್ರೆ. ಅದು ಶರೀರದ ಹಾಗೂ ಅದರ ವಿವಿಧ ಅಂಗಗಳ ವಿನ್ಯಾಸ ಅಥವಾ ಭಾವನೆ. ನೃತ್ಯದಲ್ಲಿ ಶರೀರದ ವಿವಿಧ ಅಂಗಗಳ ವಿನ್ಯಾಸಗಳು ಅನೇಕ ಭಾವನೆಗಳನ್ನು ಸೂಚಿಸುವುದಲ್ಲದೆ ನೃತ್ಯ ಮಾಡುವವರಿಗೆ ಹಾಗೂ ನೋಡುವವರಿಗೂ ಸಂತೋಷವನ್ನುಂಟು ಮಾಡುತ್ತವೆ ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರವೇ ಸರಿ. ಲಲಿತಾ ಸಹಸ್ರನಾಮದಲ್ಲಿ 'ದಶಾಮುದ್ರಾ ಸಮಾರಾಧ್ಯಾ' ಎನ್ನುವುದು 977 ನೆಯ ನಾಮ. 'ಸರ್ವ ಸಂಕ್ಷೋಭಿಣಿ' ಯಿಂದ ಆರಂಭವಾಗಿ 'ತ್ರಿಖಂಡ' ಎನ್ನುವ ನಾಮದವರೆಗೆ, ಆಕೆಯನ್ನು ಹತ್ತು ಮುದ್ರೆಗಳಿಂದ ಪೂಜಿಸಬೇಕು. ಇಲ್ಲಿ ಈ ಎಲ್ಲ ಮುದ್ರೆಗಳನ್ನೂ ಪ್ರತ್ಯೇಕವಾಗಿ ಗಮನಿಸುವುದು ಸಾಧ್ಯವಿಲ್ಲ. ಇವುಗಳನ್ನು ಗುರುವಿನ ಮೂಲಕ ಅಥವಾ ಪರಿಣಿತನಾದ ಭಕ್ತನು ಮಾಡುವ ಶ್ರೀ ಚಕ್ರದ ನವಾವರಣ ಪೂಜೆಯನ್ನು ನೋಡಿ ಕಲಿಯಬೇಕು.

ಈ ಮುದ್ರೆಗಳಿಂದ ಕೂಡಿದ ಶ್ರೀಲಲಿತೆಯ ಆರಾಧನೆ ವಿಶೇಷ ಸಂಕೇತಗಳಿಂದ ಕೂಡಿದ್ದಾಗಿದೆ. ಈ ಎಲ್ಲ ಮುದ್ರೆಗಳೂ ಶಿವ ಮತ್ತು ಶಕ್ತಿಯ ಅಂಶಗಳನ್ನು ಒಳಗೊಂಡ ಶ್ರೀ ಲಲಿತೆಯ ಸೃಷ್ಟಿಯ ವಿವಿಧ ಕಾರ್ಯ ಮಾಡುವ ಸೂಚನೆಯೇ ಆಗಿದೆ ಎಂದು ಭಾವಿಸಲಾಗಿದೆ. ಆಕೆಯನ್ನು ಪುಷ್ಪವೇ ಮೊದಲಾದ ವಸ್ತುಗಳಿಂದ ಬಾಹ್ಯ ಪೂಜೆ ಮಾಡುವುದಕ್ಕಿಂತ, ಈ ಮುದ್ರೆಗಳನ್ನೊಳಗೊಂಡ 'ಅಂತರ್ಯಾಗ' ದಿಂದ ಆಕೆ ಹೆಚ್ಚು ಪ್ರಸನ್ನಳಾಗುತ್ತಾಳೆ ಎಂದು ಹೇಳಲಾಗಿದೆ. ಈ ಎಲ್ಲ ಮುದ್ರೆಗಳಲ್ಲಿಯೂ ಎಡ ಮತ್ತು ಬಲಗೈ ಬೆರಳುಗಳು ಸೇರಿಕೊಂಡು ಸಾಮರಸ್ಯ ಕ್ರಿಯೆ ಸೂಚಿತವಾಗಿವೆ. ಐದು ಬೆರಳುಗಳು ಪಂಚಭೂತವನ್ನೂ; ಬಲಗೈ ಶಿವನನ್ನೂ, ಎಡಗೈ ಶಕ್ತಿಯನ್ನೂ ಸಂಕೇತಿಸುತ್ತವೆ. ಎಡಗೈ ಮತ್ತು ಬಲಗೈ ಬೆರಳುಗಳು ಪೂಜೆಯ ಮುದ್ರೆಯಲ್ಲಿ ಒಟ್ಟಿಗೆ ಸೇರಿದಾಗ, ಶಿವ-ಶಕ್ತಿಯರ ತಾದಾತ್ಮ್ಯವನ್ನು ಸೂಚಿಸುತ್ತದೆ. ಅಷ್ಟೇ ಅಲ್ಲದೆ ಅದು ಪಂಚಕೃತ್ಯಗಳ ಕಾರ್ಯವನ್ನೂ ಪ್ರತಿನಿಧಿಸುತ್ತದೆ.[18] ಈ ರೀತಿ ಮುದ್ರೆಗಳು ಜೀವ ಮತ್ತು ಪರಮಾತ್ಮನ ತಾದಾತ್ಮ್ಯವನ್ನು ತೋರಿಸುತ್ತವೆ. ಸಾಧಕನಿಗೆ ಎಲ್ಲ ಮುದ್ರೆಗಳ ಪರಿಚಯವಿಲ್ಲದಿದ್ದರೆ, ಆಗ ಅವನು ಆಕೆಯನ್ನು ಯೋನಿಮುದ್ರಾ ಅಂದರೆ ನಮಸ್ಕಾರ ಮುದ್ರೆಯಲ್ಲಿ ಪೂಜಿಸಬೇಕು. ಮಹರ್ಷಿಗಳೂ ಕೂಡ ಇದನ್ನು ಶ್ರೀದೇವಿಯ ಸಂಕೇತ ಎಂದು ಒಪ್ಪಿಕೊಂಡಿದ್ದಾರೆ. ನವಾವರಣ ಪೂಜೆಯಲ್ಲಿ ಅತ್ಯಂತ ಹೊರವಲಯದಿಂದ ಆರಂಭಿಸಿ ಒಳಗಿನ ಆವರಣದವರೆಗಿನ ಎಲ್ಲಕ್ಕೂ ಒಂದು ಮುದ್ರೆಯಿದ್ದು ಸಾಧಕನು ಹೊರವಲಯದಿಂದ ಒಳವಲಯವನ್ನು ಮಾನಸಿಕವಾಗಿ ತಲಪಲು ಸಾಧ್ಯವಾಗುತ್ತದೆ. ಅಂದರೆ ಕಣ್ಣಿಗೆ ಗೋಚರವಾಗುವ ದೃಶ್ಯದ ಹೊರವಲಯದ ಸತ್ ದೃಶ್ಯದ ಮೂಲಕ, ಮುದ್ರೆಗಳು

ದೃಕ್ (ಋಷಿ) ಅಂಶವನ್ನು ಅದರ ಮೂಲಕ್ಕೆ ಸೇರಿಕೊಂಡಿರುತ್ತವೆ. ಇಷ್ಟೇ ಅಲ್ಲದೆ ಪ್ರಾರಂಭದ ಮುದ್ರೆಯು ಲಲಿತಾ ಸಹಸ್ರನಾಮದ 978ನೆಯ ನಾಮದಲ್ಲಿ ಜ್ಞಾನಮುದ್ರೆ ಅಥವಾ ಚಿನ್ಮುದ್ರೆಯ ಉಲ್ಲೇಖವಿದೆ. ಈ ಪ್ರಸಿದ್ಧ ಮುದ್ರೆಯನ್ನು ಶ್ರೀ ಶಂಕರಾಚಾರ್ಯರು ತಮ್ಮ ದಕ್ಷಿಣಾಮೂರ್ತಿ ಸ್ತೋತ್ರದಲ್ಲಿ ಉಲ್ಲೇಖಿಸಿದ್ದಾರೆ.

ಪ್ರಶ್ನೆ ೧೮ : ಈ ಸಾಧನೆಯು ಮಾನಸಿಕ ಮತ್ತು ಶಾರೀರಿಕ ಪ್ರಯೋಗದಂತೆ ತೋರುತ್ತದೆ. ಆದುದರಿಂದ ನಮಗೆ ಮಾರ್ಗದರ್ಶನ ನೀಡಲು ಒಬ್ಬ ಗುರುವಿನ ಅವಶ್ಯಕತೆ ಇದೆಯೇ? ಅಂತಹ ಗುರು ನಮಗೆ ಎಲ್ಲಿ ದೊರಕುತ್ತಾನೆ ? ಅಥವಾ ಪುಸ್ತಕಗಳನ್ನು ಓದಿ ಅಥವಾ ಅನುಭವದ ಮೂಲಕ ನಾವು ಅಭ್ಯಾಸಮಾಡಬಹುದೇ ?

ಉತ್ತರ : ಪರಿಣಿತನಾದ ಗುರುವನ್ನು ಪಡೆಯುವುದು ತುಂಬ ಅವಶ್ಯಕ. ಆದುದರಿಂದ ಪ್ರತಿಯೊಬ್ಬನೂ ಗುರುವನ್ನು ಹುಡುಕುತ್ತಲೇ ಇರಬೇಕು. ಗುರುವನ್ನು ಅರಸುವವನು ವೇದಗಳಲ್ಲಿ ಶ್ರದ್ಧೆ ಇರುವ ಹಾಗೂ ಬ್ರಹ್ಮನ್‌ನಲ್ಲಿ ತನ್ನ ಮನಸ್ಸನ್ನು ಸ್ಥಿರವಾಗಿಸಿರುವ ಒಬ್ಬ ಋಷಿಯನ್ನು ಹುಡುಕಿಕೊಳ್ಳಬೇಕು ಎಂದು ಉಪನಿಷತ್ತುಗಳು ಉಲ್ಲೇಖಿಸುತ್ತವೆ. ವಿದ್ಯಾರ್ಥಿಯು, ಯಜ್ಞದಲ್ಲಿ ಅಗ್ನಿಗೆ ನೀಡುವ ಸಮಿತ್ತುಗಳನ್ನೂ ತನ್ನ ಕೈಯಲ್ಲಿಟ್ಟುಕೊಂಡಿದ್ದು ಗುರುವಿಗೆ ಅರ್ಪಿಸಬೇಕು. ಗುರುವಿಗೆ ಶುಶ್ರೂಷೆ ಮಾಡುವುದರ ಮೂಲಕ ಸರಿಯಾದ ಪ್ರಶ್ನೆಗಳನ್ನು ಕೇಳಿ ತನ್ನ ಸಂದೇಹವನ್ನು ಪರಿಹರಿಸಿಕೊಳ್ಳಬೇಕು (ಭಗವದ್ಗೀತೆ). ಗುರುವೇ ಬ್ರಹ್ಮ, ಗುರುವೇ ವಿಷ್ಣು, ಗುರುವೇ ಪರಮೇಶ್ವರ. ನಿಜವಾಗಿಯೂ ಗುರುವೇ ಶರೀರ ರೂಪದಲ್ಲಿರುವ ಪರಬ್ರಹ್ಮ; ಅಂತಹ ಗುರುವಿಗೆ ನಾನು ನಮಸ್ಕರಿಸುತ್ತೇನೆ ಎನ್ನುವುದು ಗುರುವಂದನೆಯ ಪ್ರಖ್ಯಾತ ಶ್ಲೋಕ. ಶಿಷ್ಯನಿಗೂ ಬಾಧ್ಯತೆಗಳುಂಟು. ಅವನಿಗೆ ಸರಿಯಾದ ಮನಸ್ಥೈರ್ಯ ಹಾಗೂ ಗುರಿಯಿರಬೇಕು. ಈ ಎಲ್ಲ ಗುಣಗಳೂ ಶಿಷ್ಯನಲ್ಲಿ ಸಾಕಷ್ಟು ಪ್ರಮಾಣದಲ್ಲಿದ್ದರೆ, ಗುರುವು ಶಿಷ್ಯನ ಜೀವನದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಪ್ರವೇಶಿಸುತ್ತಾನೆ. ಸಾಮಾನ್ಯವಾಗಿ ಗುರುವಿನ ಪರಿಣಿತಿಯು ಮೇಲ್ನೋಟಕ್ಕೆ ಕಾಣುವುದಿಲ್ಲ ಹಾಗೂ ಅದನ್ನು ಪ್ರಶ್ನಿಸಲೂಬಾರದು. 'ಅಹಂ' ಎನ್ನುವ ಮಂತ್ರವನ್ನು ಸಮರ್ಥವಾಗಿ ಬೋಧಿಸಬಲ್ಲವನೇ ಸರಿಯಾದ ಗುರು ಎಂದು ಕಾಮಕಲಾವಿಲಾಸ ಎನ್ನುವ ಗ್ರಂಥ ಉಲ್ಲೇಖಿಸುತ್ತದೆ. ವಾಸ್ತವವಾಗಿ ಗುರು ಒಬ್ಬ ಕಾರ್ಯಭಾರಿ; ಅವನು ಮಾನವನಾಗಿರಬಹುದು; ದೈವವಾಗಿರಬಹುದು ಅಥವಾ ಇನ್ನಾವ ರೀತಿಯದ್ದಾಗಿರ ಬಹುದು. ಇವನಿಂದಾಗಿ ಸತ್ ಎಂಬುದು ಅಕ್ಷರರೂಪವನ್ನು ಧರಿಸಿ, ದೃಷ್ಟಾರನಾಗಿ ಹತ್ತಾರು ಗುರುಗಳ ಮೂಲಕ ಕಾಣಿಸಿಕೊಳ್ಳುತ್ತಾನೆ. ಇದನ್ನೇ ಗುರುಪರಂಪರೆ ಎಂದು ನಾವು ಕರೆಯುತ್ತೇವೆ. ಆ ಶಾಶ್ವತ ತತ್ವಗಳನ್ನು ತಿಳಿಸುವ ಶ್ರೇಷ್ಠ ತತ್ವವನ್ನು

ದಕ್ಷಿಣಾಮೂರ್ತಿ (ಈಶ್ವರನ ಒಂದು ರೂಪ) ಎಂದು ಕರೆಯುತ್ತೇವೆ. ಇವನು ನಿಜವಾಗಿ ವಿಶ್ವಗುರು. ನಮ್ಮ ಎಲ್ಲ ಪ್ರಯತ್ನಗಳೂ ವಿಫಲವಾದಾಗ, ದಕ್ಷಿಣಾಮೂರ್ತಿಗೆ ಪ್ರಾರ್ಥನೆ ಸಲ್ಲಿಸಿದರೆ, ಶಿಷ್ಯನು ಜ್ಞಾನವನ್ನು ಪಡೆಯಲು ಅರ್ಹನಾಗುತ್ತಾನೆ. ಶ್ರೀ ಶಂಕರಾಚಾರ್ಯರು ರಚಿಸಿರುವ ದಕ್ಷಿಣಾಮೂರ್ತಿ ಸ್ತೋತ್ರವನ್ನು ಈ ಸಂದರ್ಭದಲ್ಲಿ ಗಮನಿಸಬೇಕು.[19]

ಕಾಮಕಲಾವಿಲಾಸದ 51ನೆಯ ಸೂತ್ರದ ಪ್ರಕಾರ ಶಿವನು (ಶುದ್ಧ ಪ್ರಜ್ಞೆ) ಶಕ್ತಿಯ ಗುರು (ವಿಮರ್ಶ). ಶಿವ ತಿಳಿಸಿರುವುದೇ ಶ್ರೀ ವಿದ್ಯಾ. ಶಿವನು ವಿಶ್ವದ ಗುರು ಎಂಬ ಸಾಂಕೇತಿಕ ತತ್ವವನ್ನು ಈ ಸೂತ್ರವು ತಿಳಿಸುತ್ತದೆ. ಇದು ಪದಾರ್ಥ ತತ್ವದ 'ಇದಂತ'; ಇದು 'ಅಹಂತ'ಕ್ಕಿಂತ ಭಿನ್ನವಾಗಿರುತ್ತದೆ.

ತಾತ್ವಿಕವಾಗಿ ಗುರುವನ್ನು ನಾರಾಯಣನೊಡನೆ ಸಮೀಕರಿಸಬೇಕು. ನಿಮಗೆ ಮಾರ್ಗದರ್ಶನ ಬೇಕೆಂಬ ಆಕಾಂಕ್ಷೆ ತೀವ್ರವಾಗಿ ಉಂಟಾದಾಗ, ಶ್ರೀಮಾತೆಯನ್ನೇ ಗುರುವೆಂದು ಭಾವಿಸಿ ಆಕೆಯನ್ನು ಪ್ರಾರ್ಥಿಸಬೇಕು. ಒಂದಲ್ಲ ಒಂದು ರೀತಿಯಲ್ಲಿ ನಿಮಗೆ ಅವಳು ಮಾರ್ಗದರ್ಶನ ನೀಡುತ್ತಾಳೆ. ಸ್ವಪ್ನದಲ್ಲಿ ಬೋಧಿಸಲ್ಪಟ್ಟ ಅಥವಾ ಯೋಚನಾ ಲಹರಿಯಲ್ಲಿ ಹೊಳೆಯುವ, ಅನೇಕ ಮಂತ್ರಗಳಿವೆ. ಯಾರಾದರೂ ತನಗೆ ಗುರು ಅಥವಾ ಆಚಾರ್ಯ ದೊರಕಿಲ್ಲ ಎಂದು ಭಾವಿಸುವುದಾದರೆ, ಸೌಂದರ್ಯಲಹರಿಗೆ ಟೀಕೆಯನ್ನು ಬರೆದ ಆಚಾರ್ಯ ಲೊಲ್ಲ ಲಕ್ಷ್ಮೀಧರನು ಸಹಾಯಕ್ಕೆ ಬರುತ್ತಾನೆ. ತಾನೇ ನಿಮಗೆ ಗುರುವಾಗಿ ಮಾರ್ಗದರ್ಶನ ಮಾಡುವುದಾಗಿ ಈ ಟೀಕೆಯ 32ನೆಯ ಶ್ಲೋಕದಲ್ಲಿ ಹೇಳಿದ್ದಾನೆ. ಶಾಸ್ತ್ರ ಗ್ರಂಥಗಳಲ್ಲಿ ಹೇಳಿರುವಂತೆ ನೀವು ನಡೆದು ಎಲ್ಲ ನಿಯಮಗಳನ್ನೂ ಸರಿಯಾಗಿ ಪಾಲನೆ ಮಾಡಿದರೆ, ನಿಮ್ಮ ಮಾರ್ಗ ಯಾವುದೇ ರೀತಿಯದ್ದಾಗಿದ್ದರೂ, ನಿಮ್ಮ ಸಹಾಯಕ್ಕೆ ಬರುವುದಾಗಿ ಲೊಲ್ಲ ಲಕ್ಷ್ಮೀಧರನು ತಿಳಿಸಿದ್ದಾನೆ. ಈ ಸಾಧನೆಯನ್ನು ಆರಿಸಿಕೊಳ್ಳುವುದಕ್ಕೆ ಮುಂಚೆ ಸಾಧಕನು, ಈ ಅನುಸಂಧಾನದ ಮಹತ್ವವನ್ನು ಕಾಮಕಲಾವಿಲಾಸ, ಸೌಂದರ್ಯಲಹರಿ, ಸಪ್ತಶತಿ, ಷಟ್‌ಚಕ್ರ ನಿರೂಪಣ ಇತ್ಯಾದಿ ಗ್ರಂಥಗಳ ಅಧ್ಯಯನದಿಂದ ತಿಳಿದುಕೊಳ್ಳಬೇಕು. ಸಾಧ್ಯವಾದಷ್ಟು ಮಟ್ಟಿಗೆ ಸಾಧಕನು ಸರಳವಾದ ಮತ್ತು ಸುಲಭವಾಗಿ ಸಾಧಿಸಬಹುದಾದ ಹಾಗೂ ತನ್ನ ಹಿರಿಯರಿಂದ ಅಥವಾ ಗುರುಗಳಿಂದ ಸಮ್ಮತಿಸಲ್ಪಟ್ಟ ಮಾರ್ಗವನ್ನು ಆಯ್ದುಕೊಳ್ಳಬೇಕು. ಸಾಧನೆಯು ನಿರಂತರವಾಗಿ ಅಡಚಣೆಗಳಿಲ್ಲದೆ ಇರಬೇಕು. ಸ್ವಲ್ಪ ಸಮಯದ ನಂತರ, ನಿಜವಾದ ಸಂದೇಹಗಳನ್ನು ನಿವಾರಿಸಿಕೊಳ್ಳಬೇಕಾದರೆ, ಮಠಗಳ ಆಚಾರ್ಯರು ಹಾಗೂ ಶ್ರೀ ರಮಣ ಮಹರ್ಷಿ, ಶ್ರೀ ಅರಬಿಂದೊ ಮುಂತಾದವರು ನಿಮಗೆ ಮಾರ್ಗದರ್ಶನ ನೀಡುತ್ತಾರೆ.

ಪ್ರಶ್ನೆ ೧೯: ಗುರುವನ್ನು ಗುರುತಿಸುವುದು ಹೇಗೆ ?

ಉತ್ತರ : 17ನೆಯ ಪ್ರಶ್ನೆಗೆ ಉತ್ತರ ನೀಡುವಾಗ, ಗುರುವಿನ ಅವಶ್ಯಕತೆ ಮತ್ತು ಅವರ ಗುಣಲಕ್ಷಣಗಳನ್ನು ವಿವರಿಸಲಾಗಿದೆ. ವಾಸ್ತವವಾಗಿ, ಮಂತ್ರವನ್ನು ಉಪದೇಶಿಸುವ

ಗುರುವಿಗೂ ಪೂಜಿಸಲ್ಪಡುವ ದೇವತೆಗೂ ಯಾವ ಭೇದವೂ ಇಲ್ಲ. ವಿಶೇಷ ದಯೆಯನ್ನು ತೋರುವ, ಅಜ್ಞಾನವನ್ನು ಹಾಗೂ ಭಯವನ್ನು ನಿವಾರಿಸುವ ಮುಂತಾದ ಗುಣಗಳು ಇಬ್ಬರಿಗೂ ಸಮನಾಗಿರುತ್ತವೆ. ಇವೆಲ್ಲಕ್ಕಿಂತ ಮುಖ್ಯವಾಗಿ ಅವನು ಪ್ರೇರಣೆಯನ್ನು ಒದಗಿಸಬೇಕು; ಇದು ವಿಶೇಷವಾಗಿ ಮಾತಿನ ರೂಪದಲ್ಲಿರದೆ ನಿಶ್ಯಬ್ದವಾದ ಆಚರಣೆಗಳಿಂದ ಕೂಡಿರಬೇಕು. ಅವನು ಸ್ವತಃ ನಿಯಂತ್ರಣವನ್ನು ಹೊಂದಿರಬೇಕು ಹಾಗೂ ಭಯರಹಿತನಾಗಿರಬೇಕು. ಅವನು ಆಡುವ ಮಾತುಗಳು ಕೇವಲ ನಿಮ್ಮ ಬಾಹ್ಯ ಕಿವಿಗಳ ಮೇಲೆ ಬೀಳದೆ, ಆಂತರಿಕ ಕಿವಿಗಳನ್ನು ತಟ್ಟಬೇಕು. ಸಾಧ್ಯವಾದಷ್ಟು ಮಟ್ಟಿಗೆ ದೈನಂದಿನ ಕಷ್ಟ ಕಾರ್ಪಣ್ಯಗಳಿಂದ ದೂರವಿರಬೇಕು. ಎಲ್ಲದಕ್ಕಿಂತ ಮುಖ್ಯವಾಗಿ ಅವನು ನಿಮ್ಮಿಂದ ಯಾವ ವಿಧವಾದ ಆರ್ಥಿಕ ಅಥವಾ ಇತರ ನೆರವನ್ನು ಪಡೆಯಬಾರದು. ಅವನಿಗೆ ನಿಮ್ಮಿಂದ ಬೇಕಾದದ್ದು ನಿಮ್ಮ ಪೂರ್ಣ ಮಾನಸಿಕ ಸಮರ್ಪಣೆ; ಅದೇ ರೀತಿಯಲ್ಲಿ ಶಿಷ್ಯನು ಗುರುವಿನ ಬಗೆಗೆ ಹೊಂದಿರುವ ಗೌರವ ಪೂರ್ಣ ಭಾವನೆಯೂ ಬಹಳ ಮುಖ್ಯವಾದುದು. ಯಾವ ಪ್ರಶ್ನೆಯನ್ನೂ ಮಾಡದೆ ಇಷ್ಟದೇವತೆಗೆ ಸಮರ್ಪಣೆ ಮಾಡಿಕೊಳ್ಳುವಂತೆ ಗುರುವಿಗೂ ಸಮರ್ಪಣೆ ಮಾಡಿಕೊಳ್ಳಬೇಕು. ಈ ದೃಷ್ಟಿಯಿಂದ ಗಮನಿಸಿದರೆ ಶಿಷ್ಯನ ಜೀವನದ ಪೂರ್ಣ ಜವಾಬ್ದಾರಿಯೂ ಗುರುವಿಗೇ ಸೇರಿದ್ದು. ಆದುದರಿಂದ ಒಬ್ಬ ಶಿಷ್ಯನನ್ನು ಆರಿಸಿಕೊಳ್ಳುವುದಕ್ಕಿಂತ ಮುಂಚೆ ಗುರುವು ನೂರು ಸಾರಿ ಆಲೋಚಿಸಿ ತೀರ್ಮಾನ ತೆಗೆದುಕೊಳ್ಳಬೇಕು. ಅದೇ ರೀತಿಯಲ್ಲಿ ಒಬ್ಬ ಶಿಷ್ಯನೂ, ಗುರುವನ್ನು ಆರಿಸಿಕೊಳ್ಳುವುದಕ್ಕೆ ಮುಂಚೆ, ಗುರುವಿಗೆ ಪೂರ್ಣ ಶರಣಾಗುವ ಮಾನಸಿಕ ಸ್ಥಿತಿಯನ್ನು ಹೊಂದಿರಬೇಕು. ಆದುದರಿಂದ ಗುರು-ಶಿಷ್ಯರ ಸಂಬಂಧ ಎನ್ನುವುದು ಆಧ್ಯಾತ್ಮಿಕ ಮತ್ತು ಮಾನಸಿಕವಾಗಿರಬೇಕು; ಜೊತೆಗೆ ಶುಶ್ರೂಷೆಯೂ ಸೇರಿಕೊಂಡಿರಬೇಕು.

ಪ್ರಶ್ನೆ ೨೦ : ನಿರ್ಗುಣವಾಗಿರತಕ್ಕಂಥ ಗುರಿಯನ್ನು ಸಾಧಿಸಲು ಇಷ್ಟೆಲ್ಲ ವಿವರವಾದ ತಾಂತ್ರಿಕತೆ ಹಾಗೂ ಧಾರ್ಮಿಕ ವಿಧಿ-ವಿಧಾನಗಳು ಏಕೆ ಬೇಕು?

ಉತ್ತರ : ಆದಿಶಂಕರಾಚಾರ್ಯರ ಪ್ರಕಾರ ಯಾವ ನಾಮ ರೂಪಗಳು ಇಲ್ಲದ ಅದ್ವೈತದ ಗುರಿಯನ್ನು ಮುಟ್ಟಲು ಪೂಜೆ ಪುನಸ್ಕಾರಗಳ ಅವಶ್ಯಕತೆಯಾದರೂ ಏನು ಎಂದು ಅನೇಕರು ಪ್ರಶ್ನಿಸುತ್ತಾರೆ. ನಿಜವಾಗಿಯೂ ಗುರಿಯು ಅದ್ವೈತವಾದದ್ದೇ ಆಗಿದ್ದರೂ ನಮ್ಮಂತಹ ಸಾಮಾನ್ಯ ಜನಗಳಿಗೆ, ಅದು ಸಾಧಿಸಬೇಕಾದ ಗುರಿಯೇ ಆಗಿದೆ. ನಾವು ಕಣ್ಣಿಗೆ ಕಾಣುವ ದ್ವೈತ ಜಗತ್ತಿನಲ್ಲಿ ವಾಸಿಸುತ್ತೇವೆ; ಆದರೆ ಅದರ ಹಿಂದೆ ನಿಜವಾದ ಅದ್ವೈತವಿದೆ. ಈ ದ್ವೈತ ಗುರಿಯಿಂದ ಹೊರಬರಲು ನಾವು ಪೂಜೆ ಪುನಸ್ಕಾರ, ಭಕ್ತಿ

ಮುಂತಾದವನ್ನು ಆಶ್ರಯಿಸುತ್ತೇವೆ. ಇವೆಲ್ಲವೂ ದ್ವೈತದ ವಲಯದಲ್ಲೇ ಇದ್ದರೂ, ಅವು ತಾವಾಗಿ ಅದ್ವೈತ ಗುರಿಯಲ್ಲಿ ಲೀನವಾಗುತ್ತವೆ. ಅದು ಅನುಭವಕ್ಕೆ ಬಂದರೆ, ಮನಸ್ಸು ಉಪಾಧಿಗಳನ್ನು ಗ್ರಹಿಸುವುದಿಲ್ಲ. ಉಪಾಧಿಗಳಿರುವ ಮನಸ್ಸಿಗೆ, ಉಪಾಧಿಗಳಿಲ್ಲದಿರುವ ಪೂಜೆ ಸಾಧ್ಯವೇ ಆಗುವುದಿಲ್ಲ. ಆದುದರಿಂದ ಆದಿ ಶಂಕರಾಚಾರ್ಯರು ತಮ್ಮ ಬ್ರಹ್ಮಸೂತ್ರ ಭಾಷ್ಯದಲ್ಲಿ (ದೇವತಾಧಿಕರಣ) 'ದೇವತೆಗಳು ಮಂತ್ರಗಳಿಂದ ಪ್ರಕಾಶಿಸುತ್ತಾರೆ ಮತ್ತು ರೂಪಗಳನ್ನು ಪಡೆಯುತ್ತಾರೆ' ಎಂಬ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ಆದುದರಿಂದ ಪರಮಾತ್ಮ ತತ್ವದ ಸಂಕೇತವೆನಿಸಿದ ಒಂದು ವಿಗ್ರಹ ಅಥವಾ ಚಿತ್ರದ ಅವಶ್ಯಕತೆ ಇದೆ.

ಪ್ರಶ್ನೆ ೨೧ : ಈ ವಿದ್ಯೆಗೆ ಸಂಬಂಧಿಸಿದಂತೆ, ಸಂಹಿತೆ, ಉಪನಿಷತ್ತು ಮುಂತಾದವುಗಳ ಜ್ಞಾನದ ಅವಶ್ಯಕತೆ ಒಬ್ಬ ವಿದ್ಯಾರ್ಥಿಗೆ ಇದೆಯೇ ? ಅಥವಾ ಇವುಗಳನ್ನು ಅರಿಯದೆಯೇ ಈ ವಿದ್ಯೆ ಯನ್ನು ಅಭ್ಯಾಸ ಮಾಡಲು ಸಾಧ್ಯವೇ?

ಉತ್ತರ : ನಾವು ಮಾಡುತ್ತಿರುವ ಪೂಜೆ ಪುನಸ್ಕಾರಗಳ ಕನಿಷ್ಠ ತಿಳಿವಳಿಕೆ ಅಗತ್ಯ. ನಾವು ಪೂಜೆಯನ್ನು ಏಕೆ ಮತ್ತು ಹೇಗೆ ಮಾಡುತ್ತೇವೆ ಎಂಬುದನ್ನು ತಿಳಿದುಕೊಂಡರೆ ಫಲವು ಬೇಗ ಸಿಗುತ್ತದೆ. ಇಲ್ಲದಿದ್ದರೆ ಅದು ಅರ್ಥಹೀನ ಕ್ರಿಯೆಯಾಗುತ್ತದೆ ಮತ್ತು ಕಾಲಕ್ರಮದಲ್ಲಿ ಯಾಂತ್ರಿಕ ಕೌಶಲದ ಪ್ರತಿವರ್ತನೆಯಾಗಿಬಿಡುತ್ತದೆ. ಉದಾಹರಣೆಗೆ ಒಂದು ಮಂತ್ರವನ್ನು ಅದರ ಅರ್ಥವನ್ನು ಅರಿಯದೇ ಪುನಃ ಪುನಃ ಉಚ್ಚರಿ ಸುವುದರಿಂದ, ಶಬ್ದಬ್ರಹ್ಮನ ಮೂಲಕ ಆ ಮಂತ್ರದಲ್ಲಿರುವ ಶಕ್ತಿಯುತ ಅಕ್ಷರಗಳಿಂದ ಪ್ರಯೋಜವಾಗುತ್ತದೆ. ಆದರೂ ಅದರ ಅರ್ಥವನ್ನು ತಿಳಿದುಕೊಂಡು ಮಾಡಿದರೆ ಅದರ ಆಚರಣೆಯು ಇನ್ನೂ ಸುಲಭವಾಗುತ್ತದೆ.

ಉದಾಹರಣೆಗೆ ಓಂ ಎಂಬ ಒಂದು ಅಕ್ಷರವನ್ನು ತೆಗೆದುಕೊಳ್ಳೋಣ. ಈ ಅಕ್ಷರವನ್ನು ಅ, ಉ, ಮ ಮತ್ತು ಅದರ ನಂತರದ ಬಿಂದು ಎಂದು ನಾಲ್ಕು ಭಾಗಗಳಾಗಿ ವಿಭಾಗಿಸಬಹುದು. ಈ ನಾಲ್ಕು ಭಾಗಗಳು ಜಾಗೃತ, ಸ್ವಪ್ನ, ನಿದ್ರೆ ಹಾಗೂ ಸುಷುಪ್ತಿಗಳೆಂಬ ನಾಲ್ಕು ಅವಸ್ಥೆಗಳನ್ನು ಸಂಕೇತಿಸುತ್ತವೆ ಎಂದು ಶ್ರೇಷ್ಠ ಉಪನಿಷತ್ತುಗಳಲ್ಲಿ ಮುಖ್ಯವಾದುದೆಂದು ಪರಿಗಣಿತವಾಗಿರುವ ಮಾಂಡೂಕ್ಯೋಪನಿಷತ್ತಿನಲ್ಲಿ ಹೇಳಿದೆ. ಆದುದರಿಂದ ಓಂ ಎಂಬ ಮಂತ್ರದ ಅರ್ಥವನ್ನು ಪೂರ್ಣವಾಗಿ ತಿಳಿದು ಧ್ಯಾನ ಮಾಡಿದರೆ, ಈ ಮಂತ್ರದ ಮೂಲಕ ಮೂಲಭೂತ ತತ್ವವನ್ನು ತಿಳಿಯುವುದು ಸುಲಭವಾಗುತ್ತದೆ. ಇದೇ ಮಾತನ್ನು ಶ್ರೀ ಚಕ್ರಕ್ಕೂ ಅನ್ವಯಿಸಬಹುದು. ಸಹಸ್ರನಾಮ ಹಾಗೂ ಇತರ ಪೂಜೆಗಳನ್ನು ಮಾಡುವುದಕ್ಕೂ ಈ ಮೇಲಿನ ಮಾತುಗಳು ಅನ್ವಯಿಸುತ್ತವೆ.

ಉದಾಹರಣೆಗೆ ಮಿಥ್ಯಾ ಜಗದಧಿಷ್ಠಾನಾಯೈ ನಮಃ ಎನ್ನುವ ನಾಮವನ್ನು ಹೇಳಿ ಶ್ರೀ ಲಲಿತೆಗೆ ಒಂದು ಹೂವನ್ನು ಅರ್ಪಿಸುವುದನ್ನು ಗಮನಿಸೋಣ. ಈ ಹೆಸರಿನ ಅರ್ಥ ಏನೆಂದರೆ: "ಅಸತ್ಯ ವಿಶ್ವದ ಛಾಯೆಯು ಪ್ರತಿಬಿಂಬಿತವಾಗಿರುವಂತೆ ಕಾಣುವ ನಿನ್ನ ಮೂಲಭೂತ ತತ್ವಕ್ಕೆ ನಾನು ಶಿರಸಾ ನಮಸ್ಕರಿಸುತ್ತೇನೆ". ಇಂತಹ ಶ್ರೇಷ್ಠ ನಾಮದ ಅರ್ಥವನ್ನು ತಿಳಿದುಕೊಂಡು ಪೂಜೆ ಮಾಡಿದರೆ ಅಥವಾ ಮನನ ಮಾಡಿದರೆ ಈ ಸಾಧನೆಯಲ್ಲಿ ಫಲವನ್ನು ಹೊಂದಲು ವಿಶೇಷವಾಗಿ ಸಹಾಯವಾಗುತ್ತದೆ. ಈ ಎಲ್ಲ ಅಂಗಗಳ ಅರ್ಥವನ್ನು ತಿಳಿಯುವುದು ಅಗತ್ಯವಾದರೂ ಇವೆಲ್ಲವೂ ನಾವು ಆಗಲೇ ಗಮನಿಸಿರುವ ಗುರಿಯ ಪ್ರಗತಿಗೆ ಹೊಂದಿಕೊಳ್ಳಬೇಕಾದುದು ಅತ್ಯಗತ್ಯ.

ಪ್ರಶ್ನೆ ೨೨: ಈ ಅಭ್ಯಾಸವನ್ನು ಪ್ರತಿದಿನವೂ ಮಾಡಬೇಕೇ ?

ಉತ್ತರ : ನಿತ್ಯವೂ ಮಾಡುವ (ನಿತ್ಯ ನೈಮಿತ್ತಿಕ) ಕಾರ್ಯಗಳಂತೆ ಈ ಅಭ್ಯಾಸವನ್ನು ದಿನನಿತ್ಯವೂ ಮಾಡಬಹುದು. ಆದರೆ ಆಶೌಚದ ದಿನಗಳು ಅಂದರೆ ಬಂಧು ಬಾಂಧವರ ಮರಣದ ಅಥವಾ ಹುಟ್ಟಿದ ದಿನಗಳ ಸಮಯದಲ್ಲಿ ಹತ್ತು ಅಥವಾ ಹನ್ನೆರಡು ದಿನಗಳ ಕಾಲ ಇದನ್ನು ಮಾಡಬಾರದು. ಕೆಲವು ತಂತ್ರಗ್ರಂಥಗಳಲ್ಲಿ, ಈ ಸಮಯದಲ್ಲಿಯೂ ಸಾರಾಂಶರೂಪದ ಆಚರಣೆಯನ್ನು ಮಾಡಲು ಅವಕಾಶ ಕಲ್ಪಿಸಲಾಗಿದೆ. ಇಲ್ಲಿ ಒತ್ತಿ ಹೇಳಬೇಕಾದ ಅಂಶವೆಂದರೆ ಪ್ರತಿನಿತ್ಯವೂ ಇದನ್ನು ಮಾಡುವುದರಿಂದ, ಸಾಧಕನು ಉತ್ತಮನಾಗುತ್ತಾನೆ. ಸಾಧ್ಯವಾಗುವುದಾದರೆ, ಆರೋಗ್ಯ ಅಷ್ಟೇನೂ ಚೆನ್ನಾಗಿಲ್ಲದಿದ್ದರೂ, ಅಥವಾ ಪ್ರಯಾಣ ಮಾಡುತ್ತಿದ್ದರೂ ಅಥವಾ ಬೇರೆ ಕಾರ್ಯದಲ್ಲಿ ಮಗ್ನನಾಗಿದ್ದರೂ, ಈ ಸಾಧನೆಯನ್ನು ನಿಲ್ಲಿಸುವುದು ಒಳ್ಳೆಯದಲ್ಲ. ಈ ಸಂದರ್ಭದಲ್ಲಿ ಶ್ರೀ ಲಲಿತಾಸಹಸ್ರನಾಮದ 44, 45 ಮತ್ತು 46ನೆಯ ಪೂರ್ವಭಾಗವನ್ನು ಓದುಗರು ಗಮನಿಸಬೇಕು. "ಶ್ರೀ ಚಕ್ರ ಪೂಜೆ ಅಥವಾ ಮಂತ್ರ ಜಪವನ್ನು ಮಾಡಲು ನಿಮಗೆ ಆಗದೇ ಇದ್ದರೆ, ನನ್ನ ಸಹಸ್ರನಾಮದ ಸ್ತೋತ್ರಗಳನ್ನು ಹೇಳಿಕೊಂಡರೂ ನಾನು ಸುಪ್ರೀತಳಾಗುತ್ತೇನೆ. ಇದರಲ್ಲಿ ಯಾವ ಸಂದೇಹವೂ ಇಲ್ಲ; ನನ್ನ ಕೃಪೆಯಿಂದ ಎಲ್ಲ ಆಕಾಂಕ್ಷೆಗಳೂ ಪೂರ್ಣಗೊಳ್ಳುತ್ತವೆ" ಎಂದು ಹೇಳಲಾಗಿದೆ.

ಮಾನಸಿಕ ರೂಪದ ಪೂಜೆಗಳೂ ಇಲ್ಲಿವೆ. ಹೆಚ್ಚಿನ ಶ್ರಮವಿಲ್ಲದೆ, ನಿಮ್ಮ ಮನಸ್ಸಿಗೆ ಇಷ್ಟವಾದರೆ ಪಂಚೋಪಚಾರ ಅಥವಾ ಷೋಡಶೋಪಚಾರ ಪೂಜೆಯನ್ನು ಮಾಡಬಹುದು. ಪದ್ಮಾಸನದಲ್ಲಿ ಕುಳಿತುಕೊಳ್ಳಲು ನಿಮಗೆ ಆಗದಿರಬಹುದು; ನಿರ್ಜನವಾದ ಪ್ರದೇಶವು ದೊರಕದಿರಬಹುದು; ರೈಲು ಅಥವಾ ವಿಮಾನದಲ್ಲಿ ಪ್ರಯಾಣಿಸುತ್ತಿರಬಹುದು ಅಥವಾ ಹೋಟೆಲಿನಲ್ಲಿರಬಹುದು. ನೀವು ಎಲ್ಲೇ ಇರಲಿ ಅಥವಾ ಹೇಗೇ ಇರಲಿ ಅಥವಾ ಏನನ್ನೇ ಮಾಡುತ್ತಿರಲಿ, ಕಣ್ಣುಗಳನ್ನು ಮುಚ್ಚಿಕೊಂಡು,

ಸುತ್ತಮುತ್ತಲಿನ ಗಲಾಟೆಯಿಂದ ನಿಮ್ಮ ಮನಸ್ಸನ್ನು ದೂರಸರಿಸಿಕೊಂಡು, ಪುಂಡರೀಕಾಕ್ಷನ ನಾಮವನ್ನು ನೆನಪಿಸಿಕೊಂಡು ನಿಗದಿತ ಕ್ರಮದಲ್ಲಿ ಆ ಸಮಯಕ್ಕೆ ಸರಿಹೊಂದುವಂತೆ ಮಾನಸಿಕ ಪೂಜೆಯನ್ನು ಮಾಡಬೇಕು. ಆದರೆ ಕೆಲವು ನಿರ್ದಿಷ್ಟ ಹಗಲು ಮತ್ತು ರಾತ್ರಿಗಳಲ್ಲಿ ವಿಶೇಷ ಪೂಜೆಯನ್ನು ಮಾಡುವುದು ಅವಶ್ಯಕ.[20] ಆ ವಿಶೇಷ ದಿನಗಳು ಯಾವುವೆಂದರೆ ಶುಕ್ರವಾರಗಳು, ಪೌರ್ಣಿಮಿಗಳು, ಗ್ರಹಣ ದಿನಗಳು, ಸಂಕ್ರಾಂತಿಯ ದಿನಗಳು (ಮಕರ ಮತ್ತು ಕರ್ಕಾಟಕ), ಶುಕ್ಲಪಕ್ಷದ ಒಂಬತ್ತನೆಯ (ನವಮಿ) ಮತ್ತು ಹದಿನಾಲ್ಕನೆಯ (ಚತುರ್ದಶಿ) ದಿನಗಳು ಹಾಗೂ ಸಾಧಕನ, ಅವನ ಹೆಂಡತಿಯ ಮತ್ತು ಅವನ ಮಕ್ಕಳ ಹುಟ್ಟಿದ ದಿನಗಳು, ಇಂತಹ ದಿನಗಳಲ್ಲಿ ಅವನು ಕನಿಷ್ಠ ಮಾಡಬೇಕಾದುದು ಏನೆಂದರೆ 108 ಸಾರಿ ಮಂತ್ರ ಜಪ ಮತ್ತು ಸಹಸ್ರನಾಮ ಅಥವಾ ತ್ರಿಶತಿ (300) ಪಠನ. ಸ್ವಲ್ಪ ಶ್ರಮವಹಿಸಿ ಅಭ್ಯಾಸ ಮಾಡಿದರೆ ಶ್ರೀ ಲಲಿತೆಯ ನೂರು ನಾಮಗಳನ್ನು ಬಾಯಿಪಾಠ ಮಾಡಿಕೊಳ್ಳಬಹುದು. ಈ ರೀತಿ ನಿರಂತರ ಅಭ್ಯಾಸವನ್ನು ಮಾಡುವುದು ಅಂತಹ ಕಷ್ಟಕರವಾದ ಕೆಲಸವೇನಲ್ಲ. ಮೇಲೆ ಹೇಳಿರುವುದು ಕನಿಷ್ಠವಾಗಿ ಮಾಡಬೇಕಾದ್ದು. ಇದನ್ನು ಮಾಡುವುದರಿಂದ ಸಾಧಕನಿಗೆ ಪರಂಪರೆಯ ಪ್ರಕಾರ ಬಹಿರ್ಯಾಗ ಅಂದರೆ ಪೂಜಾದಿಗಳನ್ನು ಮಾಡಲು ಸಾಕಷ್ಟು ಸಮಯ, ಅವಕಾಶಗಳು ಹಾಗೂ ಉತ್ಸಾಹ ದೊರಕದೇ ಇರುವುದಿಲ್ಲ. ಕೆಲವು ಭಕ್ತರು ಬೆಳಿಗ್ಗೆ ಮತ್ತು ಸಾಯಂಕಾಲ ಸಹಸ್ರನಾಮಾರ್ಚನೆಯನ್ನು ಮಾಡುವುದಲ್ಲದೆ ನವಾವರಣ ಪೂಜೆ ಹಾಗು ಜಪಗಳನ್ನೂ ಮಾಡುತ್ತಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಹಾಗೂ ಮನಸ್ಸಿನಲ್ಲಿಟ್ಟುಕೊಳ್ಳಬೇಕಾದ ಅಂಶವೆಂದರೆ, ಮೇಲೆ ಹೇಳಿದ ಪ್ರತಿಯೊಂದು ಧಾರ್ಮಿಕ ಕ್ರಿಯೆಯ ಹಿಂದಿರುವ ಸಂಕೇತಗಳು. ಸಾಧ್ಯವಾದಷ್ಟು ಮಟ್ಟಿಗೆ ಈ ಎಲ್ಲ ಕಾರ್ಯಗಳನ್ನು, ದೈನಂದಿನ ಪೂಜೆಗಳನ್ನು ಸರಿಯಾದ ಮಾರ್ಗದಲ್ಲಿ ನೆರವೇರಿಸಬೇಕು. ಖಂಡಿತವಾಗಿಯೂ ಪರಂಪರೆಯಿಂದ ಬಂದಿರುವ ಕ್ರಮಗಳನ್ನು ನಿಮ್ಮ ಸ್ವಬುದ್ಧಿಯಿಂದ ಅಧಿಕೃತವಲ್ಲದ ರೀತಿಯಲ್ಲಿ ಮಾರ್ಪಾಟು ಮಾಡಬೇಡಿ. ಪೂಜೆ ಅಥವಾ ಬಹಿರ್ಯಾಗವನ್ನು ಮಾಡುವುದಾದರೆ, ಅದನ್ನು ಸರಿಯಾದ ಕ್ರಮದಲ್ಲಿ ಮಾಡಬೇಕು.

ಪ್ರಶ್ನೆ ೨೩: ಇದನ್ನು ಸರಿಯಾಗಿ ಮಾಡದೇ ಅರೆಕೊರೆಗಳು ಕಂಡುಬಂದರೆ ಅದರಿಂದ ಉಂಟಾಗುವ ಪರಿಣಾಮಗಳೇನು? ಇದಕ್ಕಾಗಿಯೇ ಖಚಿತವಾದ ಯಾವುದಾದರೂ ಜೀವನಕ್ರಮವಿದೆಯೇ ಹಾಗೂ ಆಹಾರಕ್ರಮ ವಿದೆಯೇ ?

ಉತ್ತರ : ಭಕ್ತನು ಅನುಸರಿಸುವ ಮಾರ್ಗಗಳು ಹಾಗೂ ಗುರಿ ಸರಿಯಾಗಿದ್ದರೆ, ಒಬ್ಬ ತಾಯಿಯು ತನ್ನ ಮಕ್ಕಳು ಮಾಡುವ ಕೀಟಲೆ ಹಾಗೂ ತಪ್ಪುಗಳಿಂದ

ಸಂತೋಷಗೊಳ್ಳುವಂತೆ, ಶ್ರೀಮಾತೆಯು ಭಕ್ತನ ತಪ್ಪುಗಳನ್ನು ಅರ್ಪಣೆ ಎಂದೇ ಸ್ವೀಕರಿಸುತ್ತಾಳೆ. ಶಂಕರ ಭಗವತ್ಪಾದರು "ಶ್ರೀ ದೇವ್ಯಾಪರಾಧ ಸ್ತೋತ್ರ'ವನ್ನು ರಚಿಸಿ, ಭಕ್ತರ ಸಂದೇಹಗಳನ್ನು ನಿವಾರಿಸಿದ್ದಾರೆ. ಇಲ್ಲಿನ ಅನೇಕ ಶ್ಲೋಕಗಳಲ್ಲಿ ಆಚಾರ್ಯರು ಒಬ್ಬ ಕೆಟ್ಟ ಮಗನಿರಬಹುದೇ ಹೊರತು ಒಬ್ಬ ಕೆಟ್ಟ ತಾಯಿಯು ಇರಲು ಸಾಧ್ಯವಿಲ್ಲ(ಕುಪುತ್ರೋ ಜಾಯತೇ ಕ್ವಚಿದಪಿ ಕುಮಾತಾನಭವತಿ) ಎಂಬ ಅಭಿಪ್ರಾಯವನ್ನು ತಿಳಿಸಿದ್ದಾರೆ. ಈ ಸ್ತೋತ್ರವನ್ನು ಪುನಃ ಪುನಃ ಪಠಿಸಿದರೆ ಬುದ್ಧಿಪೂರ್ವಕವಾಗಿ ಮಾಡದೇ ಇರುವ ತಪ್ಪುಗಳಿಗೆ ಪ್ರಾಯಶ್ಚಿತ್ತವಾಗುತ್ತದೆ. ತನ್ನ ಇಷ್ಟದೇವತೆಯನ್ನು ಯೋನಿಮುದ್ರೆಯ[21] ಮೂಲಕ ಪೂಜಿಸಿದರೆ, ಅಂತಹ ಭಕ್ತನ ತಪ್ಪು ಒಪ್ಪುಗಳು ಕ್ಷಮಿಸಲ್ಪಡುತ್ತವೆ. ಇದು ಪೂಜಿಸುವ ಕ್ರಮದ ಹತ್ತು ಮುದ್ರೆಗಳಲ್ಲಿ ಒಂಬತ್ತನೆಯದಾಗಿದ್ದು, ಇದನ್ನು 'ಮುದ್ರೆಗಳು' ಎನ್ನುವ ಭಾಗದಲ್ಲಿ ಮೇಲೆ ವಿವರಿಸಲಾಗಿದೆ. ಇದನ್ನು ಮಾಡಲು ಜೀವನಕ್ರಮಗಳ ವಿಷಯದಲ್ಲಿ ಹೇಳುವುದಾದರೆ, ಸಾಧಕನು ಹಿಂದೂ ಆಗಿರಬೇಕು ಹಾಗೂ ಹಿಂದೂ ಧರ್ಮಕ್ಕೆ ಅನುಗುಣವಾದ ಆಶ್ರಮ ಇತ್ಯಾದಿಗಳನ್ನು ಪಾಲಿಸಬೇಕು. ಪ್ರಪಂಚಸಾರ, ವಾಮಕೇಶ್ವರಸಾರ ಮುಂತಾದ ತಂತ್ರಗ್ರಂಥಗಳು ಸಾಧಕನು ಯಾವ ಜೀವನಕ್ರಮವನ್ನು ಅನುಸರಿಸಬೇಕು; ಯಾವ ಆಹಾರವನ್ನು ತಿನ್ನಬೇಕು ಎನ್ನುವ ವಿಚಾರವನ್ನೂ ತಿಳಿಸಿವೆ. ಇವನ್ನು ವಾಮಾಚಾರ ಮತ್ತು ದಕ್ಷಿಣಚಾರಗಳನ್ನು ವಿವರಿಸುವಾಗ ಗಮನಿಸಲಾಗಿದೆ.

ಪ್ರಶ್ನೆ ೨೪: ವಾಮಾಚಾರವೆಂದರೇನು ?

ಉತ್ತರ : ಪದದ ಅರ್ಥವನ್ನು ತೆಗೆದುಕೊಂಡರೆ ಅದು ಎಡಗೈ ಮಾರ್ಗ. ವೈದಿಕಕ್ಕಿಂತ ಭಿನ್ನವಾದ ತಾಂತ್ರಿಕ ಮಾರ್ಗವೇ ಅದು. ಅದನ್ನು ಕೌಲಾಚಾರವೆಂದೂ ಕರೆಯುತ್ತಾರೆ. ಅದು ದಕ್ಷಿಣಾಚಾರದ ಮತ್ತೊಂದು ರೂಪ. ಈ ಎರಡಕ್ಕೂ ಇರುವ ಮುಖ್ಯ ಭೇದವೆಂದರೆ ಸಮಯಾಚಾರ ಅಥವಾ ದಕ್ಷಿಣಾಚಾರವು ಅಂತರ್ಯಾಗ ಅಂದರೆ ಮಾನಸಿಕ ಪೂಜಾಕ್ರಮಗಳಿಗೆ ಹೆಚ್ಚಿನ ಮಹತ್ವವನ್ನು ನೀಡುತ್ತದೆ. ಭಾವನೋಪನಿಷತ್ತಿನಲ್ಲಿಯೂ ಇದು ಹೇಳಲ್ಪಟ್ಟಿದೆ. ಒಟ್ಟಿನಲ್ಲಿ ಹೇಳಬೇಕೆಂದರೆ, ಮನಸ್ಸು, ತನ್ನ ಇಂದ್ರಿಯಗಳು, ಅವುಗಳ ಆಸೆಗಳು, ಹಾಗೂ ಅವುಗಳ ಪೂರೈಕೆಯನ್ನು ಮಾನಸಿಕವಾಗಿ ದೇವತೆಗೆ ಅರ್ಪಿಸುತ್ತದೆ. ಆದರೆ ಸಮಯಾಚಾರ ಉಪದೇಶವನ್ನು ಪಡೆದವರು, ಮಾಡಬೇಕಾದ ಪೂಜಾಕಾರ್ಯಗಳಿಗೆ ಯಾವ ಬಾಧಕವೂ ಇಲ್ಲ. ವಾಮಾಚಾರದಲ್ಲಿ ಇಷ್ಟದೇವತೆಗೆ ಇಂದ್ರಿಯದ ವಸ್ತುಗಳನ್ನೇ ಅರ್ಪಿಸುತ್ತಾರೆ. ಅತ್ಯಂತ ತೀವ್ರತರವಾದ ಉದಾಹರಣೆಯನ್ನು ಕೊಡುವುದಾದರೆ ವಾಮಾಚಾರಿಯು ದೇವತೆಯನ್ನು ತೃಪ್ತಿಪಡಿಸುವುದಕ್ಕೋಸ್ಕರ ಲೈಂಗಿಕ ಕ್ರಿಯೆಯನ್ನೇ ಅರ್ಪಿಸುತ್ತಾನೆ. ಆದರೆ ವಾಮಾಚಾರಿಯು ವಿಶೇಷವಾಗಿ ಮಾನಸಿಕವಾಗಿ

ಅಥವಾ ವಾಸ್ತವವಾಗಿ ಇಂದ್ರಿಯಗಳಿಗೆ ಅರಿವಿರುವ ಜೇನು, ಪುಷ್ಪ ಮುಂತಾದವುಗಳನ್ನು ಅರ್ಪಿಸುತ್ತಾನೆ. ನಿಜವಾಗಿಯೂ ಇದರಲ್ಲಿ ಸಾಕಷ್ಟು ಸಾಂಕೇತಿಕತೆ ಇದೆ. ಈ ಎರಡೂ ಬಹಳ ಪ್ರಾಚೀನ ಕಾಲದಲ್ಲಿ ಸೇರಿಕೊಂಡವು. ಇಂದು ನಮಗೆ ಕಾಣುತ್ತಿರುವುದು. ಈ ಎರಡೂ ಸಾಧನೆಗಳ ಮಿಶ್ರಣ ಮಾತ್ರ. ಶ್ರೀ ವಿದ್ಯೆಯಲ್ಲಿ ಇವೆರಡರಲ್ಲಿ ಹೆಚ್ಚು ಕಡಿಮೆ ಭಕ್ತ, ಇಷ್ಟದೈವ, ಮಂತ್ರ, ಗುರು, ಇವುಗಳಿಗನುಗುಣವಾಗಿ ಸಮಾನವಾದ ಆಚರಣೆಗಳಿವೆ. ಪರಿಣಿತನಾದ ಭಕ್ತನ ವಿಷಯದಲ್ಲಿ ಶ್ರೀಲಲಿತಾ ಸಹಸ್ರನಾಮವು ಈ ಎರಡನ್ನೂ ಒಪ್ಪಿಕೊಂಡಿದೆ. ಪಂಚಮಕಾರ ಅಥವಾ ಪಂಚತಂತ್ರ ಆಚರಣೆಯು ವಾಮಹಸ್ತ (ಎಡಗೈ) ಪಂಥದಲ್ಲಿ ಸಾಮಾನ್ಯವಾದುದಾಗಿದೆ. 1) ಮದ್ಯ, 2) ಮಾಂಸ, 3) ಮೀನು, 4) ಹುರಿದಕ್ಕಿ ಮತ್ತು 5) ಮೈಥುನ (ಲೈಂಗಿಕ ಕ್ರಿಯೆ)ಗಳೇ ಈ ಪಂಚಮಕಾರಗಳು. ಇವುಗಳು ಭಕ್ತರಿಗೆ ಇಷ್ಟವಾದುದರಿಂದ, ಇವನ್ನೇ ದೇವತೆಗೆ ಅರ್ಪಿಸುತ್ತಾರೆ. ಇಂದ್ರಿಯ ಪ್ರಧಾನವಾದ ಈ ಆಚರಣೆಗಳು ವಾಮಹಸ್ತ ಆಚರಣೆಯಲ್ಲಿ, ಮನಸ್ಸು ಮತ್ತು ಬುದ್ಧಿಯ ಮೇಲೆ ವಿಶೇಷ ಪ್ರಭಾವ ಬೀರುತ್ತವೆ ಎನ್ನುವುದು ನಿಜವಾದರೂ, ಮನಸ್ಸು ಮತ್ತು ಬುದ್ಧಿಗಳೆರಡೂ ಬಹಳ ಜಾಗ್ರತೆಯಿಂದಿರಬೇಕಾಗುತ್ತದೆ. ಹಾಗೂ ಇದರಲ್ಲಿ ಅನೇಕ ನ್ಯೂನತೆಗಳಿವೆ. ಆದುದರಿಂದ ಅನೇಕ ಶ್ರೀ ವಿದ್ಯೆಯ ಪರಿಣತರು ಹೆಚ್ಚು ಸೂಕ್ಷ್ಮವೂ ಮತ್ತು ಉದಾತ್ತವೂ ಆದ ಬಲ ಪಂಥದ ಆಚರಣೆಗಳನ್ನೇ ಹೆಚ್ಚಿಗೆ ಅಭ್ಯಾಸ ಮಾಡುತ್ತಾರೆ. ವಾಮಕೇಶ್ವರ, ಪ್ರಪಂಚಸಾರ ಮುಂತಾದ ತಾಂತ್ರಿಕ ಗ್ರಂಥಗಳನ್ನು ಕಲ್ಪಸೂತ್ರಗಳನ್ನೂ, ಸೌಂದರ್ಯ ಲಹರಿಯಂತಹ ಗ್ರಂಥಗಳನ್ನು ಓದುಗರು ಗಮನಿಸಬೇಕು.

ಪ್ರಶ್ನೆ ೨೫ : ಈ ಸಾಧನೆಯನ್ನು ಅನೇಕ ಕೆಟ್ಟ ಕೆಲಸಗಳನ್ನು ಮಾಡಲು ಹಾಗೂ ಇತರರಿಗೆ ಘಾಸಿ ಮಾಡಲು ಮತ್ತು ಅವರ ಪ್ರಾಣ ತೆಗೆಯುವ ಮುಂತಾದ ಕಾರ್ಯಗಳಿಗೆ ಬಳಸಲಾಗುತ್ತದೆ ಎನ್ನುವ ಅಭಿಪ್ರಾಯ ಜನಸಾಮಾನ್ಯರಲ್ಲಿ ವಿಶೇಷವಾಗಿದೆ. ಇದು ನಿಜವೇ?

ಉತ್ತರ : ಇದಕ್ಕೆ ಸಮಾಧಾನವನ್ನು ಎರಡನೆಯ ಪ್ರಶ್ನೆಗೆ ಮೇಲೆ ನೀಡಿರುವ ಉತ್ತರದಲ್ಲಿ ಕಾಣಬಹುದು. ಅತ್ಯಂತ ಶ್ರೇಷ್ಠ ಸತ್ಯ ಹಾಗೂ ಶಕ್ತಿಯೊಡನೆ ತಾದಾತ್ಮ್ಯವನ್ನು ಹೊಂದುವುದೇ ಭಕ್ತರ ಮುಖ್ಯ ಗುರಿ ಹಾಗೂ ಆಕಾಂಕ್ಷೆ. ಇದರಲ್ಲಿ ಕೆಟ್ಟದಾದದ್ದು ಏನಿದೆ? ವಿದ್ಯುಚ್ಛಕ್ತಿಯ ಮುಖ್ಯ ಆಗರಕ್ಕೆ ಒಂದು ಸ್ವಿಚ್ಚಿನ ಗುಂಡಿಯನ್ನು ಒತ್ತಿದರೆ ವಿದ್ಯುಚ್ಛಕ್ತಿಯು ಬರುತ್ತದೆ. ಅದನ್ನು ಯಾವ ಕೆಲಸಕ್ಕೆ ಬೇಕಾದರೂ ಬಳಸಿಕೊಳ್ಳಬಹುದು. ಅದು ಅವನನ್ನು ಅತ್ಯಂತ ಎತ್ತರದಲ್ಲಿರುವ ಮಹಡಿಗೆ ಬೇಕಾದರೂ ಒಯ್ಯಬಹುದು. ಅಥವಾ ವಿದ್ಯುತ್‌ಕುರ್ಚಿಯಲ್ಲಿ ಕೂರಿಸಿ ಅವನ ಪ್ರಾಣ ತೆಗೆಯಲೂ ಬಳಸಬಹುದು. ಆದುದರಿಂದ ಈ ವಿದ್ಯೆಯನ್ನು ಸರಿಯಾದ ಗುರಿಯನ್ನು

ಮುಟ್ಟಲು ಮಾತ್ರ ಬಳಸಿಕೊಳ್ಳಬೇಕು. ಕೆಲವು ವಾಮಾಚಾರಿಗಳು ಈ ವಿದ್ಯೆಯನ್ನು ಐಹಿಕ ಆಸೆಗಳನ್ನು ಹಾಗೂ ಲೌಕಿಕ ಆಕಾಂಕ್ಷೆಗಳನ್ನು ಪೂರೈಸಿಕೊಳ್ಳಲು ಅಥವಾ ಕೆಟ್ಟ ಕೆಲಸಗಳಿಗೆ ಬಳಸಿ ಕೊಳ್ಳುತ್ತಾರೆಂಬುದು ನಿಜ. ರಾಮರಸ ಎಂದು ಕರೆಯಲಾಗುವ ಕೆಲವು ಮಂತ್ರಗಳಿವೆ.[22] ವಾಮಾಚಾರದ ಪ್ರಕಾರ ದೇವತೆಯನ್ನು ಒಲಿಸಿಕೊಂಡು ಕೆಟ್ಟದನ್ನು ಮಾಡಲು ಅನೇಕರು ಮುಂದಾಗುತ್ತಾರೆ. ಈ ಮಂತ್ರಗಳಿಗೆ ಶಾಬರ ಮಂತ್ರಗಳೆಂದೂ ಹೆಸರು. ಶ್ರೀ ವಿದ್ಯೆಗೂ ಇವುಗಳಿಗೂ ಯಾವ ಸಂಬಂಧವೂ ಇಲ್ಲ. ನಾವು ಆಗಲೇ ಗಮನಿಸಿರುವಂತೆ ಶ್ರೀವಿದ್ಯೆಯ ಗುರಿಯು ಅತ್ಯಂತ ಶ್ರೇಷ್ಠಮಟ್ಟದ್ದಾಗಿದೆ. ಆದುದರಿಂದಲೇ 2ನೆಯ ಪ್ರಶ್ನೆಗೆ ಉತ್ತರವನ್ನು ನೀಡುವಾಗ ಭಕ್ತರ ಮನೋಭಾವ ಹಾಗೂ ಗುರಿಗಳಿಗೆ ಮಹತ್ವನೀಡಿರುವುದು ಕಾಣಬರುತ್ತದೆ.

ಪ್ರಶ್ನೆ ೨೬ : ಈ ವಿದ್ಯೆಯ ಪರಮಗುರಿ ಏನು?

ಉತ್ತರ : ನಾವು ಆಗಲೇ ಗಮನಿಸಿರುವಂತೆ ಪೂರ್ಣ ದೀಕ್ಷೆಯೇ ಈ ವಿದ್ಯೆಯ ಪರಮ ಗುರಿ. ಹಿಂದೂ ಧರ್ಮದ ಚತುರಾಶ್ರಮಗಳಲ್ಲಿ ನಾಲ್ಕನೆಯದಕ್ಕೆ ಇದು ಸಮನಾಗಿದೆ. ಯಾರು ಇದನ್ನು ಸಾಧಿಸುತ್ತಾರೆಯೋ ಅವರು ವೇದಾಂತದ ಮಹಾವಾಕ್ಯದ ಉಪದೇಶವನ್ನು ಪಡೆಯಲು ಅರ್ಹರಾಗುತ್ತಾರೆ. ಎಲ್ಲವನ್ನೂ ತ್ಯಜಿಸಿರತಕ್ಕಂತಹ ಸನ್ಯಾಸಿಯು ಇದನ್ನು ಕುರಿತು ಧ್ಯಾನ ಮಾಡಲು, ಹಾಗೂ ಅದನ್ನು ಪಡೆಯಲು ಸಾಧ್ಯವಾಗುವಂತೆ ಇದೂ ಆಗುತ್ತದೆ. ಇವರಿಬ್ಬರಿಗೂ ಇರುವ ಮುಖ್ಯ ವ್ಯತ್ಯಾಸ ಒಂದೇ ಒಂದು; ಪೂರ್ಣದೃಷ್ಟಿಯನ್ನು ಪಡೆದವನು[23] ಭಾವನಾತ್ಮಕವಾಗಿ ಮಾತ್ರ ಗೃಹಸ್ಥನಾಗಿರುತ್ತಾನೆ. ಆದರೆ ಸನ್ಯಾಸಿಯು ಗೃಹಸ್ಥಾಶ್ರಮವನ್ನು ಮೀರಿದವನಾಗಿರುತ್ತಾನೆ. ಈ ಎರಡು ಸಂದರ್ಭಗಳಲ್ಲಿಯೂ ಪರಿಣಿತನಾಗಿರುವ ಗುರುವು ಇಬ್ಬರಿಗೂ ಮಹಾವಾಕ್ಯದ ಉಪದೇಶವನ್ನು ನೀಡುತ್ತಾನೆ. ಪೂರ್ಣದೀಕ್ಷೆಯನ್ನು ಪಡೆದವನು ಮಹಾವೇಧೆಯ ಅನುಭವವನ್ನು ಹೊಂದಬೇಕಾಗುತ್ತದೆ. ಸೌಂದರ್ಯಲಹರಿಗೆ ಬರೆದ ಟೀಕೆಯಲ್ಲಿ, ಅದರ 41ನೆಯ ಶ್ಲೋಕದಲ್ಲಿ ಲಕ್ಷ್ಮೀಧರನು ಮಹಾವೇಧೆಯನ್ನು ವರ್ಣಿಸಿದ್ದಾನೆ. ಮೇಲೆ ವಿವರಿಸಲಾಗಿರುವ ಗುರಿಗಳನ್ನು ಅನುಭಾವದ ಮೂಲಕ ಅರಿತುಕೊಂಡನಂತರ, ಗುರುವಿನ ಆಶೀರ್ವಾದದಿಂದ ಅವನು ಪರಮಸತ್ಯದೊಡನೆ ಐಕ್ಯನಾಗುತ್ತಾನೆ. ಇದಕ್ಕೆ ಸಾದಾಖ್ಯವೆಂದು ಹೆಸರು.

ದುರ್ಗಾಷ್ಟಮಿಯ ಮಧ್ಯರಾತ್ರಿಯ ಸಮಯದಲ್ಲಿ, ಈ ಮಹಾವೇಧೆಯ ಅನುಭಾವವನ್ನು ಪಡೆದು, ಮಹಾಮಾತೆಯು ಮೂಲಾಧಾರ ಮತ್ತು ಸ್ವಾಧಿಷ್ಠಾನಗಳನ್ನು ದಾಟಿ, ಮಣಿಪುರದಲ್ಲಿ ತನ್ನ ಅರಿವನ್ನು ಮೂಡಿಸುತ್ತಾಳೆ. ಇಲ್ಲಿಯವರೆಗೆ ಮಂತ್ರದ ಉಪದೇಶ ಹಾಗೂ ಅಭ್ಯಾಸಗಳಿಗೆ ಗುರುವಿನ ಆಸರೆ ಬೇಕಾಗುತ್ತದೆ. ಆನಂತರ ಶಿಷ್ಯನು

ತಾನೇ ತಾನಾಗಿ ತನ್ನ ಗುರಿಯನ್ನು ಸಾಧಿಸಲು ಅಂದರೆ ಶ್ರೇಷ್ಠತಮ ಸತ್ಯದೊಡನೆ ತಾದಾತ್ಮ್ಯವನ್ನು ಹೊಂದಲು ಗುರುವು, ಉಪದೇಶವನ್ನು ನೀಡಿ ಅವನ ತಲೆಯ ಮೇಲೆ ತನ್ನ ಕೈ ಇಡುತ್ತಾನೆ. ಆಗ ಮಹಾವೇಧೆಯ ರಹಸ್ಯ ಅನುಭಾವ ಅವನಿಗೆ ಉಂಟಾಗುತ್ತದೆ ಮತ್ತು ಇದರಿಂದ ಅವನಿಗೆ ಆ ಶ್ರೇಷ್ಠ ಶಕ್ತಿಯೊಡನೆ ಐಕ್ಯತೆಯನ್ನು ಪಡೆದ ಅನುಭವವೂ ಆಗುತ್ತದೆ. ಅದರ ಮಾರ್ಗಗಳು ಹೀಗಿವೆ: ಸಾಧಕನು ದಿವ್ಯಮಾತೆಯನ್ನು ಮಾನಸಿಕವಾಗಿ ಪೂಜಿಸುತ್ತಾನೆ; ಅಲಂಕಾರ ಹಾಗೂ ಆಭರಣಗಳಿಂದ ಆಕೆಯನ್ನು ಪೂಜಿಸಿದನಂತರ, ಅವಳು ಮಣಿಪುರದಲ್ಲಿ ಕಾಣಿಸಿಕೊಳ್ಳುತ್ತಾಳೆ. ನಂತರ ಅನಾಹತ ಹಂತದಲ್ಲಿ, ಭಕ್ತನು ಧೂಪ, ದೀಪ, ಭಕ್ಷ್ಯಗಳ ನೈವೇದ್ಯ, ಆಚಮನ ಮುಂತಾದವುಗಳಿಂದ ಪೂಜಿಸುತ್ತಾನೆ. ಹೀಗೆ ಅನಾಹತದಲ್ಲಿ ಪೂಜಾದಿಕ್ರಮಗಳನ್ನು ಪೂರೈಸಿದ ನಂತರ, ಮಾತೆಯನ್ನು ವಿಶುದ್ಧದಲ್ಲಿ ಕಾಣುತ್ತಾನೆ. ಅಲ್ಲಿ ಮಾತೆಯು ಪರಿಚಾರಕರೊಡನೆ ಮಾತನಾಡುತ್ತಿರುವಂತೆ ಕಾಣಿಸಿಕೊಳ್ಳುತ್ತಾಳೆ. ಅಲ್ಲಿ ಮಾತೆಯು ಸಿಂಹಾಸನಸ್ಥಳಾಗಿದ್ದು, ಶುದ್ಧವಾದ ಸ್ಫಟಿಕದಂತೆ ತಿಳಿಯಾಗಿರುವ ಪ್ರಶಸ್ತ ಶಿಲೆಗಳಿಂದ ಅರ್ಚಿಸಲಾಗುತ್ತದೆ. ಅಲ್ಲಿ ಈ ಪ್ರಶಸ್ತ ಶಿಲೆಗಳು ಹಾಗೂ ಮುತ್ತುಗಳು, ಚಂದ್ರನ ಹದಿನಾರು ಕಲೆಗಳಂತೆ, ಹದಿನಾರು ದಳಗಳ ವಿಶುದ್ಧದಲ್ಲಿರುವಂತೆ ಕಾಣಬರುತ್ತವೆ. ಈ ರೀತಿ ವಿಶುದ್ಧಿಯ ಪೂಜೆಯನ್ನು ಮುಗಿಸಿದ ನಂತರ, ಆಕೆಯನ್ನು ಆಜ್ಞಾಚಕ್ರಕ್ಕೆ ಕರೆದೊಯ್ಯಬೇಕು. ಅಲ್ಲಿ ಆಕೆಗೆ ನೀರಾಜನ (ಕರ್ಪೂರದಾರತಿ) ನೀಡಿದರೆ, ಇದರಿಂದ ಆಕೆಯು ತೃಪ್ತಳಾಗುತ್ತಾಳೆ. ನಂತರ ಮಿಂಚಿನ ಒಂದು ರೇಖೆಯಂತೆ ಶ್ರೀ ಕಾಮೇಶ್ವರಿಯು ಸಹಸ್ರದಳಪದ್ಮವಾಗಿ ಕಾಣಿಸಿಕೊಳ್ಳುತ್ತಾಳೆ. ಅಮೃತ ಸಮುದ್ರದಲ್ಲಿ, ಕಲ್ಪವೃಕ್ಷದ ನೆರಳಿನಲ್ಲಿ, ಮಣಿದ್ವೀಪದಲ್ಲಿ ಅದರ ಮಧ್ಯದಲ್ಲಿರುವ ಸರಘ ಎಂದು ಕರೆಯಲಾಗುವ ಸ್ಥಳದಲ್ಲಿ, ಮಾತೆಯು ಸದಾಶಿವನ ಜೊತೆಯಲ್ಲಿ ಆಟ ಪಾಡುತ್ತಿರುತ್ತಾಳೆ. ನಂತರ ಭಕ್ತನು ತಿರಕ್ಸರಿಶಿ ಎಂಬ ಪರದೆಯನ್ನು ಈ ದೃಶ್ಯದ ಮೇಲೆ ಎಳೆದು, ಆಕೆಯು ಮತ್ತೆ ತನ್ನ ಗೃಹ ಸಹಸ್ರಾರದಿಂದ ಮೂಲಾಧಾರದವರೆಗೆ ಪುನಃ ಆಗಮಿಸುವವರೆಗೆ, ಭಕ್ತನು ಭಕ್ತಿಯಿಂದ ಕಾಯುತ್ತಾನೆ. ಅಲ್ಲಿಯವರೆಗೆ ಕೈಮುಗಿದುಕೊಂಡು ಮಾತೆಯನ್ನು ಧ್ಯಾನಿಸುತ್ತಾನೆ.

ಇದೇ ಸಮಯಮತದ ರಹಸ್ಯ. ಮಹಾಮಾತೆಯು ಮಹಾವೇಧೆ ಹಾಗೂ ಇತರ ವಿವಿಧ ಚಕ್ರಗಳಲ್ಲಿ ಕಾಣಿಸಿಕೊಳ್ಳುವ ಬಗೆಗೆ ಸಾಕಷ್ಟು ಅಭಿಪ್ರಾಯ ಭೇದಗಳಿವೆ.

ಇದರ ವಿಷಯದಲ್ಲಿ ಹೆಚ್ಚಿನ ವಿವರಗಳನ್ನು ತಿಳಿಯಲು ಬಯಸುವವರು ಲಕ್ಷ್ಮೀಧರನು ಸೌಂದರ್ಯಲಹರಿಯ ಮೇಲೆ (41ನೆಯ ಶ್ಲೋಕ) ಬರೆದಿರುವ ಟೀಕೆಯನ್ನು ಗಮನಿಸಬಹುದು. ಶ್ರೀ ಚಕ್ರದ ಆರು ಚಕ್ರಗಳ ಪೂಜೆಯ ಬಗೆಗೂ ಆದಿ ಶಂಕರರು ಹಾಗೂ ಲಕ್ಷ್ಮೀಧರನ ಮಧ್ಯೆ ಅಭಿಪ್ರಾಯ ಭೇದಗಳಿವೆ. ಸ್ಥೂಲವಾಗಿ ಹೇಳಬೇಕೆಂದರೆ ಲಕ್ಷ್ಮೀಧರನು ಮೂಲಾಧಾರದಿಂದ ಮೇಲಕ್ಕೆ ಆರಾಧಿಸಬೇಕು ಎಂದು

ಹೇಳಿದರೆ, ಆದಿಶಂಕರರು, ದೇವಿಯನ್ನು ಆಜ್ಞಾಚಕ್ರದಿಂದ ಕೆಳಗೆ ಪೂಜಿಸಬೇಕು ಎಂದು ಹೇಳಿದ್ದಾರೆ.

ಪ್ರಶ್ನೆ ೨೭ : ಸಿದ್ಧರು ಮತ್ತು ಪರಿಣಿತರು ಈ ಸಾಧನೆಯಲ್ಲಿ ಕಂಡಿರುವ ಶ್ರೇಷ್ಠ ಅನುಭವವೇನು ?

ಉತ್ತರ : ಸರಳವಾಗಿ ಹೇಳಬೇಕೆಂದರೆ ಅದೇ ನಾಲ್ಕನೆಯ ಅವಸ್ಥೆ. ಸಮುದ್ರದ ನೀರಿನಲ್ಲಿ ಮೀನು ಹೊಂದಿಕೊಂಡಿರುವಂತೆ, ಈ ನಾಲ್ಕನೆಯ ಅವಸ್ಥೆಯಲ್ಲಿ ಸಾಧಕನ ಶರೀರ, ಇಂದ್ರಿಯಗಳು, ಮನಸ್ಸು ಹಾಗೂ ವಿಶ್ವದೊಡನೆ ಮಾನಸಿಕ ಅನುಭವ, ಇವೆಲ್ಲವೂ ವಿಶ್ವ ಚೇತನದೊಡನೆ ಸೇರಿಹೋಗುತ್ತವೆ. ವಿಶ್ವಚೇತನವು ಸಾಧಕನ ಮನಸ್ಸು, ಶರೀರ, ಆತ್ಮ, ಅನುಭವದ ಹೊರಪ್ರಪಂಚ ಎಲ್ಲವನ್ನೂ ಆವರಿಸಿಕೊಳ್ಳುತ್ತದೆ. ಸಾಧಕನು ಇದರಲ್ಲಿ ಲೀನನಾಗಿ ವಿಶ್ವಚೇತನದೊಡನೆ ಒಂದಾಗುತ್ತಾನೆ.

ಸ್ವಲ್ಪ ಸಮಯದ ನಂತರ, ಸಾಧಕನು ತನ್ನ ಇಂದ್ರಿಯಗಳ ಮೂಲಕ ಈ ಹೊರಪ್ರಪಂಚದ ಶ್ರೇಷ್ಠ ಅನುಭವವನ್ನು ಹೊಂದುತ್ತಾನೆ. ಈ ಪ್ರಜ್ಞಾವಸ್ಥೆಯನ್ನು ತುರೀಯ ಅಥವಾ ನಾಲ್ಕನೆಯ ಅವಸ್ಥೆ ಎಂದು ಕರೆಯುತ್ತಾರೆ. ನಿರಂತರವಾಗಿ ಅಭ್ಯಾಸ ಮಾಡಿ ಸಾಧಕನು ತುರೀಯ ಅವಸ್ಥೆಯ ಮುಂದಕ್ಕೂ ಹೋಗಲು ಪ್ರಯತ್ನಿಸಬೇಕು.

ಪ್ರಶ್ನೆ ೨೮ : ಅಭ್ಯಾಸ ಎಂದರೇನು ?

ಉತ್ತರ : ಸಾಧಕನು ಪೂರ್ವಾಭಿಮುಖವಾಗಿ ಪದ್ಮಾಸನದಲ್ಲಿ ಕುಳಿತುಕೊಳ್ಳಬೇಕು. ಅವನು ಮನಸ್ಸನ್ನು ಜಾಗೃತವಾಗಿಟ್ಟುಕೊಂಡು ಮನಸ್ಸನ್ನು ಶಾಂತಸ್ಥಿತಿಯಲ್ಲಿ ಇಟ್ಟುಕೊಳ್ಳಬೇಕು. ಸದ್ಯಕ್ಕೆ ಅವನು ಪ್ರಾಣಾಯಾಮ, ಮುದ್ರೆ ಮುಂತಾದವುಗಳನ್ನು ನಿಲ್ಲಿಸಬೇಕು. ಅವನು ತನ್ನ ಶರೀರ ಮತ್ತು ಇಂದ್ರಿಯಗಳನ್ನು ಗರಿಷ್ಠಮಟ್ಟದಲ್ಲಿ ಜಾಗೃತವಾಗಿಟ್ಟುಕೊಂಡು, ಈ ಜಾಗೃತಿಯಿಂದ ತನ್ನ ಮನಸ್ಸನ್ನು ಆಂತರಿಕಕ್ಕೆ ತಿರುಗಿಸಬೇಕು. ಇದರಿಂದ ಅವನು ಚೈತನ್ಯ ಮತ್ತು ಅದರ ಸುಖವನ್ನು ಅನುಭವಿಸಬಹುದು. ಇದನ್ನು ಅವನು ನಿರಂತರವಾಗಿ ಹಾಗೂ ಕ್ರಮವಾಗಿ ಮಾಡಿದರೆ ಹೆಚ್ಚಿನ ಕಷ್ಟವಿಲ್ಲದೆ ನಾಲ್ಕನೆಯ ಅವಸ್ಥೆಯನ್ನು ತಲಪುತ್ತಾನೆ. ಈ ಅವಸ್ಥೆಯನ್ನು ಪ್ರವೇಶಿಸುವುದರಿಂದ ಹಿಡಿದು, ಅವನ ಮನಸ್ಸು ಇಂದ್ರಿಯಗಳ ಜಾಗೃತ ಮಟ್ಟಕ್ಕೆ ಬರುವವರೆಗಿನ ಅವಸ್ಥೆಯೇ, ಬೈಂದವ ಯಾಮಲತಂತ್ರದ ಪ್ರಕಾರ ತುರೀಯಾವಸ್ಥೆ. ಪ್ರತಿಯೊಬ್ಬರೂ ಜಾಗೃತ, ಸ್ವಪ್ನ ಮತ್ತು ಸುಷುಪ್ತಿ ಎಂಬ ಮೂರು ಅವಸ್ಥೆಗಳನ್ನು ಅನುಭವಿಸುತ್ತಾರೆ. ಆದರೆ ತುರೀಯವು ಈ ಮೂರು ಅವಸ್ಥೆಗಳನ್ನೂ ದಾಟುವುದಲ್ಲದೆ, ಇದರಿಂದ ಮುಂದಕ್ಕೂ ಹೋಗುತ್ತದೆ. ನಿರಂತರ ಅಭ್ಯಾಸದಿಂದ ಇದನ್ನು ಸಾಧಿಸಬೇಕು.

ಈ ಎಲ್ಲ ಅಭ್ಯಾಸಗಳಿಂದ ಅದು ಸ್ಥಿರವಾಗಿ ಉಳಿದರೆ ಅದನ್ನು ತುರೀಯಾತೀತ ಅಂದರೆ ತುರೀಯವನ್ನು ಮೀರಿದ್ದು ಎಂದು ಕರೆಯುತ್ತೇವೆ. ಅಂತಹ ಶ್ರೇಷ್ಠನನ್ನು ಜೀವನ್ಮುಕ್ತ ಎಂದರೆ ಜೀವಿಸುತ್ತಿರುವಾಗಲೂ ಮುಕ್ತಿಯನ್ನು ಹೊಂದಿದವನು ಎಂದು ಕರೆಯುತ್ತೇವೆ.

ಸಾಧಕನು ತನ್ನ ಇಷ್ಟದೈವವನ್ನು ತೀವ್ರತೆಯಿಂದ ಹಾಗೂ ಅದಕ್ಕೆ ಸೇರಿಕೊಂಡಂತೆ ಶ್ರದ್ಧಾಪೂರ್ವಕವಾಗಿ ಪೂಜಿಸಿದರೆ, ಅದಕ್ಕೆ ತಕ್ಕಂತೆ ಅವನು ಅದನ್ನು ಅನುಭವಿಸುತ್ತಾನೆ.

ಪ್ರಶ್ನೆ ೨೯ : ಶುಕಮಾರ್ಗ ಮತ್ತು ವಾಮದೇವಮಾರ್ಗಗಳೆಂದರೇನು ?

ಉತ್ತರ : ನಮ್ಮ ಪ್ರಾಚೀನ ಶಾಸ್ತ್ರ ಗ್ರಂಥಗಳು ಮುಕ್ತಿಯನ್ನು ಹೊಂದಲು ಈ ಎರಡು ಮಾರ್ಗಗಳನ್ನು ಹೆಸರಿಸಿವೆ. ಈ ಎರಡೂ ಮಾರ್ಗಗಳನ್ನು ಅಥವಾ ಒಂದನ್ನಾದರೂ ಅಭ್ಯಾಸಮಾಡದೇ ಇದ್ದರೆ ಮುಕ್ತಿಯು ದೊರಕುವುದಿಲ್ಲ, ಎಂದು ವರಾಹೋಪನಿಷತ್ ವಿವರಿಸುತ್ತದೆ. ಶುಕಮಾರ್ಗವೆಂದರ ಪಕ್ಷಿಯ ಮಾರ್ಗ; ವಾಮದೇವಮಾರ್ಗ ಎಂದರೆ ಇರುವೆಯ ಮಾರ್ಗ. ಪರಿಣಿತರು ಹಾಗೂ ಶಕ್ತಿ ಉಳ್ಳವರು ಶುಕಮಾರ್ಗವನ್ನು ಅನುಸರಿಸುತ್ತಾರೆ. ಇದರಿಂದ ತಕ್ಷಣವೇ ಅವರಿಗೆ ಮುಕ್ತಿಯು ದೊರಕುತ್ತದೆ. ಮುಕ್ತಿಯನ್ನು ಪಡೆಯಲು ಶುಕಮಾರ್ಗವು ಹತ್ತಿರದ ದಾರಿ. ಆದರೆ ವಾಮದೇವ ಮಾರ್ಗವು ಹಂತ ಹಂತವಾದುದು. ಮರದ ಕೊಂಬೆಯ ಮೇಲೆ ಕುಳಿತಿರುವ ಪಕ್ಷಿಯು ಹಣ್ಣನ್ನು ಕಂಡತಕ್ಷಣ ಅದನ್ನು ತಿನ್ನಲು ನೇರವಾಗಿ ಹಾರುತ್ತದೆ. ವಾಸ್ತವವಾಗಿ ಜ್ಞಾನಮಾರ್ಗವೇ ಶುಕಮಾರ್ಗ. ಶುಕಮಾರ್ಗವನ್ನು ಅಭ್ಯಾಸಮಾಡುವವನು, ನೋಡುವ ಅಥವಾ ತಿಳಿಯುವ ಅಥವಾ ದೃಢವಾಗಿ ಹೇಳುವ ಮೂಲಕ ಅಥವಾ ಮಹಾವಾಕ್ಯಗಳನ್ನು ಮನನ ಮಾಡುವುದರ ಮೂಲಕ, ಎಲ್ಲ ವಸ್ತುಗಳನ್ನೂ ನಿರಾಕರಿಸುವುದರ ಮೂಲಕ ತಕ್ಷಣ ಮುಕ್ತಿಯನ್ನು ಹೊಂದುತ್ತಾನೆ. ಶುಕಮಾರ್ಗ ಅಭ್ಯಾಸಿಗಳಿಗೆ ಅಸಂಪ್ರಜ್ಞಾತ ಎಂದು ಕರೆಯಲಾಗುವ ಸಾಂಖ್ಯಯೋಗ ಮತ್ತು ಸಮಾಧಿಗಳು, ಅವರ ಮನಸ್ಸಿನ ಸ್ವರೂಪವನ್ನು ತಿಳಿಸುತ್ತವೆ. ಇದರ ಮೂಲಕ ಅವರು ಶೀಘ್ರವಾಗಿ ಮುಕ್ತಿಯನ್ನು ಸಾಧಿಸುತ್ತಾರೆ. ಏಕೆಂದರೆ ಅವರ ತ್ಯಾಗವು ಪೂರ್ಣವಾದುದು. ಆದುದರಿಂದ ಶುಕಮಾರ್ಗಕ್ಕೆ ಆದ್ಯತೆ ನೀಡಬೇಕು. ಇರುವೆಯೂ ಕೂಡ ಹಣ್ಣನ್ನು ತಿನ್ನುವ ಆಸೆಯಿಂದ ಮರದ ಮೇಲೇರುತ್ತದೆ. ಅದು ನಿಧಾನ ಮಾತ್ರವಲ್ಲದೆ ಅನೇಕ ಅಡಚಣೆಗಳನ್ನು ಎದುರಿಸಬೇಕಾಗುತ್ತದೆ. ಅದೇ ರೀತಿಯಲ್ಲಿ ವಾಮದೇವಮಾರ್ಗವನ್ನು ಅಭ್ಯಾಸ ಮಾಡುವವನು, ಯಮ, ಆಸನ ಮುಂತಾದ ಅಷ್ಟಾಂಗ ಯೋಗಗಳನ್ನು ಪದೇ ಪದೇ ಮಾಡಬೇಕು ಮತ್ತು ಹಠಯೋಗವನ್ನು ಅಭ್ಯಾಸ ಮಾಡಬೇಕು. ಗುರಿಯನ್ನು ಸಂಪೂರ್ಣವಾಗಿ ಮುಟ್ಟಲು ಸಾಧ್ಯವಿಲ್ಲದೆ ಅವನು ಮತ್ತೆ ಉತ್ತಮ ಕುಲದಲ್ಲಿ ಹುಟ್ಟಿ, ತನ್ನ ಹಿಂದಿನ ಸಂಸ್ಕಾರಗಳಿಂದ ಮತ್ತೆ ಮತ್ತೆ ಅಭ್ಯಾಸವನ್ನು ಮುಂದುವರಿಸುತ್ತಾನೆ.

ಈ ರೀತಿ ಅನೇಕ ಜನ್ಮಗಳ ಮೂಲಕ, ಇರುವೆಯಂತೆ ಪ್ರತಿಜನ್ಮದಲ್ಲೂ ಅಭ್ಯಾಸ ಮಾಡಿ, ಕೊನೆಗೆ ಮುಕ್ತಿಯನ್ನು ಹೊಂದುತ್ತಾನೆ. ಒಟ್ಟಿನಲ್ಲಿ ಬ್ರಹ್ಮನ್ ಅನ್ನು ತಿಳಿಯಲು ಎರಡು ಮಾರ್ಗಗಳಿವೆ. ಒಂದು ತಕ್ಷಣ ಮುಕ್ತಿಯನ್ನು ನೀಡಿದರೆ, ಮತ್ತೊಂದು ಅದೇ ಮುಕ್ತಿಯನ್ನು ನಿಧಾನವಾಗಿ ನೀಡುತ್ತದೆ.

"ಅಲ್ಲಿ ಭ್ರಾಂತಿಯೂ ಇಲ್ಲ, ದುಃಖವೂ ಇಲ್ಲ, ಏಕೆಂದರೆ ಎಲ್ಲೆಲ್ಲಿಯೂ ಐಕ್ಯತೆಯೇ ಕಂಡುಬರುತ್ತದೆ. ಇದನ್ನು ಅನುಭವಿಸಿದ ಮನಸ್ಸು ಸಾತ್ವಿಕವಾಗುತ್ತದೆ. ಅಂತಹ ದೃಷ್ಟಿಯನ್ನು ಹೊಂದಿರುವ ದೇವತೆಯಾಗಲೀ ಅಥವಾ ಮಾನವನಾಗಲೀ, ಸದಾ ಬ್ರಹ್ಮನ್‌ನ ಸಾನ್ನಿಧ್ಯದಲ್ಲಿದ್ದು, ಎಲ್ಲ ರೀತಿಯ ಪಾಪಗಳಿಂದ ಮುಕ್ತನಾಗುತ್ತಾನೆ. ಅಷ್ಟೇ ಅಲ್ಲದೆ ಸಾವಿರಾರು ಜನ್ಮಗಳಲ್ಲಿ ಮಾಡಿದ ಪಾಪಗಳಿಂದ ಶಾಶ್ವತವಾಗಿ ಮುಕ್ತನಾಗುತ್ತಾನೆ" ಎಂದು ವರಾಹೋಪನಿಷತ್ ವಿವರಿಸುತ್ತದೆ.

* * * *

ಟಿಪ್ಪಣಿಗಳು

1. ಕಾಮಕಲಾ ವಿಲಾಸ ಗ್ರಂಥದ18 ಮತ್ತು 19ನೆಯ ಸೂತ್ರಗಳು ಈ ರೀತಿ ವಿವರಿಸುತ್ತವೆ; "ಸಂಸ್ಕೃತ ವರ್ಣಮಾಲೆಯ ಸ್ವರಗಳು, ವ್ಯಂಜನಗಳು, ಮೂರು ಬಿಂದುಗಳು ಮತ್ತು ಮೂರು ಅನುಸ್ವಾರಗಳು, ಒಟ್ಟಿಗೆ 36 ಆಗುತ್ತವೆ. ಅವು ಬಿಡಿಯಾಗಿ ಹಾಗೂ ಒಟ್ಟಾರೆಯಾಗಿ ಆಕೆಯ ಆಕೃತಿ; ಈ ಮೂವತ್ತಾರು ಗುಣಗಳು ಆಕೆಯ ಶರೀರವಾದರೂ, ಅವಳು ಒಬ್ಬಳೇ; ಆಕೆಯು ಇವು ಯಾವುದಕ್ಕೂ ಅಂಟಿಕೊಳ್ಳದಂತೆ ಇರುತ್ತಾಳೆ. ಆದುದರಿಂದಲೇ ಆಕೆಯು ವಿದ್ಯಾ".
2. ಈ ಶ್ರೇಷ್ಠತಮ ಸತ್ಯವನ್ನು ತಿಳಿಯಲು ಹದಿನಾಲ್ಕು ಮಾರ್ಗಗಳು ಹೇಳಲ್ಪಟ್ಟಿವೆ. ಅದರಲ್ಲಿ ವೇದಗಳ ಸಾರವೇ ಆಗಿರುವ ಶ್ರೀ ಗಾಯತ್ರಿಯೂ ಸೇರಿದೆ. ಅದಕ್ಕೆ ಎರಡು ರೂಪಗಳುಂಟು. ಮೊದಲನೆಯದು ಎಲ್ಲರಿಗೂ ತಿಳಿದಿರುವ ಹಾಗೂ ಎಲ್ಲರೂ ಹೇಳುವ ಮೂರು ಭಾಗಗಳ ಸ್ಪಷ್ಟ ಮಂತ್ರ. ಆದರೆ ವೇದಗಳಲ್ಲೇ ಹೇಳಿರುವ ನಾಲ್ಕು ಭಾಗಗಳ ಹಾಗೂ ರಹಸ್ಯ ಮತ್ತು ಉಪದಿಷ್ಟವಾದ ಇನ್ನೊಂದು ರೂಪವೂ ಉಂಟು. (ವಿಶ್ವಾಮಿತ್ರ ಕಲ್ಪ).
3. ಕಾಮಕಲಾವಿಲಾಸದ ಏಳನೆಯ ಸೂತ್ರದಲ್ಲಿ 'ನಾನು' ಎಂಬ ಅರ್ಥವನ್ನು ಸೂಚಿಸುವ 'ಅಹಂ' ಎಂಬ ಪದದಲ್ಲಿ 'ಅ' ಮತ್ತು 'ಹ' ಎಂಬ ಎರಡು ಭಾಗಗಳನ್ನು ಗುರುತಿಸಲಾಗಿದೆ. ಅವೇ ಶಿವ ಮತ್ತು ಶಕ್ತಿ ಪ್ರಜ್ಞೆಗಳು; ಅವು ಕೆಂಪು ಮತ್ತು ಬಿಳಿ (ರಕ್ತ ಮತ್ತು ವೀರ್ಯ) ಬಣ್ಣಗಳು ಪ್ರತ್ಯೇಕಿಸಲಾಗದಂತೆ ಮಿಶ್ರಗೊಂಡಿವೆ. ಇದೇ ಎಲ್ಲ ಸಂತರಿಂದ, ಋಷಿಗಳಿಂದ ಯಾವಾಗಲೂ ಪೂಜಿಸಲ್ಪಡುವ ಸೂರ್ಯಮಂಡಲ. ಜೊತೆಗೆ ಅದು ಚಂದ್ರ ಮತ್ತು ಅಗ್ನಿ ಇವರ ಸುಮಧುರ ಒಗ್ಗೂಡಿಕೆಯೂ ಆಗಿದೆ.
4. "ಸೌಂದರ್ಯಲಹರಿಯ 27ನೆಯ ಶ್ಲೋಕವು ಹೀಗೆ ಹೇಳುತ್ತದೆ; ಎಲೈ ತಾಯಿಯೇ, ನಾನು ನನ್ನ ಮನಸ್ಸು, ಮಾತು ಮತ್ತು ಶರೀರದಿಂದ ಏನನ್ನು ಮಾಡುತ್ತೇನೆಯೋ, ಅವೆಲ್ಲವೂ ಪರಬ್ರಹ್ಮಸ್ವರೂಪಳಾದ ನಿನಗೇ ಅರ್ಪಿತ. ನಿನ್ನ ಮಂತ್ರವೇ ನನ್ನ ಮಧುರ ಮಾತುಗಳಾಗಲಿ. ದಿನನಿತ್ಯದ ಜೀವನದಲ್ಲಿ ನಾನು ಮಾಡುವ ಕೈಕಾಲು ಚಲನೆಗಳೇ ನಿನ್ನ ಆರಾಧನೆಯಲ್ಲಿ ಹೇಳಿರುವ

ಮುದ್ರೆಗಳಾಗಲಿ. ನಾನು ನಡೆಯುವುದೇ ನಿನ್ನ ಪ್ರದಕ್ಷಿಣೆಯಾಗಿ ಸ್ವೀಕಾರವಾಗಲಿ. ಎಷ್ಟೇ ಅಲ್ಪವಾದ ಆಹಾರವನ್ನು ನಾನು ಸೇವಿಸಿದರೂ, ಅದು ನಿನ್ನ ಯಜ್ಞಾಗ್ನಿಯಲ್ಲಿ ನನ್ನ ಸಮರ್ಪಣೆಯಾಗಲಿ. ನಾನು ಕೆಳಗೆ ಮಲಗಿರುವುದು ಹಾಗೂ ಕೈಕಾಲುಗಳನ್ನು ಆಡಿಸುವುದನ್ನು ನೀನು ಗೌರವಪೂರ್ವಕ ಪ್ರಣಾಮವೆಂದು ಸ್ವೀಕರಿಸು. ನಾನು ಅನುಭವಿಸುವ ಪ್ರತಿಯೊಂದು ಇಂದ್ರಿಯ ಸುಖವೂ ನನ್ನ ಭಕ್ತಿಪೂರ್ವಕ ಅರ್ಪಣೆಯಾಗಲಿ".

5. ಭಾವನೋಪನಿಷತ್ :- 24ನೆಯ ಮಂತ್ರದವರೆಗೆ ಶರೀರ ಮತ್ತು ಶ್ರೀಚಕ್ರದ ಎಂಟು ಆವರಣಗಳ ಸಾಮ್ಯತೆಯು ಹೇಳಲ್ಪಟ್ಟಿದೆ. ಮೂಲತತ್ವದ ಆವಾಸಸ್ಥಾನವಾದ ಒಂಬತ್ತನೆಯದಾದ ಬಿಂದುವನ್ನು ನಂತರ ಪೂಜಿಸಬೇಕು.

"ಇದೇ ಶ್ರೇಷ್ಠ ತ್ರಿಪುರಸುಂದರಿಯ ಇಚ್ಛಾಶಕ್ತಿ ಹಾಗೂ ಕಾಮೇಶ್ವರಿಯ ಭಕ್ತಿಭಾವದ ಮನಸ್ಸು. ಸತ್ಯ ಮತ್ತು ಆನಂದ ಹೆಪ್ಪುಗಟ್ಟಿದ ರೀತಿಯಲ್ಲಿ ಪೂರ್ಣಗೊಂಡಾಗ ಧ್ಯಾನದ ದೈವ ಹಾಗೂ ಪೂಜೆ ಒಂದಾಗುತ್ತವೆ".

ಶಾಂತಿಯನ್ನು ತಂದುಕೊಡುವ ಸತ್ಯವು ದೈವಕ್ಕೆ ಅರ್ಪಣೆಯಾಗುತ್ತದೆ.

ಒಳ್ಳೆಯದು ಮತ್ತು ಕೆಟ್ಟದ್ದನ್ನು ವಿವೇಚಿಸುವ ಶಕ್ತಿಯು ಆಕೆಗೆ ಸೇವೆಯಾಗಿ ಅರ್ಪಿತ.

ಇರತಕ್ಕಂತಹ ಹಾಗೂ ಇಲ್ಲದೇ ಇರುವಂತಹ ವಸ್ತುಗಳ ಹಿಂದಿರುವ ಶಾಶ್ವತಶಕ್ತಿಯು ಆಕೆಗೆ ಉಪಾಹಾರವಾಗಿ ಅರ್ಪಿತ.

ಬಾಹ್ಯ ಮತ್ತು ಆಂತರಿಕ ಇಂದ್ರಿಯಗಳ ಮೂಲಕ ಪ್ರತಿಯೊಂದರಲ್ಲಿಯೂ ಏಕತೆಯನ್ನು ಕಾಣುವ ಶಕ್ತಿಯೇ ಆಕೆಗೆ ಆವಾಹನೆಯಾಗಿ ಅರ್ಪಿತ.

ಈ ರೀತಿ ಬಾಹ್ಯ ಮತ್ತು ಆಂತರಿಕ ಹಾಗೂ ಎಲ್ಲೆಲ್ಲೂ ಏಕತೆಯನ್ನು ಕಾಣುವ ಶಕ್ತಿಯೇ ಆಕೆಗೆ ಪೀಠವಾಗಿ ಅರ್ಪಿತ.

ಶಿವ(ಬಿಳಿ) ಹಾಗೂ ಶಕ್ತಿ (ಕೆಂಪು) ಯರ ಏಕತೆಯೇ ಆಕೆಗೆ ಕಾಲು ತೊಳೆಯುವ ನೀರಾಗಿ ಅರ್ಪಿತ.

ಆಕೆಯ ಪೂಜೆಯಲ್ಲಿ ಕಾಣುವ ಶ್ರೇಷ್ಠ ಆನಂದ ಆಕೆಗೆ ಕೈಗಳನ್ನು ತೊಳೆದುಕೊಳ್ಳುವ ಅರ್ಘ್ಯವಾಗಿ ಅರ್ಪಿತ.

ಸ್ಫಟಿಕದಂತೆ ತಿಳಿಯಾಗಿರುವ ಮೂಲಭೂತ ಶಕ್ತಿಯ ಅನುಭವವೇ ಆಕೆಗೆ ಮುಖವನ್ನು ತೊಳೆದುಕೊಳ್ಳುವ ಜಲವಾಗಿ ಅರ್ಪಿತ.

ಶ್ರೇಷ್ಠ ಪ್ರಜ್ಞೆಯು ಶರೀರದ ಎಲ್ಲ ಅಂಗಗಳಿಗೂ ಇಳಿದು ಬರುವುದೇ ಸ್ನಾನಕ್ಕಾಗಿ ಜೇನಿನೊಡನೆ ಮಿಶ್ರವಾದ ಜಲವಾಗಿ ಅರ್ಪಿತ.

ಅಗ್ನಿಯಾಗಿ ಕಾಣಬರುವ ಶ್ರೇಷ್ಠಪ್ರಜ್ಞೆಯು ಅಕೆಗೆ ಉಡಿಗೆತೊಡಿಗೆಯಾಗಿ ಅರ್ಪಿತ.

ಆನಂದ ಐಶ್ವರ್ಯ; ಜ್ಞಾನ, ಕರ್ಮ ಇತ್ಯಾದಿ 27 ಪ್ರತ್ಯೇಕ ವಸ್ತುಗಳನ್ನು ಸಂಕೇತಿಸುವ ಹಾಗೂ ಬ್ರಹ್ಮನಾಡಿಯನ್ನು ಸೂಚಿಸುವುದೇ ಯಜ್ಞೋಪವೀತವಾಗಿ ಅರ್ಪಿತ.

ತಾನು ಮಾಡುವ ಹಾಗೂ ಇತರರು ಮಾಡುವ ಕೆಲಸಗಳಲ್ಲಿ ತೋರುವ ಅನಾಸಕ್ತಿಯೇ ಆಕೆಗೆ ಆಭರಣಗಳಾಗಿ ಅರ್ಪಿತ.

ಮಾನಸಿಕವಾಗಿ ಪ್ರತಿಯೊಂದರಲ್ಲಿಯೂ ಅಚಲನಂಬಿಕೆ ಹೊಂದಿರುವುದೇ ಆಕೆಗೆ ಪುಷ್ಪಗಳಾಗಿ ಅರ್ಪಿತ.

ಹಿಂದಿನ ಜನ್ಮಗಳ ಕರ್ಮಗಳನ್ನು ತೊಂದರೆ ಇಲ್ಲದೆ ಅನುಭವಿಸುವುದೇ ಆಕೆಗೆ ಧೂಪವಾಗಿ ಅರ್ಪಿತ.

ಪ್ರಾಣಾಯಾಮ ಹಾಗೂ ಅದರಿಂದ ಶ್ರೇಷ್ಠ ಪ್ರಜ್ಞೆಯಲ್ಲಿ ಕಾಣಸಿಗುವ ಬೆಳಕಿನ ಮಿನುಗುಗಳೇ ಆಕೆಗೆ ದೀಪವಾಗಿ ಅರ್ಪಿತ.

ಉಚ್ಛ್ವಾಸ ನಿಶ್ವಾಸಗಳೇ ಆಕೆಗೆ ನೈವೇದ್ಯವಾಗಿ ಅರ್ಪಿತ. ಜಾಗೃತವೇ ಮುಂತಾದ ಅವಸ್ಥೆಗಳಲ್ಲಿ ಏಕತೆಯನ್ನು ಕಾಣುವುದೇ ಆಕೆಗೆ ವೀಳ್ಯದ ಅರ್ಪಣೆ.

ಪ್ರಾಣವು ಬ್ರಹ್ಮರಂಧ್ರದಿಂದ ಶಿರೋಭಾಗದ ಮೇಲಿನಿಂದ ಬೆನ್ನುಹುರಿಯ ಮೂಲಾಧಾರದ ಕೆಳಗಿನ ಭಾಗಕ್ಕೆ ಹಿಂದಕ್ಕೆ ಮುಂದಕ್ಕೆ ಚಲಿಸುವುದೇ ಆಕೆಗೆ ಪ್ರದಕ್ಷಿಣೆಯ ಅರ್ಪಣೆ.

ಮೂರು ಅವಸ್ಥೆಗಳನ್ನು ಮೀರಿದ ನಾಲ್ಕನೆಯ ಅವಸ್ಥೆಯೇ ಆಕೆಗೆ ನಮಸ್ಕಾರದ ಅರ್ಪಣೆ.

ಈ ಶರೀರವು ಇಲ್ಲವೇ ಇಲ್ಲ ಎಂಬ ನಂಬಿಕೆಯಲ್ಲಿ ಲೀನವಾಗಿರುವುದೇ ಯಜ್ಞದ ಅರ್ಪಣೆ.

ಕೇವಲ ಸತ್ಯವು ಮಾತ್ರ ಶಾಶ್ವತವಾದುದು ಮತ್ತು ನಾವು ಮಾಡುವ ಯಾವ ಕಾರ್ಯಗಳೂ ಅದನ್ನು ಬಂಧಿಸುವುದಿಲ್ಲವೆಂಬುದನ್ನು ಶ್ರೇಷ್ಠ ಚೇತನಕ್ಕೆ ಅರಿವನ್ನುಂಟುಮಾಡುವುದೇ ಯಜ್ಞಾಗ್ನಿಯ ಅರ್ಪಣೆ.

ಆಕೆಯ ಪವಿತ್ರ ಪಾದಗಳಿಗೆ ಶರಣಾಗುವುದೇ ಆಕೆಗೆ ಧ್ಯಾನದ ಅರ್ಪಣೆ. ಈ ಮೇಲೆ ತಿಳಿಸಲಾದ ಪೂಜೆಯನ್ನು ಯಾವನು ಮೂರು ಮುಹೂರ್ತಗಳಲ್ಲಿ ಮಾಡುತ್ತಾನೆಯೋ, ಅವನು ದೇವಿಯೊಡನೆ ಐಕ್ಯನಾಗುತ್ತಾನೆ. ಶಾಂತಿಪಥ, ಸಹನಾವವತು ಇತ್ಯಾದಿಗಳು. ಅಥರ್ವವೇದದಲ್ಲಿ ಉಲ್ಲೇಖವಾಗಿವೆ.

6. ಲೊಲ್ಲ ಲಕ್ಷ್ಮೀಧರನು ತನ್ನ ಟೀಕೆಯಲ್ಲಿ ಇದನ್ನು ವಿಶೇಷವಾಗಿ ಉಲ್ಲೇಖಿಸಿದ್ದಾನೆ. ಶಂಕರ ಭಗವತ್ಪಾದರು ಹೇಳಿರುವ ನಾಲ್ಕು ಐಕ್ಯತೆಗಳನ್ನು ಉಲ್ಲೇಖಿಸಿ, ಅವುಗಳೇ ಸಾಮಾನ್ಯವಾಗಿ ಎಲ್ಲರೂ ಒಪ್ಪಿಕೊಂಡಿರುವ ಐಕ್ಯತೆಯೆಂದು ಖಚಿತಪಡಿಸಿದ್ದಾನೆ.

ಈ ಸಾಧನೆಯ ಪರಿಪೂರ್ಣತೆಯನ್ನು ತಲಪುವುದಕ್ಕೆ ಮುಂಚೆ ಈ ಆರು ವಿಧದ ಐಕ್ಯತೆಯನ್ನು ಸಾಧಿಸಬೇಕು ಎಂದು ಆಚಾರ್ಯ ಲೊಲ್ಲನು ಉಲ್ಲೇಖಿಸಿದ್ದಾನೆ.

7. ಪಂಚೋಪಚಾರ ಪೂಜೆ : ಇದು ವಾಸ್ತವವಾಗಿ ಒಂದು ಮಾನಸಿಕ ಸಾಧನೆ. ಇದರಲ್ಲಿ ಪಂಚಭೂತಗಳಲ್ಲಿ ಒಂದನ್ನು ಪ್ರತಿನಿಧಿಸುವ ಬೀಜಾಕ್ಷರವನ್ನು ಸಾಧಕನು ಹೇಳುತ್ತಾನೆ. ತನ್ನ ಮುಂದಿರುವ ದೇವತೆಯು ಪಂಚಭೌತಿಕ ಅಂದರೆ ಪಂಚಭೂತಗಳಿಂದ ಆಗಿದ್ದಾಗಿರುವುದರಿಂದ, ಅವನು ಐದು ಅಕ್ಷರಗಳನ್ನು ನುಡಿಯುವುದರಿಂದ ಪೂಜೆಯನ್ನು ಮಾಡುತ್ತಾನೆ. ಅವು ಯಾವುವೆಂದರೆ :- (1) ಭೂಮಿಯನ್ನು ಸಂಕೇತಿಸುವ ಲಂ ಎಂಬ ಬೀಜಾಕ್ಷರವನ್ನು ನುಡಿಯುತ್ತಾ ದೇವತೆಗೆ ಗಂಧವನ್ನು ಸಮರ್ಪಿಸುತ್ತಾನೆ. (2) ಆಕಾಶತತ್ವವನ್ನು ಸಂಕೇತಿಸುವ ಹಂ ಎಂಬ ಬೀಜಾಕ್ಷರವನ್ನು ನುಡಿಯುತ್ತಾ ಪುಷ್ಪಗಳನ್ನು ದೇವತೆಗೆ ಸಮರ್ಪಿಸುತ್ತಾನೆ. (3) ವಾಯುತತ್ವವನ್ನು ಪ್ರತಿನಿಧಿಸುವ ಯಂ ಎಂಬ ಅಕ್ಷರವನ್ನು ಉಚ್ಚರಿಸುತ್ತಾ, ದೇವತೆಗೆ ಧೂಪವನ್ನು ಅರ್ಪಿಸುತ್ತಾನೆ. (4) ಅಗ್ನಿತತ್ವವನ್ನು ಪ್ರತಿನಿಧಿಸುವ ರಂ ಎಂಬ ಬೀಜಾಕ್ಷರವನ್ನು ಉಚ್ಚರಿಸುತ್ತಾ ದೀಪವನ್ನು ಅರ್ಪಿಸುತ್ತಾನೆ. (5) ಅಮೃತವನ್ನು ಪ್ರತಿನಿಧಿಸುವ ವಂ ಎಂಬ ಬೀಜಾಕ್ಷರವನ್ನು ಉಚ್ಚರಿಸುತ್ತ ಅಮೃತದ ನೈವೇದ್ಯವನ್ನು ಅರ್ಪಿಸುತ್ತಾನೆ. ಅಂತಿಮವಾಗಿ ಎಲ್ಲ ತತ್ವಗಳನ್ನೂ ಪೂರ್ಣವಾಗಿ ಪ್ರತಿನಿಧಿಸುವ ಸಂ ಎಂಬ ಬೀಜಾಕ್ಷರವನ್ನು ಉಚ್ಚರಿಸುತ್ತ, ದೇವತೆಗೆ ಮಿಕ್ಕ ಎಲ್ಲ ಉಪಚಾರಗಳನ್ನೂ ಅರ್ಪಿಸುತ್ತಾನೆ.

8. ಇದು ಶ್ರೀಲಲಿತೆಯನ್ನು ಸ್ತುತಿಸುವ ಶಂಕರಭಗವತ್ಪಾದರಿಂದ ರಚಿತವಾದ ಪುಟ್ಟ ಸ್ತೋತ್ರ. ಇದರಲ್ಲಿ ಹದಿನಾರು ಪದ್ಯಗಳಿವೆ. ಪ್ರತಿಯೊಂದು ಪದ್ಯವೂ ಪಂಚದಶಿ ಮಂತ್ರದ ಒಂದು ಅಕ್ಷರದಿಂದ ಆರಂಭವಾಗುತ್ತದೆ ಹಾಗೂ ಧಾರ್ಮಿಕ ಕ್ರಿಯೆಗಳ ಪೂಜೆಯ ಒಂದು ಅರ್ಪಣೆಯನ್ನು ವಿವರಿಸುತ್ತದೆ. ಶಿಷ್ಯನು ಯಾವುದಾದರೊಂದು ಅರ್ಪಣೆಯ ವಸ್ತುವನ್ನು ಮನಸ್ಸಿನಲ್ಲಿ ಭಾವಿಸಿಕೊಂಡು ಅದರಿಂದ ಪೂಜೆಯನ್ನು ಮಾಡಬೇಕು. ಮಂತ್ರದ ಉಪದೇಶ ಆಗಿರಲಿ ಅಥವಾ ಆಗಿರದೇ ಇರಲಿ ಆ ಮಂತ್ರವನ್ನು ಉಚ್ಚಾರ ಮಾಡಬೇಕೆಂಬುದನ್ನು ಶ್ರೀ ಶಂಕರಭಗವತ್ಪಾದರೇ ನಿರ್ದೇಶಿಸಿದ್ದಾರೆ. ಇದಕ್ಕೆ 'ಮಂತ್ರ ಮಾತೃಕಾ ಪುಷ್ಪಮಾಲಾಸ್ತವ' ಎಂದು ಹೆಸರು. ಈ ಶ್ಲೋಕಗಳ ಜೊತೆಯಲ್ಲಿ ಶ್ರೀ ಸೂಕ್ತದ ಮಂತ್ರಗಳನ್ನೂ ಹೇಳುತ್ತ ಪೂಜೆಯನ್ನು ಮಾಡುವ ಪದ್ಧತಿಯೂ ಉಂಟು. ಇದನ್ನು 'ಶ್ರೀ ಸೂಕ್ತಾವಿಧಾನಂ' ಎಂದು ಕರೆಯುತ್ತಾರೆ.

ಈ ಹದಿನಾರು ಶ್ಲೋಕಗಳ ಭಾವಾನುವಾದ ಹೀಗಿದೆ:

೧. "ಎಲೈ ಮಾತೆಯೇ, ಅಮೃತಸಾಗರದಲ್ಲಿ ಎತ್ತರವಾದ ಮೇಲೇರುತ್ತಿರುವ ಅಲೆಗಳಿವೆ. ಇವುಗಳ ಮಧ್ಯದಲ್ಲಿ ಪ್ರಶಸ್ತ ಶಿಲೆಗಳ ಒಂದು ದ್ವೀಪವಿದೆ. ಈ ದ್ವೀಪದಲ್ಲಿ ಕದಂಬ ವೃಕ್ಷವಿದೆ ಮತ್ತು ಎಲ್ಲವನ್ನೂ ನೀಡುವ ಕಲ್ಪವೃಕ್ಷದ ನೆರಳಿದೆ. ಅಲ್ಲಿ ಸಾವಿರ ಕಂಬಗಳ ಮಂಟಪವಿದೆ. ಈ ಕಂಬಗಳು ವಜ್ರಗಳಿಂದ ಕೂಡಿವೆ. ಈ ಮಂಟಪದಲ್ಲಿ ಚಿಂತಾಮಣಿಯಿಂದ ಕೆತ್ತಲಾದ ಸಿಂಹಾಸನವಿದೆ ಹಾಗೂ ಎಲ್ಲವನ್ನೂ ನೀಡುವ ಪ್ರಶಸ್ತಶಿಲೆ ಇದೆ. ಅದರಲ್ಲಿ ಕುಳಿತು ನೀನು ಸಭೆಯನ್ನು ನಡೆಸುತ್ತಿರುವಂತೆ ನನಗೆ ತೋರುತ್ತಿದೆ". ಈ ಮೇಲಿನ ಶ್ಲೋಕವು ಮಂತ್ರದ ಮೊದಲನೆಯ ಅಕ್ಷರ 'ಕ' ಎಂಬುದರಿಂದ ಆರಂಭವಾಗುತ್ತದೆ. ಅದು ಹದಿನಾರು ಉಪಚಾರಗಳಲ್ಲಿ ಆಸನವನ್ನು ಪ್ರತಿನಿಧಿಸುತ್ತದೆ.

೨. "ನಿನ್ನ ಶರೀರವು ಹುಟ್ಟುತ್ತಿರುವ ಸೂರ್ಯನಂತೆ ಹೊಳೆಯುತ್ತಿದೆ. ನೀನು ಕೈಗಳಲ್ಲಿ ಪಾಶ, ಅಂಕುಶ, ಬಿಲ್ಲು ಮತ್ತು ಬಾಣಗಳನ್ನು ಹಿಡಿದಿರುವೆ. ಚಂದ್ರನನ್ನು ಆಭರಣದಂತೆ ಹೊಂದಿರುವ ಪ್ರಶಸ್ತ ಶಿಲೆಗಳ ಕಿರೀಟವನ್ನು ನೀನು ಧರಿಸಿರುವೆ; ನಿನ್ನ ಮುಗುಳುನಗೆ ಮಲ್ಲಿಗೆ ಹೂವಿನ ಪುಷ್ಪದ ಸೌಮ್ಯತೆಯನ್ನು ಪ್ರತಿನಿಧಿಸುತ್ತದೆ. ನೀನು ಕೆಂಪು ಸೀರೆ ಮತ್ತು ಅದಕ್ಕೊಪ್ಪುವ ಇತರ ವಸ್ತುಗಳನ್ನು ಧರಿಸಿರುವೆ. ಸೂರ್ಯ, ಚಂದ್ರ ಮತ್ತು ಅಗ್ನಿಯರ ಪ್ರಭೆಯನ್ನು ಹೊಂದಿರುವ ನೀನು ಶ್ರೀಚಕ್ರದ ಮಧ್ಯದಲ್ಲಿ ವಾಸಿಸುತ್ತಿರುವೆ. ಈ ರೀತಿ ನಾನು ನಿನ್ನನ್ನು ಭಾವಿಸಿಕೊಂಡು ಪೂಜಿಸುತ್ತೇನೆ". ಈ ಶ್ಲೋಕವು ಮಂತ್ರದ ಎರಡನೆಯ ಅಕ್ಷರ 'ಏ' ಇಂದ ಆರಂಭವಾಗುತ್ತದೆ.

೩. ಎಲೈ ಮಾತೆಯೇ, ನೀನು ವಜ್ರಖಚಿತ ಸಿಂಹಾಸನದಲ್ಲಿ ಕುಳಿತಿರುವೆ. ಈ ಆಸನವು ಶಿವ, ಈಶಾನ ಮುಂತಾದವರಿಗೆ ಮಾತ್ರ ಮೀಸಲಾಗಿರುವುದರಿಂದ, ಇದು ತುಂಬ ಪವಿತ್ರವಾದುದು. ಕೇಸರಿ, ಗಂಧಗಳಿಂದ ಕೂಡಿದ ಸುಗಂಧಯುಕ್ತ ನೀರನ್ನು ಸ್ವೀಕರಿಸಿ ನಿನ್ನ ಪಾದಗಳನ್ನು ತೊಳೆದುಕೊ. ನಿನ್ನ ಕೈಗಳನ್ನು ತೊಳೆದುಕೊಳ್ಳಲು ಇದೋ ಇಲ್ಲಿದೆ ವಜ್ರದಂತೆ ಹೊಳೆಯುವ ನೀರು. ಈ ನಿರ್ಮಲವಾದ ಜಲದಿಂದ ನಿನ್ನ ಬಾಯಿ ಮತ್ತು ಮುಖವನ್ನು ತೊಳೆದುಕೊ. ನನ್ನ ಭಕ್ತಿ ಪ್ರತೀಕವಾದ ಈ ಎಲ್ಲವನ್ನೂ ದಯಮಾಡಿ ಸ್ವೀಕರಿಸು". ಈ ಶ್ಲೋಕವು ಮಂತ್ರದ ಮೂರನೆಯ ಅಕ್ಷರ 'ಈ' ಇಂದ ಆರಂಭವಾಗುತ್ತದೆ.

೪. "ಎಲ್ಲ ಯೋಗಿಗಳೂ ಧ್ಯಾನಿಸುವ ದೇವತೆಯೇ ನೀನು. ವಿಶಾಲವಾದ ನಿನ್ನ ಕಣ್ಣುಗಳ ಒಂದು ಕುಡಿನೋಟದಿಂದ ವಿಶ್ವದ ಎಲ್ಲರನ್ನೂ ಕಾಪಾಡುವ ವಿಶ್ವಮಾತೆಯೇ ನೀನು. ಗುಲಾಬಿ ನೀರು, ಗಂಧ, ಕೇಸರಿ, ತೆಂಗಿನಕಾಯಿ ಹಾಲು

ಹಾಗೂ ವೇದಮಂತ್ರಗಳನ್ನು ಹೇಳುವುದರ ಮೂಲಕ ಪವಿತ್ರಗೊಂಡ ಎಲ್ಲ ನದಿಗಳ ನೀರು ಇವೆಲ್ಲವನ್ನೂ ನಾನು ಮಾನಸಿಕವಾಗಿ ಸೃಷ್ಟಿಸಿಕೊಂಡು, ಇದನ್ನು ನಿನಗೆ ಸ್ನಾನಕ್ಕಾಗಿ ನೀಡುತ್ತೇನೆ. ಕರುಣಾ ಸಾಗರಿಯೇ, ದಯಮಾಡಿ ಈ ನನ್ನ ಮಾನಸಿಕ ಅರ್ಪಣೆಯನ್ನು ಸ್ವೀಕರಿಸು". ಈ ಶ್ಲೋಕವು ಮಂತ್ರದ ನಾಲ್ಕನೆಯ ಅಕ್ಷರ 'ಲ' ಇಂದ ಆರಂಭವಾಗುತ್ತದೆ.

೫. "ಹ್ರೀಂಕಾರ ಯುಕ್ತವಾದ ಮಂತ್ರದ ಗುರಿ ನೀನು. ಹಿಮಾಲಯದಿಂದ ತಂದ ಪ್ರಶಸ್ತ ಶಿಲೆಗಳಿಂದ ಅಲಂಕೃತಗೊಂಡ ಕೆಂಪು ಸೀರೆ ಮತ್ತು ಉತ್ತರೀಯವನ್ನು ಅರ್ಪಿಸುತ್ತೇನೆ. ಚಿನ್ನದ ಎಳೆಗಳಿಂದ ಹಾಗೂ ಮುತ್ತುಗಳಿಂದ ಅಲಂಕೃತಗೊಂಡ ಯಜ್ಞೋಪವೀತವು ಇಲ್ಲಿದೆ. ಇವೆಲ್ಲವನ್ನೂ ನಾನು ನನ್ನ ಮನಸ್ಸಿನಲ್ಲಿ ಸೃಷ್ಟಿಸಿದ್ದೇನೆ. ಇವೆಲ್ಲವನ್ನೂ ನನ್ನ ಅರ್ಪಣೆಯಾಗಿ ಸ್ವೀಕರಿಸು". ಈ ಶ್ಲೋಕವು ಐದನೆಯ ಅಕ್ಷರವಾದ ಹ್ರೀಂ ನಿಂದ ಆರಂಭಗೊಳ್ಳುತ್ತದೆ.

೬. "ನಿನ್ನ ನಡಿಗೆಯ ಭಾವವನ್ನು ನೋಡಿ ಹಂಸಗಳೂ ಅಸೂಯೆಪಡುತ್ತವೆ. ಎಲೈ ಮಾತೆಯೇ, ಹೊಳೆಯುವ ಮುತ್ತುಗಳಿಂದ ಮಾಡಿದ ಈ ಕಂಠಾಭರಣವನ್ನು ನಿನಗಾಗಿ ತಂದಿದ್ದೇನೆ. ಶುದ್ಧವಾದ ಚಿನ್ನದಿಂದ ಮಾಡಿದ ತೋಳಬಂದಿಗಳು, ವಜ್ರದ ಬಳೆಗಳು, ಕಡಗಗಳು ಮತ್ತು ಕಿವಿಯ ಓಲೆಗಳು ನಿನಗಾಗಿ. ಅರ್ಧಚಂದ್ರನಿಂದ ಸಿಂಗಾರಗೊಂಡ ವಜ್ರಖಚಿತ ಕಿರೀಟ, ಮೂಗುತಿ, ಹತ್ತು ಬೆರಳುಗಳಿಗೂ ಉಂಗುರಗಳು, ಸಣ್ಣ ಸಣ್ಣ ಘಂಟೆಗಳಿಂದ ಅಲಂಕೃತಗೊಂಡ ಒಡ್ಯಾಣ ನಿನಗಾಗಿ. ಇವೆಲ್ಲವೂ ಶುದ್ಧ ಚಿನ್ನ ಮತ್ತು ವಜ್ರದಿಂದ ಮಾಡಿದವುಗಳು. ಇವೆಲ್ಲವನ್ನೂ ನಾನು ಮಾನಸಿಕವಾಗಿ ಸೃಷ್ಟಿಸಿದ್ದೇನೆ. ದಯಮಾಡಿ ಇವೆಲ್ಲವನ್ನೂ ಸ್ವೀಕರಿಸು". ಈ ಶ್ಲೋಕವು ಮಂತ್ರದ ಆರನೆಯ ಅಕ್ಷರ 'ಹ' ಇಂದ ಆರಂಭವಾಗುತ್ತದೆ.

೭. ಕೊನೆಯ ಕೆಲವು ಪದ್ಯಗಳಲ್ಲಿ, ಮಾತೆಯನ್ನು ತಲೆಯಿಂದ ಪಾದದವರೆಗೆ ಚಿನ್ನದ ಹಾಗೂ ವಜ್ರಗಳಿಂದ ಅಲಂಕರಿಸುವ ರೀತಿಯನ್ನು ವರ್ಣಿಸಲಾಗಿದೆ. ಈ ಶ್ಲೋಕದಲ್ಲಿ ಗಂಧ, ಪುನುಗು ಮತ್ತು ಇತರ ಸುಗಂಧ ದ್ರವ್ಯಗಳನ್ನು ಮಾತೆಗೆ ಅರ್ಪಿಸುವುದನ್ನು ವರ್ಣಿಸಲಾಗಿದೆ. "ಮಾತೆಯೇ, ಕರ್ಪೂರ, ಕೇಸರಿ ಮತ್ತು ಶ್ರೀಗಂಧವನ್ನು ಸಮಪ್ರಮಾಣದಲ್ಲಿ ಮಿಶ್ರಮಾಡಿ ತಂದಿದ್ದೇನೆ. ಇದು ನಿನ್ನ ಶರೀರದ ಬಣ್ಣಕ್ಕೆ ಸರಿಯಾಗಿ ಹೊಂದಿಕೊಳ್ಳುತ್ತದೆ. ನಿನ್ನ ವಿಶಾಲವಾದ ಹಣೆಯ ಅಲಂಕಾರಕ್ಕಾಗಿ ಪುನುಗು ಇಲ್ಲಿದೆ. ಕನ್ನಡಿಯಂತಿರುವ ಸುಗಂಧಲೇಪಿತ ನಿನ್ನ ಗಲ್ಲಗಳ ಮೇಲೆ ಅಲಂಕೃತ ಚಿತ್ರಗಳು ಚಿತ್ರಿಸಲ್ಪಟ್ಟಿವೆ. ನಿನ್ನ ಸುಂದರ ಕಣ್ಣುಗಳಿಗೆ ಇಲ್ಲಿದೆ ಕಾಡಿಗೆ; ಹಾಗೂ ಶಂಖದಂತಿರುವ ನಿನ್ನ ಕೊರಳಿಗೆ ಲೇಪಿಸಲು ವರ್ಣಗಳು ಇಲ್ಲಿವೆ. ಇವೆಲ್ಲವನ್ನೂ ನಿನ್ನ ಸಂತೋಷಕ್ಕಾಗಿ ನಾನು ಮಾನಸಿಕವಾಗಿ ಸೃಷ್ಟಿಸಿದ್ದೇನೆ.

ದಯಮಾಡಿ ಇವೆಲ್ಲವನ್ನೂ ಸ್ವೀಕರಿಸು". ಈ ಶ್ಲೋಕವು ಮಂತ್ರದ ಆರನೆಯ ಅಕ್ಷರ 'ಸ' ಇಂದ ಆರಂಭವಾಗುತ್ತದೆ

೮. ಗಂಧವೇ ಮುಂತಾದವುಗಳನ್ನು ಮಾತೆಗೆ ಅರ್ಪಿಸಿದನಂತರ, ಈ ಶ್ಲೋಕದಲ್ಲಿ ಸುಗಂಧದಿಂದ ಕೂಡಿದ ಬಣ್ಣ ಬಣ್ಣದ ಹೂವುಗಳಿಂದ ಮಾಡಿದ ಪುಷ್ಪಮಾಲಿಕೆಯನ್ನು ಅರ್ಪಿಸುವುದನ್ನು ವಿವರಿಸಲಾಗಿದೆ. ಲಿಲ್ಲಿಗಳು, ತಾವರೆಗಳು, ವಿವಿಧ ರೀತಿಯ ಮಲ್ಲಿಗೆಗಳು, ಚಿನ್ನದ ತಾವರೆಗಳು, ವಿವಿಧ ವರ್ಣದ ಕರವೀರಗಳು, ದಾಸವಾಳಗಳು ಮತ್ತು ಅನೇಕ ರೀತಿಯ ಸುವಾಸನೆಯ ಪುಷ್ಪಗಳು ಇಲ್ಲಿವೆ ನಿನಗಾಗಿ. ನನ್ನ ಕಲ್ಪನಾಶಕ್ತಿ ಮತ್ತು ನಂಬಿಕೆಗಳ ಮೂಲಕ ಈ ಹೂವುಗಳನ್ನು ಪೋಣಿಸಿ ಹಾರಗಳನ್ನು ತಯಾರಿಸಿದ್ದೇನೆ. ನಿನ್ನ ಶರೀರವನ್ನು ಅಲಂಕರಿಸಿಕೊಳ್ಳುವುದಕ್ಕೋಸ್ಕರ ದಯಮಾಡಿ ಇವುಗಳನ್ನು ಸ್ವೀಕರಿಸು". ಈ ಶ್ಲೋಕವು ಮಂತ್ರದ ಎಂಟನೆಯ ಅಕ್ಷರ 'ಕ' ಇಂದ ಆರಂಭಗೊಳ್ಳುತ್ತದೆ.

೯. ಹಿಂದಿನ ಶ್ಲೋಕದಲ್ಲಿ ವರ್ಣಿಸಿರುವಂತೆ ಪುಷ್ಪಹಾರವನ್ನು ಅರ್ಪಿಸಿದ ನಂತರ ಧೂಪವನ್ನು ಅರ್ಪಿಸಬೇಕು. "ಎಲೈ ತಾಯಿಯೇ, ನಿನ್ನ ತುರುಬು ಹೆಜ್ಜೇನಿನ ರೆಕ್ಕೆಗಳ ಮತ್ತು ನೀಲಮಣಿಗಳ ಬಣ್ಣದಂತೆ ಹೊಳೆಯುತ್ತಿದೆ. ನಿನ್ನ ಉದ್ದವಾದ ತಲೆಯ ಕೇಶ ಹಾಗೂ ಅಂದವಾದ ಶರೀರ ಮತ್ತು ಅಂಗಾಂಗಳಿಂದ ಮನ್ಮಥನನ್ನು ನಾಶಮಾಡಿದ ಶಿವನನ್ನೂ ಮೀರಿಸುತ್ತಿದೆ. ನಿನ್ನ ಅಂದವಾದ ಮೂರ್ತರೂಪಕ್ಕೆ ಸುವಾಸನೆಯ ಗೋಲರಸ, ಸಾಂಬ್ರಾಣಿ ಮತ್ತು ಸುವಾಸನೆ ಬೀರುವ ಇತರ ರಸಗಳನ್ನು ನನ್ನ ಕಲ್ಪನೆಯಲ್ಲಿ ಅರ್ಪಿಸುತ್ತೇನೆ". ಈ ಶ್ಲೋಕವು ಮಂತ್ರದ ಒಂಬತ್ತನೆಯ ಅಕ್ಷರ 'ಹ' ಇಂದ ಆರಂಭ ಗೊಳ್ಳುತ್ತದೆ.

೧೦. ಹಿಂದಿನ ಶ್ಲೋಕದಲ್ಲಿ ಹೇಳಿರುವಂತೆ ಧೂಪವನ್ನು ಅರ್ಪಿಸಿದ ನಂತರ ಮುಂದಿನ ಶ್ಲೋಕದಲ್ಲಿ ದೀಪವನ್ನು ಅರ್ಪಿಸುವುದನ್ನು ವರ್ಣಿಸಲಾಗಿದೆ. "ಹಿಮವಂತನ ಮಗಳೇ, ಪ್ರಶಸ್ತ ಶಿಲೆಗಳಿಂದ ಮಾಡಿದ ಕಂಬಗಳನ್ನು ಅಳವಡಿಸಿರುವ, ಹಾಗೂ ಈ ಕಂಬಗಳ ತುದಿಯಲ್ಲಿ ಹೊಳೆಯುವ ಹಾರಗಳಂತೆ ಕಾಣುವ ದೀಪಗಳನ್ನು ತೂಗುಬಿಟ್ಟಿರುವ ನಿನ್ನ ಭವ್ಯ ಅರಮನೆಯನ್ನು ನನ್ನ ಕಲ್ಪನೆಯ ಮೂಲಕ ಬೆಳಗುತ್ತೇನೆ. ಈ ದೀಪವನ್ನು ಸಂತೋಷದಿಂದ ಸ್ವೀಕರಿಸು". ಈ ಶ್ಲೋಕವು ಮಂತ್ರದ ಹತ್ತನೆಯ ಅಕ್ಷರ 'ಲ' ಇಂದ ಆರಂಭಗೊಳ್ಳುತ್ತದೆ.

೧೧. ದೀಪಗಳನ್ನು ಅರ್ಪಿಸಿದ ನಂತರ, ಈ ಹನ್ನೊಂದನೆಯ ಶ್ಲೋಕದಲ್ಲಿ ದೇವಿಗೆ ಭಕ್ಷ್ಯಭೋಜ್ಯಗಳ ಅರ್ಪಣೆಯ ವಿವರಗಳಿವೆ. "ಹ್ರೀಂಕಾರ ರಾಣಿಯೇ, ಹಸುವಿನ ತುಪ್ಪದಿಂದ ತಯಾರಿಸಿದ ಅನ್ನ, ಬೇಳೆ ಹಾಗೂ ತರಕಾರಿ ಇಲ್ಲಿವೆ. ಹಾಲು, ಜೇನು, ಸಕ್ಕರೆ ಮತ್ತು ಮೊಸರಿನಿಂದ ಮಾಡಿದ ವಿವಿಧ ಬಣ್ಣಗಳ ಮತ್ತು ರುಚಿಗಳ

ಅನ್ನದ ಖಾದ್ಯಗಳು ಇಲ್ಲಿವೆ. ವೈವಿಧ್ಯಮಯ ಹತ್ತಾರು ಬಗೆಯ ರೊಟ್ಟಿಗಳೂ, ಅನೇಕ ವಿಧವಾದ ಹಣ್ಣುಗಳೂ ಹೊಳೆಯುವ ಚಿನ್ನದ ಪಾತ್ರೆಗಳಲ್ಲಿ ನಿನಗೆ ತಿನ್ನಲು ಅನುಕೂಲವಾಗುವಂತೆ ಇಡಲ್ಪಟ್ಟಿವೆ. ಇವೆಲ್ಲವನ್ನೂ ನಾನು ನನ್ನ ಕಲ್ಪನೆಯಿಂದ ತಯಾರಿಸಿದ್ದೇನೆ. ದಯಮಾಡಿ ಇವೆಲ್ಲವನ್ನೂ ಸ್ವೀಕರಿಸು". ಈ ಶ್ಲೋಕವು, ಮಂತ್ರದ ಹನ್ನೊಂದನೆಯ ಅಕ್ಷರ 'ಹ್ರೀಂ'ನಿಂದ ಆರಂಭಗೊಳ್ಳುತ್ತದೆ.

೧೨. ಭಕ್ಷ್ಯಭೋಜ್ಯಗಳನ್ನು ಮಾನಸಿಕವಾಗಿ ನೀಡಿದ ನಂತರ ಭಕ್ತನು ವಿಳ್ಳೇದೆಲೆ ಹಾಗೂ ಇತರ ಪರಿಕರಗಳನ್ನು ನೀಡುವುದನ್ನು ಈ ಶ್ಲೋಕದಲ್ಲಿ ವರ್ಣಿಸಲಾಗಿದೆ. "ಮಾತೆಯೇ! ಚಿನ್ನದ ವರ್ಣದ ಕೇತಕಿ ಪುಷ್ಪದ ಬಣ್ಣದ ಹದವಾದ ವಿಳ್ಳೇದೆಲೆ, ಜೊತೆಗೆ ಕರ್ಪೂರದ ಸುವಾಸನೆಯ ಹಾಗೂ ನಿಜವಾದ ಮುತ್ತುಗಳನ್ನು ಪುಡಿ ಮಾಡಿ ಅದನ್ನು ಮಿಶ್ರಣ ಮಾಡಿದ ಅಡಕೆ ಇಲ್ಲಿದೆ. ಇವೆಲ್ಲವನ್ನೂ ನಿನ್ನ ಮುಂದೆ ವಜ್ರ ಖಚಿತ, ಪ್ರಶಸ್ತ ಶಿಲೆಗಳ ಹರಿವಾಣಗಳಲ್ಲಿ ಇಡಲಾಗಿದೆ. ನಿನ್ನ ಶ್ರೇಷ್ಠ ರುಚಿಗೆ ತೃಪ್ತಿತರುವಂತೆ ಇವೆಲ್ಲವನ್ನೂ ಇಡಲಾಗಿದೆ. ದಯಮಾಡಿ ನನ್ನ ಭಕ್ತಿಪೂರ್ವಕ ಅರ್ಪಣೆಯನ್ನು ಸ್ವೀಕರಿಸು". ಈ ಶ್ಲೋಕವು ಮಂತ್ರದ ಹನ್ನೆರಡನೆಯ ಅಕ್ಷರ 'ಸ' ಇಂದ ಪ್ರಾರಂಭ ವಾಗುತ್ತದೆ.

೧೩. ವಿಳ್ಳೇದೆಲೆಯನ್ನು ಹಿಂದಿನ ಶ್ಲೋಕದಲ್ಲಿ ಅರ್ಪಿಸಿದ ನಂತರ, ಈ ಶ್ಲೋಕದಲ್ಲಿ ಕರ್ಪೂರದ ಆರತಿಯನ್ನು ವರ್ಣಿಸಲಾಗಿದೆ". ಮುತ್ತು ಮತ್ತು ಇತರ ಪ್ರಶಸ್ತ ಶಿಲೆಗಳಿಂದ ಕೂಡಿದ ದೀಪದ ಕಂಬಗಳಲ್ಲಿ ಕರ್ಪೂರದ ದೀಪಗಳಿವೆ. ಅವು ಅಂದವಾದ ಕನ್ನಿಕೆಯರು ಸಾಲು ದೀಪಕಂಬಗಳನ್ನು ಹಿಡಿದು ನಿಂತಿರುವಂತೆ ಕಾಣುತ್ತವೆ. ಮಂತ್ರದ ನಾದದ ಜೊತೆಗೆ ಸುಶ್ರಾವ್ಯವಾದ ಸಂಗೀತ-ನೃತ್ಯಗಳನ್ನು ನಿನಗೆ ಅರ್ಪಿಸುತ್ತಿರುವಂತೆ ಭಾಸವಾಗುತ್ತದೆ. ದಯಮಾಡಿ ಇದನ್ನು ಸ್ವೀಕರಿಸು". ಈ ಶ್ಲೋಕವು ಮಂತ್ರದ ಹದಿಮೂರನೆಯ ಅಕ್ಷರ 'ಕ' ಇಂದ ಆರಂಭಗೊಳ್ಳುತ್ತದೆ.

೧೪. "ವಿಶ್ವಮಾತೆಯೇ ! ಪದಕಗಳನ್ನು ಸುತ್ತಲೂ ತೂಗು ಹಾಕಿರುವ ಶ್ವೇತಚ್ಛತ್ರಿಯನ್ನು ಲಕ್ಷ್ಮಿಯು ನಿನ್ನ ಮೇಲೆ ಹಿಡಿದಿದ್ದಾಳೆ. ಇಂದ್ರನ ಪತ್ನಿ ಶಚೀದೇವಿ ಮತ್ತು ಮನ್ಮಥನ ಪತ್ನಿ ರತೀದೇವಿಯರು ನಿನ್ನ ಎರಡೂ ಪಕ್ಕಗಳಲ್ಲಿ ನಿಂತು, ಪ್ರಾಣಿಗಳ ಕೂದಲುಗಳಿಂದ ಮಾಡಿದ ಚಾಮರದಿಂದ ನಿಧಾನವಾಗಿ ಗಾಳಿಯನ್ನು ಬೀಸುತ್ತಿದ್ದಾರೆ. ಜ್ಞಾನ ದೇವತೆಯೂ ತಾನೇ ಸಂಗೀತ ರೂಪದಲ್ಲಿರುವ ಸರಸ್ವತಿಯು ತನ್ನ ವೀಣೆಯಿಂದ ನಿನಗೆ ಸಂಗೀತ ಸೇವೆಯನ್ನು ಅರ್ಪಿಸುತ್ತಿದ್ದಾಳೆ. ದೇವಲೋಕದ ಕನ್ನಿಕೆಯರು ವಿವಿಧ ಮುದ್ರೆಗಳಿಂದ ತಾಳಕ್ಕೆ ತಕ್ಕಂತೆ ಭಾವಾವೇಶದಲ್ಲಿ ನರ್ತನ ಮಾಡುತ್ತಿದ್ದಾರೆ. ಇವೆಲ್ಲವನ್ನೂ ನಾನು ಕಲ್ಪನೆಯ

ಮೂಲಕ ಸೃಷ್ಟಿಸಿದ್ದೇನೆ. ದಯಮಾಡಿ ಇವೆಲ್ಲವನ್ನೂ ನೋಡಿ, ಕೇಳಿ, ಸಂತೋಷಪಟ್ಟು, ನನ್ನನ್ನು ಆಶೀರ್ವದಿಸು" ಈ ಶ್ಲೋಕವು ಮಂತ್ರದ ಹದಿನಾಲ್ಕನೆಯ ಅಕ್ಷರ 'ಲ' ಇಂದ ಆರಂಭವಾಗುತ್ತದೆ.

೧೫. ಶ್ವೇತಚ್ಛತ್ರವನ್ನು ದೇವಿಗೆ ಸಮರ್ಪಿಸಿದ ನಂತರ, ಈ ಶ್ಲೋಕದಲ್ಲಿ, ಪ್ರದಕ್ಷಿಣೆಯ ಅರ್ಪಣೆಯನ್ನು ವರ್ಣಿಸಲಾಗಿದೆ.

"ಮಾತೆಯೇ ! ನಿನ್ನ ದಿವ್ಯರೂಪವನ್ನು ಮೂರು ಹ್ರೀಂಕಾರ ಮಂತ್ರಗಳೊಂದಿಗೆ ಪೂಜಿಸಿದ ನಂತರ, ಅದರ ಅರ್ಥವನ್ನು ಉಪನಿಷತ್ತಿನ ಸೂಕ್ತಿಗಳಿಂದ ಮಾತ್ರ ತಿಳಿಯಲು ಸಾಧ್ಯ. ನಿನ್ನ ದಿವ್ಯರೂಪವನ್ನು ಇನ್ಯಾರಿಂದ ವರ್ಣಿಸಲು ಸಾಧ್ಯ? ಆದುದರಿಂದ ನಾನು ಉಚ್ಚರಿಸುವ ಎಲ್ಲ ನುಡಿಗಳೂ ನಿನ್ನ ಪ್ರಶಸ್ತಿಯೇ ಆಗಲಿ. ಉದ್ದೇಶಪೂರಿತ ಅಥವಾ ಉದ್ದೇಶ ರಹಿತವಾಗಿರುವ ನನ್ನ ಓಡಾಡುವಿಕೆಯೇ ನಿನಗೆ ಪ್ರದಕ್ಷಿಣೆಯಾಗಲಿ. ನನ್ನ ನಿದ್ದೆ ಮತ್ತು ತೂಕಡಿಕೆಗಳೇ ಶ್ರೇಷ್ಠ ಹಂತದ ಸಮಾಧಿ ಎಂದು ಭಾವಿಸು. ನಾನು ಪಂಚೇಂದ್ರಿಯಗಳಿಂದ ಅನುಭವಿಸುವ ಸಣ್ಣ ಪುಟ್ಟ ಸಂತೋಷಗಳೇ ನಿನಗೆ ಶ್ರೇಷ್ಠ ಪೂಜೆಯಾಗಲಿ". ಈ ಶ್ಲೋಕವು ಮಂತ್ರದ ಹದಿನೈದನೆಯ ಅಕ್ಷರ "ಹ್ರೀಂ' ನಿಂದ ಪ್ರಾರಂಭಗೊಳ್ಳುತ್ತದೆ.

೧೬. ಈ ಮಾನಸಿಕ ಪೂಜೆಯು ಹದಿನಾರನೆಯ ಶ್ಲೋಕದಿಂದ ಕೊನೆಗೊಳ್ಳುತ್ತದೆ. ಅದನ್ನೇ ಮಂತ್ರಪುಷ್ಪವೆಂದು ಭಾವಿಸಬೇಕು. "ಈ ಶ್ಲೋಕಮಾಲಿಕೆಯು ಪವಿತ್ರ ಮಂತ್ರದ ಅಕ್ಷರಗಳಿಂದ ಆರಂಭಗೊಂಡು, ಹಿಮವಂತನ ಮಗಳಿಗೆ ಪೂಜಾ ರೂಪದಲ್ಲಿದೆ. ಇದೇ ಮಂತ್ರಪುಷ್ಪದ ಅರ್ಪಣೆ. ಯಾವ ಭಕ್ತನು ಪ್ರತಿದಿನ ಎರಡು ಸಂಧ್ಯಾ ಸಮಯಗಳಲ್ಲಿ ಭವಾನಿಯನ್ನು ಪೂಜಿಸುತ್ತಾನೆಯೋ, ಅವನ ಹೃದಯದಲ್ಲಿ ಆ ಮಾತೆಯು ವಾಸಿಸುತ್ತಾಳೆ. ಆನಂದಮಯವಾದ ಆಕೆಯ ರೂಪವು ದಿವ್ಯ ಸಂತೋಷದಿಂದ ಕುಣಿಯುತ್ತದೆ. ಜ್ಞಾನದೇವತೆಯೇ ಅವನ ಮುಖದಲ್ಲಿ ನರ್ತಿಸುತ್ತಾಳೆ. ಐಶ್ವರ್ಯದ ದೇವತೆ ಲಕ್ಷ್ಮಿಯು ಅವನ ಮನೆಯಲ್ಲಿ ಸದಾ ವಾಸಿಸುತ್ತಾಳೆ".

ಶ್ರೀ ಶಂಕರ ಭಗವತ್ಪಾದರು ಈ ಮಾನಸಿಕ ಪೂಜೆಯನ್ನು ಉಪಸಂಹಾರದಿಂದ ಪೂರ್ಣಗೊಳಿಸಿದ್ದಾರೆ."ನಾನು ಈ ಅರ್ಪಣೆಯನ್ನು ಸುಂದರ ಛಂದಸ್ಸಿನ ಪೂರ್ಣಭಕ್ತಿಯೆಂಬ ಸುವಾಸನೆಯ ಸಮೇತ ರಚಿಸಿದ್ದೇನೆ. ಶಿವನಲ್ಲಿರುವ ನನ್ನ ಭಕ್ತಿಯನ್ನೂ ಇದಕ್ಕೆ ಸೇರಿಸಿದ್ದೇನೆ. ಇದನ್ನು ಭವಾನಿಯ ಪವಿತ್ರ ಪಾದಕಮಲಗಳಲ್ಲಿ ಅರ್ಪಿಸಿದ್ದೇನೆ. ಮಂತ್ರಗಳ ಅಕ್ಷರಗಳಿಂದ ಕೂಡಿರುವ ಈ ಪುಷ್ಪ ಮಾಲಿಕೆಯು ಶ್ರೇಷ್ಠ ಕವಿಗಳೆಂಬ ಭೃಂಗಗಳ ಮನಸ್ಸಿನಲ್ಲಿ ಸದಾ ಆನಂದವನ್ನುಂಟು ಮಾಡಲಿ".

ಈ ಎಲ್ಲ ಅರ್ಪಣೆಗಳೂ ಆದನಂತರ ಪುನಃ ಪೂಜೆಯನ್ನು ಮಾಡುವುದು ಪದ್ಧತಿ. ಇದರಲ್ಲಿ ಛತ್ರಿ, ಚಾಮರ, ನೃತ್ಯ-ಸಂಗೀತ, ಪಲ್ಲಕ್ಕಿ ಸೇವೆಗಳು ಸೇರಿವೆ.

9. ಕಾಮ ಕಲಾ ವಿಲಾಸದ ಹದಿನಾರನೆಯ ಸೂತ್ರದ ಟೀಕೆಯಲ್ಲಿ ಹೀಗೆ ಹೇಳಿದೆ:- "ಶ್ರೀವಿದ್ಯೆಯನ್ನು ಪ್ರಸ್ತುತ ಪಡಿಸುವ ಮಂತ್ರಗಳಾದ ಬಾಲ, ಪಂಚದಶಿ, ಷೋಡಶಾಕ್ಷರಿ ಇತ್ಯಾದಿಗಳು, ಈ ಸಾಧನೆಯ ಮುಖ್ಯ ಗುರಿಯಾದ ಮೂಲಭೂತ ತತ್ವವನ್ನು ಸಂಕೇತಿಸುತ್ತವೆ. ಶ್ರೀ ಗಾಯತ್ರಿಯನ್ನು ಕುರಿತಂತೆ ಯಾಜ್ಞವಲ್ಕ್ಯರೇ ಮುಂತಾದ ಋಷಿಗಳು ಹಾಗೂ ಖಂಡರಾಜ, ವಿದ್ಯಾರಣ್ಯ, ಸಾಯಣ ಮುಂತಾದ ಸಂತರೂ ಅನೇಕ ವ್ಯಾಖ್ಯೆಗಳನ್ನು ನೀಡಿದ್ದಾರೆ. ಈ ಎಲ್ಲ ವ್ಯಾಖ್ಯೆಗಳನ್ನೂ ಇಲ್ಲಿ ಚರ್ಚಿಸುವುದು ಸಾಧ್ಯವಿಲ್ಲ. ಅನೇಕ ಸಾಧನೆಗಳಲ್ಲಿ ಶ್ರೀ ಗಾಯತ್ರಿಯನ್ನು ವಿಷ್ಣು, ಶಿವ, ಶಕ್ತಿ, ಸೂರ್ಯ ಇತ್ಯಾದಿಯಾಗಿ ಪೂಜಿಸುವುದೂ ಉಂಟು. ಇವುಗಳಲ್ಲಿ ದೇವತೆಗಳನ್ನು ಗುರುತಿಸುವ ಸಲುವಾಗಿ, ಶ್ರೀ ವಿದ್ಯೆಯ ಮಂತ್ರಗಳನ್ನು ಗುರುತಿಸುವುದಕ್ಕೋಸ್ಕರ, ಮಂತ್ರಗಳ ಅರ್ಥವು ಸೂಚಿತವಾಗಿದೆ. 'ನಾನೇ ಬ್ರಹ್ಮ, ಬ್ರಹ್ಮನೇ ನಾನು' ಎನ್ನುವುದೇ ಬಾಲಮಂತ್ರದ ಅರ್ಥ. "ಹೃದಯದ ಕಮಲದಲ್ಲಿ ವಾಸಿಸುವ ಹಾಗೂ ಪ್ರಜ್ವಲಿಸುವ ಬೆಂಕಿಯಂತೆ ಹೊಳೆಯುವ, ಆ ಪ್ರಜ್ಞೆಯ ಶಕ್ತಿಯು ಸತತವಾದ ಆನಂದವನ್ನು ನೀಡುವುದರ ಜೊತೆಗೆ, ಐಶ್ವರ್ಯ ಹಾಗೂ ಖ್ಯಾತಿಯನ್ನು ತಂದುಕೊಟ್ಟು, ಇತರ ತೊಂದರೆಗಳಿಂದ ರಕ್ಷಿಸುತ್ತದೆ" ಎನ್ನುವುದೇ ಪಂಚದಶಿ ಮಂತ್ರದ ಅರ್ಥ.

ಷೋಡಶಾಕ್ಷರಿ :- ಇದಕ್ಕೆ ರಾಜರಾಜೇಶ್ವರೀ ಶ್ರೀವಿದ್ಯೆಯೆಂದೂ ಹೆಸರು. ಇದರ ಅರ್ಥ ಹೀಗಿದೆ. ಇಲ್ಲೊಂದು ಕಂಚಿನ ಪಾತ್ರೆಯಿದೆಯೆಂದು ಊಹಿಸಿಕೊಳ್ಳಿ. ಅದರಲ್ಲಿ ನಿರ್ಮಲವಾದ ನೀರಿದೆ. ಅದರಲ್ಲಿ, ಅದಕ್ಕೆ ಅಂಟಿಕೊಂಡಿರುವಂತೆ ಸ್ಫಟಿಕವಿದೆ. ದೇವತೆಯು ಸ್ಫಟಿಕದಂತೆ ಇದ್ದು ಅದಕ್ಕೆ ಮೂರು ಗುಣಗಳಿವೆ. ಅವಳು ವಸ್ತುವಿನ ರೂಪವನ್ನು ಧರಿಸಿ, ಮೂವತ್ತಾರು ಗುಣಗಳ ಮಹತ್ತನ್ನು ಸೃಷ್ಟಿಸಲು ಚಿಗುರು ಒಡೆಯುತ್ತದೆ. ಶಬ್ದ ಹಾಗೂ ಒತ್ತಡದ ಮೂಲಕ ಅಹಂತನವನ್ನು ಆಕೆ ಪಡೆಯುತ್ತಾಳೆ. ಇದು ಆಗುವಾಗ ಆಕೆ ಪಾರ್ವತಿ-ಪರಮೇಶ್ವರ, ವಾಣಿ-ಹಿರಣ್ಯಗರ್ಭ, ಲಕ್ಷ್ಮೀ-ನಾರಾಯಣ, ಅಗ್ನಿ-ಸೋಮ, ಪಂಚಭೂತಗಳು ಮುಂತಾದ ರೂಪಗಳನ್ನು ಆ ಪಾತ್ರೆಯ ಪ್ರತಿಬಿಂಬದಿಂದ ಪಡೆಯುತ್ತಾಳೆ. ಮೂಲಭೂತ ಬ್ರಹ್ಮನ್ ಅನ್ನು ಅರಿವು ಮಾಡಿಕೊಳ್ಳುವ, ಹಾಗೂ ಮಾಯೆಯ ರೂಪವನ್ನು ಧರಿಸುವ ಶಕ್ತಿಯುಳ್ಳ ಆ ಹೊಳೆಯುವ ಪ್ರತಿಬಿಂಬ ನನ್ನ ಅಜ್ಞಾನವನ್ನು ನಾಶ ಮಾಡಿ, ನೇರವಾಗಿ ಬ್ರಹ್ಮನ್ ಅನ್ನು ಅನುಭವಿಸುವಂತೆ ಮಾಡಲಿ, ಆ ಮೂಲಭೂತ ತತ್ವ. ಇತಿ ಶಿವಂ".

10. ಆ ಮೂಲಭೂತ ತತ್ವದ ಕಾಣುವ ರೂಪವನ್ನು 'ತಟಸ್ಥ' ಎಂದು ಕರೆಯಲಾಗಿದೆ. ಇದು ಸ್ವರೂಪಕ್ಕಿಂತಲೂ ಭಿನ್ನವಾದುದು. ಮೂಲಭೂತ ತತ್ವದ ರೂಪಗಳೇ-ಸ್ವರೂಪ-ಸತ್ಯ-ಪ್ರಜ್ಞೆ-ಆನಂದ. ಈ ರೂಪದಲ್ಲಿ ವಿಶ್ವದ ಸೃಷ್ಟಿಯು ಕಾರ್ಯವಿರುವುದಿಲ್ಲ. ಅವನು ತಟಸ್ಥ ರೂಪವನ್ನು ಹೊಂದಿದಾಗ, ನಾಮ ಮತ್ತು ರೂಪಗಳನ್ನು ಪಡೆಯುತ್ತಾನೆ. ಆಗ ಅವನನ್ನು ತಟಸ್ಥ ರೂಪ ಹೊಂದಿರುವವನು ಎಂದು ತಿಳಿಯಲಾಗುತ್ತದೆ. ಈ ನಾಮ ಅಥವಾ ಹೆಸರಿರುವುದನ್ನೇ ಶಬ್ದಬ್ರಹ್ಮ ಎಂದು ಕರೆಯುತ್ತೇವೆ. ಅದಕ್ಕೆ ನಾಲ್ಕು ರೀತಿಯ ವಾಕ್‌ಗಳಿವೆ. ಇದೇ ವಿಶ್ವ ಸೃಷ್ಟಿಯ ಅಥವಾ ಜಗತ್ತಿನ ರೂಪವನ್ನು ತೋರಿಸುತ್ತದೆ. ಆದುದರಿಂದ ಈ ನಾಲ್ಕು ವಾಕ್‌ಗಳು ಕೊನೆಗೆ ಮೂಲಭೂತ ತತ್ವಕ್ಕೆ ಗಾಢವಾಗಿ ಸಂಬಂಧಿಸಿದುದಾಗಿದ್ದು, ಅದು ರೂಪವನ್ನು ಪಡೆಯಲು ಸಹಕರಿಸುತ್ತದೆ. ಈ ನಾಲ್ಕು ವಾಕ್‌ಗಳ ಹೆಸರೇ ಪರಾ, ಪಶ್ಯಂತಿ, ಮಧ್ಯಮ ಮತ್ತು ವೈಖರಿ. ಈ ನಾಲ್ಕು ವಾಕ್‌ಗಳು ಶ್ರೀ ಚಕ್ರದ ಒಂಬತ್ತು ಅಂಗಗಳನ್ನು ಪ್ರತಿನಿಧಿಸುತ್ತವೆ. ಈ ಸಂದರ್ಭದಲ್ಲಿ ಓದುಗನು 13ನೆಯ ಪ್ರಶ್ನೆಗೆ ಉತ್ತರವನ್ನು ನೋಡಬೇಕೆಂದು ಕೋರಲಾಗಿದೆ. ಕಾಮಕಲಾ ವಿಲಾಸದ ಇಪ್ಪತ್ತನೆಯ ಸೂತ್ರವು ಈ ನಾಲ್ಕು ವಾಕ್‌ಗಳಿಗೂ ಮೂಲಭೂತ ತತ್ವಕ್ಕೂ ಇರುವ ಸಂಬಂಧವನ್ನು ವಿವರಿಸುತ್ತದೆ. ಇದರ ಪ್ರತಿಪದಾರ್ಥವು ಹೀಗಿದೆ. "ಈ ಮೂಲಭೂತತತ್ವದ ಶಕ್ತಿಯು ಮನಸ್ಸಿನ ತಿಳಿವಳಿಕೆಗೂ ಮೀರಿದ್ದು. ಇದು ಪರಾವಾಕ್; ವಾಸ್ತವವಾಗಿ ಇದು ಯಾವ ಬಂಧನವೂ ಇಲ್ಲದ ಚಿಂತನೆ; ಇದು ಎಲ್ಲವನ್ನೂ ಆವರಿಸಿಕೊಂಡಿರುವ ಹಾಗೂ ಎಲ್ಲವನ್ನೂ ನಿಯಂತ್ರಿಸುವ-ಮಹಾ ಸಾಮ್ರಾಜ್ಞಿ. ಆಕೆಯು ಸ್ವಯಂ ವೇದ್ಯವಾಗುವ ಮೂರು ರೂಪಗಳಲ್ಲಿ ಕಾಣಿಸಿಕೊಳ್ಳುತ್ತಾಳೆ. ಪಶ್ಯಂತಿ, ಮಧ್ಯಮ ಮತ್ತು ವೈಖರಿಗಳೇ ಈ ಮೂರು. ವಾಸ್ತವವಾಗಿ ಆಕೆಯು ಭೇದಗಳಿಲ್ಲದ ಶಕ್ತಿಯಾಗಿರುವುದರಿಂದ ಆಕೆಯು ಮನಸ್ಸು ಅಥವಾ ಇಂದ್ರಿಯಗಳಿಗೆ ಅಲಭ್ಯಳು. ಆ ಮಹಾಮಾತೆಯು ತಾನು ಕಾಣಿಸಿಕೊಳ್ಳುವ ರೂಪದಲ್ಲಿ ಶ್ರೀಚಕ್ರವಾಗಿ ಕಾಣಬರುತ್ತಾಳೆ". ವೇದದ ಇನ್ನೊಂದು ಉಲ್ಲೇಖವೂ ಇದನ್ನು ಸಮರ್ಥಿಸುತ್ತದೆ. ಅದು 'ಚತ್ವಾರಿ' ಇಂದ ಆರಂಭವಾಗಿ 'ವದಂತಿ'ಯೊಂದಿಗೆ ಕೊನೆಗೊಳ್ಳುತ್ತದೆ. "ಬ್ರಹ್ಮನನ್ನು ಅರಸುವ ಕೆಲವು ಸಾಧಕರಿಗೆ ಈ ವಾಕ್ ಎಲ್ಲಿಂದ ಉಗಮಗೊಂಡಿತು ಎನ್ನುವುದು ತಿಳಿದಿದೆ. ಅವರೇ ಜ್ಞಾನಿಗಳು". ಈ ನಾಲ್ಕು ವಾಕ್ಕುಗಳಲ್ಲಿ, ಅದು ಮೂರರಲ್ಲಿ ಕಾಣಿಸಿಕೊಳ್ಳುತ್ತದೆಯಾದುದರಿಂದ, ಅವು ನಮ್ಮ ಅನುಭವಕ್ಕೆ ಲಭ್ಯ. ಈ ನಾಲ್ಕು ವಾಕ್ಕುಗಳ ಆಕರದ ಬಗೆಗೆ ಸ್ವಲ್ಪ ಭಿನ್ನಾಭಿಪ್ರಾಯಗಳಿವೆ. ಒಂದು ಅಭಿಪ್ರಾಯದ ಪ್ರಕಾರ, ಮೆದುಳಿನಲ್ಲಿರುವ ಸಹಸ್ರ ದಳಗಳ ಪದ್ಮವೇ ಇದರ

ಉಗಮಸ್ಥಾನ. ಮತ್ತೊಂದು ಅಭಿಪ್ರಾಯದ ಪ್ರಕಾರ ಶರೀರದ ಕೆಳಭಾಗದಲ್ಲಿರುವ ಆರುಪದ್ಮಗಳೇ ಇದರ ಉಗಮಸ್ಥಾನ.

11. ವಾಮಾಚಾರಕ್ಕೆ ಭಿನ್ನವಾಗಿರುವುದೇ ಸಮಯಾಚಾರ ಅಥವಾ ದಕ್ಷಿಣಾಚಾರ. ಆಗಲೇ ಗಮನಿಸಿರುವಂತೆ ಸಮಯ ಎಂದರೆ ವೇದ ಎನ್ನುವ ಅರ್ಥವೂ ಉಂಟು. ಆದುದರಿಂದ ಈ ಆಚಾರ ವೇದಕ್ಕೇ ಸಂಬಂಧಿಸಿದ್ದಾಗಿದೆ. ಆದರೆ ವಾಮಾಚಾರವು ತಾಂತ್ರಿಕ ಪರಂಪರೆಗೆ ಸಂಬಂಧಿಸಿದ್ದಾಗಿದೆ. ಈ ಸಾಧನೆಯಲ್ಲಿ ಗುರುಪರಂಪರೆಯು ನಾರಾಯಣನಿಂದ ಆರಂಭವಾಗಿ ಬ್ರಹ್ಮ ಮತ್ತು ವಸಿಷ್ಠರ ಮೂಲಕ, ಸಾಧಕನ ಗುರುವಿನೊಂದಿಗೆ ಕೊನೆಗೊಳ್ಳುತ್ತದೆ. ಈ ಅಭಿಪ್ರಾಯ ವನ್ನು ಸನಕಸಂಹಿತೆಯಿಂದ ಆರಂಭವಾಗುವ ಪಂಚಸಂಹಿತೆಗಳೆಂದು ಹೆಸರುವಾಸಿಯಾಗಿರುವ ಶುಭಾಗಮ ಪಂಚಕದಲ್ಲಿ ಹೇಳಲಾಗಿದೆ. ಶ್ರೀ ಲಲಿತೆಯ ಆಂತರಿಕ ಮತ್ತು ಬಾಹ್ಯ ಪೂಜೆಗಳನ್ನು ಈ ಸಂಹಿತೆಗಳು ವಿವರಿಸಿರುವ ಕ್ರಮದಲ್ಲಿ ಮಾಡಲಾಗುತ್ತದೆ. ಇದನ್ನು ಶ್ರೀ ವಿದ್ಯಾ-ಕಾದಿ ವಿದ್ಯಾ ಎಂದು ಕರೆಯಲಾಗಿದೆ. ಇದರ ಋಷಿ ದಕ್ಷಿಣಾಮೂರ್ತಿ. ಕಾಮೇಶ್ವರ-ಕಾಮೇಶ್ವರಿಗಳೇ ಇದರ ದೇವತೆಗಳು. ವಾಸ್ತವವಾಗಿ ಈ ಪೂಜೆಯು ಮಾನಸಿಕವಾದದ್ದು. ಶಿಷ್ಯನು ಶ್ರೀಚಕ್ರದ ಮುಖ್ಯ ಅಂಗವಾದ ಶಿವ ಮತ್ತು ಶಕ್ತಿಯರ ಏಕತೆಯನ್ನು ತಿಳಿಯಲು ಸಮರ್ಥನಾಗಿರಬೇಕು ಹಾಗೂ ಇದಕ್ಕೂ ಮೂಲಾಧಾರದಿಂದ ಆರಂಭವಾಗುವ ಆರು ಪದ್ಮಗಳಿಗೂ ಇರುವ ಏಕತೆಯನ್ನು ತಿಳಿಯಬೇಕು. ಇದರಲ್ಲಿ ಭಾವನೋಪನಿಷತ್ತಿನ ಪಾತ್ರವೇನೆಂಬುದನ್ನು ಆಗಲೇ ವಿವರಿಸಲಾಗಿದೆ. ಈ ಸಾಧನೆಯ ಅತ್ಯುತ್ತಮ ಗುರಿಯೆಂದರೆ, ತಲೆಯ ಮೇಲ್ಭಾಗದಲ್ಲಿರುವ ಸಹಸ್ರದಳಗಳ ಪದ್ಮದೊಂದಿಗೆ ಜೀವಾತ್ಮನು ಸರ್ವವ್ಯಾಪಿ ಶಿವನೊಂದಿಗೆ ತಾದಾತ್ಮ್ಯವನ್ನು ಹೊಂದುವುದೇ ಆಗಿದೆ. ಇದನ್ನು ಖಚಿತಪಡಿಸುವ 'ತತ್ವಜ್ಞಾನಾಯ' ಎಂದು ಆರಂಭವಾಗಿ 'ಜಯತಿ ಶಿವತತ್ವೇನ ಮಿಲಿತ' ಎಂದು ಕೊನೆಗೊಳ್ಳುವ ಗೌಡಪಾದರ ಶ್ಲೋಕ ಒಂದಿದೆ. (ಸುಭಗೋದಯ).

12. ಶ್ರೀ ಲಲಿತಾ ಸಹಸ್ರನಾಮದಲ್ಲಿ 256ನೆಯ ನಾಮದಿಂದ ಆರಂಭವಾಗುವ 19 ನಾಮಗಳು ಜೀವಾತ್ಮ ಹಾಗೂ ಪರಮಾತ್ಮನಿಗೂ ಇರುವ ಭಿನ್ನತೆಗಳನ್ನು ವರ್ಣಿಸುತ್ತವೆ. ನಾವು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಇಡೀ ವಿಶ್ವವನ್ನು ಸ್ಥೂಲ ಮತ್ತು ಸೂಕ್ಷ್ಮ ಎಂದು ವಿಭಾಗಿಸಲಾಗಿದೆ. ನಮ್ಮ ಇಂದ್ರಿಯಗಳು ಹಾಗೂ ಮನಸ್ಸಿನಿಂದ ತಿಳಿದುಕೊಳ್ಳುವುದನ್ನು ವಿರಾಟ್ ಎಂದು ಕರೆಯುತ್ತೇವೆ. ಅದು ಪ್ರತಿಯೊಬ್ಬರಿಗೂ ಕಾಣುವ ಸೂಕ್ಷ್ಮವಿಶ್ವ. ಸ್ಥೂಲವಿಶ್ವದಲ್ಲಿ ಸೃಷ್ಟಿಗೊಂಡ ಎಲ್ಲ ವಸ್ತುಗಳಲ್ಲಿಯೂ ಇರುವ ಆತ್ಮಗಳೇ ಪೂರ್ಣವಾಗಿರುತ್ತವೆ. ಇವು ಪ್ರತ್ಯೇಕ ಜೀವಗಳು ಅಥವಾ ಪರಿಪೂರ್ಣ ಈಶ್ವರ. ಈ ಎಲ್ಲ ಎಲ್ಲೆಗಳನ್ನೂ ಆಕೆಯೇ

ತನ್ನ ಪರಿಧಿಯೊಳಗೆ ಇರಿಸಿಕೊಳ್ಳಲು ಮುಂದಾಗುತ್ತಾಳೆ. ಪ್ರತ್ಯೇಕ ಜೀವಗಳ ವಿಷಯದಲ್ಲಿ ಹೇಳುವುದಾದರೆ. ಅವನಿಗೆ ನಾಲ್ಕು ಅವಸ್ಥೆಗಳುಂಟು. ಅವುಗಳೇ ಜಾಗೃತಿ, ಸ್ವಪ್ನ, ಸುಷುಪ್ತಿ ಹಾಗೂ ಈ ಮೂರನ್ನೂ ಮೀರಿದ ತುರೀಯ. ಪ್ರತ್ಯೇಕ ಜೀವಗಳನ್ನು ಜಾಗೃತಿಯಲ್ಲಿ ವಿಶ್ವವೆಂದೂ, ಸ್ವಪ್ನದಲ್ಲಿ ತೈಜಸ ಎಂದೂ, ಸುಷುಪ್ತಿಯಲ್ಲಿ ಪ್ರಾಜ್ಞ ಎಂದೂ ಕರೆಯುತ್ತಾರೆ. ಈ ಮೂರು ಅವಸ್ಥೆಗಳಲ್ಲಿ ಜೀವಗಳನ್ನು ಈ ಹೆಸರುಗಳಿಂದ ಗುರುತಿಸಲಾಗುತ್ತದೆ. ಈ ಅವಸ್ಥೆಗಳ ಜೀವಗಳು ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಎಂಬ ಶರೀರಗಳನ್ನು ನಿಯಂತ್ರಿಸುತ್ತವೆ. ವಿಶ್ವದಲ್ಲಿ ಈಶ್ವರನು ಜೀವಕ್ಕಿಂತ ಭಿನ್ನನಾದವನು. ಅವನಿಗೂ ಅದೇ ಅವಸ್ಥೆಗಳು, ಹೆಸರುಗಳು ಹಾಗೂ ಶರೀರಗಳುಂಟು. ಅವುಗಳಿಗೆ ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಶರೀರಗಳಲ್ಲಿ ವೈಶ್ವಾನರ, ಹಿರಣ್ಯಗರ್ಭ ಮತ್ತು ಈಶ್ವರ ಎಂದು ಹೆಸರು. ಜಾಗೃತ್, ಸ್ವಪ್ನ ಮತ್ತು ಸುಷುಪ್ತಿಗಳು ಜೀವಗಳಿಗುಂಟು. ಈ ಮೇಲೆ ಉಲ್ಲೇಖಿಸಿದ ಎಲ್ಲವುದರಲ್ಲಿಯೂ ಜೀವಾತ್ಮ ಹಾಗೂ ಪರಮಾತ್ಮಳಾಗಿ ಆಕೆಯೊಬ್ಬಳೇ ಕಾಣಿಸಿಕೊಳ್ಳುತ್ತಾಳೆ. ಆಕೆಯನ್ನು ಮೀರಿದ್ದು ಯಾವುದೂ ಇಲ್ಲ. ಆಕೆಗೂ ಸತ್ವ, ರಜಸ್ ಮತ್ತು ತಮಸ್ ಅಥವಾ ಪ್ರಕೃತಿ ಎಂಬ ಮೂರು ಗುಣಗಳಿಗೂ ಸಾಮ್ಯತೆ ಇದೆ.

13. ಗೌಡಪಾದ ಆಚಾರ್ಯರಿಂದ ರಚಿತವಾದ ಸುಭಗೋದಯ ಸ್ತೋತ್ರದಲ್ಲಿ ಈ ಮೂರು ಪ್ರಸ್ತಾರಗಳ ವರ್ಣನೆ ಇದೆ. ಇದು 'ಇಮಾನಿತ್ಯವರ್ಣಾ, ಎಂಬುದರಿಂದ ಆರಂಭವಾಗಿ 'ಸಮಯಿನಾಂ' ಎಂಬುದರಿಂದ ಮುಕ್ತಾಯಗೊಳ್ಳುತ್ತದೆ.

14. ಯೋಗ ಮತ್ತು ತಂತ್ರ ಗ್ರಂಥಗಳಲ್ಲಿ ಇದನ್ನು 'ಕುಂಡಲಿನಿ ಪ್ರೊಬೋಧಂ ಅಥವಾ ಕುಂಡಲಿಯನ್ನು ಜಾಗೃತಗೊಳಿಸುವುದು ಎಂದು ಕರೆಯಲಾಗಿದೆ. ಇಂತಹ ಕೆಲವು ಉತ್ತಮ ಗ್ರಂಥಗಳಲ್ಲಿ ವಿವರಿಸಿರುವುದನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಆತ್ಮ ನಿಯಂತ್ರಣ ಮತ್ತು ಇತರ ಗುಣಗಳನ್ನು ಹೊಂದಿರುವ ಪರಿಣಿತನಾದ ಗುರುವಿನಿಂದ ಈ ಮಾರ್ಗದ ಉಪದೇಶವನ್ನು ಪಡೆಯಬೇಕು. ಆತ್ಮ ನಿಯಂತ್ರಣವೇ ಮುಂತಾದ ಗುಣಗಳನ್ನು, ಶಿಷ್ಯನು ಕುಂಡಲಿಯನ್ನು ಜಾಗೃತಗೊಳಿಸಲು ಅರ್ಹನಾಗುವುದಕ್ಕೆ ಮುಂಚೆ ಹೊಂದಿರಬೇಕು.

ಅವನು ಹಂಸಮಂತ್ರವನ್ನು ಕುರಿತು ಧ್ಯಾನಿಸಬೇಕು. ಹಾಗೆ ಮಾಡುವಾಗ ಅವನು ಗುದದ್ವಾರವನ್ನು ಒಳಕ್ಕೆ ಎಳೆದುಕೊಳ್ಳಬೇಕು. ಆಗ ಆತ್ಮವು ಮೂಲಾಧಾರ ಚಕ್ರಕ್ಕೆ ಇಳಿಯುತ್ತದೆ. ಆನಂತರ ಜೀವಾತ್ಮನು ಹೂಂಕಾರದಿಂದ ಮೂಲಾಧಾರದಲ್ಲಿರುವ ಕುಂಡಲಿಯನ್ನು ಜಾಗೃತಗೊಳಿಸಲು ಮನಸ್ಸನ್ನು ಕೇಂದ್ರೀಕರಿಸಬೇಕು. ಇದೇ ಕುಂಡಲಿಯನ್ನು ಜಾಗೃತಗೊಳಿಸುವ ಮಾರ್ಗ. ಹಂತ

ಹಂತವಾಗಿ ಆರು ಚಕ್ರಗಳ ಮೂಲಕ, ಸರಿಯಾದ ಮಂತ್ರಗಳನ್ನು ಹೇಳುವುದರ ಮೂಲಕ, ವಾಯುಗಳನ್ನು ಒಳಕ್ಕೆ ಎಳೆದುಕೊಳ್ಳುವ ಮೂಲಕ ಕುಂಡಲಿಯನ್ನು ಜಾಗೃತಗೊಳಿಸಿದ ನಂತರ, ಸಹಸ್ರ ದಳಗಳ ಪದ್ಮದ ಮೆದುಳಿನಲ್ಲಿ ಪರಮಾತ್ಮನು ವಾಸಿಸುವಲ್ಲಿಗೆ ಕೊಂಡೊಯ್ಯಬೇಕು. ಇನ್ನೊಂದು ಕಡೆ ಉಲ್ಲೇಖಿಸಿರುವಂತೆ ಇದೇ ಕುಂಡಲಿನಿ ಯೋಗ. ಇದರ ವಿವರವಾದ ವರ್ಣನೆಗಳನ್ನು ಸಂಹಿತೆಗಳಲ್ಲಿ ಹಾಗೂ ಗೋರಕ್ಷ, ಕಾಲಿನಿ, ಕುಲಾಮೃತ ಮತ್ತು ಇತರ ತಂತ್ರ ಗ್ರಂಥಗಳಲ್ಲಿ ಯಾವ ರೀತಿ ಕುಂಡಲಿನಿಯು ಚಕ್ರಗಳನ್ನು ಭೇದಿಸಿಕೊಂಡು ಹೋಗುತ್ತದೆ ಎಂಬುದನ್ನು ನೋಡಬಹುದು. ನಾವು ಆಗಲೇ ಹೇಳಿರುವಂತೆ ಕುಂಡಲಿನಿಯೋಗವನ್ನು ಕುರಿತಾದ ಗ್ರಂಥಗಳಿಂದಲೂ ಈ ಮಾಹಿತಿಗಳನ್ನು ಪಡೆಯಬಹುದು.

15. ಪರಮಾತ್ಮನು ವೈಯಕ್ತಿಕ ಆತ್ಮದ ರೂಪದಲ್ಲಿದ್ದು ಹೃದಯಕ್ಕೆ ಹತ್ತಿರದಲ್ಲಿ ಹೊಳೆಯುವ ಉರಿಯಂತೆ ಅಥವಾ ಮಿಂಚಿನ ಎಳೆಯಂತೆ ಕಾಣುತ್ತಾನೆ ಎಂದು ಮಹಾನಾರಾಯಣೋಪನಿಷತ್ತಿನಲ್ಲಿ ವಿವರಿಸಲಾಗಿದೆ.

16 ಮತ್ತು 17. ತುರೀಯವನ್ನು ಮೀರಿದ ಇನ್ನೊಂದು ಅವಸ್ಥೆ ಇದೆ. ಅದನ್ನು ಸಾಕ್ಷಿ ಎಂದು ಕರೆಯುತ್ತಾರೆ. ಮಾಂಡೊಕ್ಯೋಪನಿಷತ್ತಿನಲ್ಲಿ ಈ ಎಲ್ಲ ಅವಸ್ಥೆಗಳೂ ವಿವರವಾಗಿ ವರ್ಣಿಸಲ್ಪಟ್ಟಿವೆ. ತುರೀಯವನ್ನು ಮೀರಿದ ಅವಸ್ಥೆಯೇ ಸಾಕ್ಷಿ ಅಥವಾ ಪ್ರೇಕ್ಷಕ. ಸಾಕ್ಷಿಯೇ ಅತ್ಯಂತ ಶ್ರೇಷ್ಠ ಅವಸ್ಥೆಯಾಗಿದ್ದು, ಇದು ಮಿಕ್ಕ ನಾಲ್ಕು ಅವಸ್ಥೆಗಳನ್ನೂ ನೋಡಬಲ್ಲದು. ಆದರೆ ಇತರ ಅವಸ್ಥೆಗಳು ಸಾಕ್ಷಿಯನ್ನು ನೋಡಲು ಸಾಧ್ಯವಿಲ್ಲ. ಶ್ರೀ ಲಲಿತಾ ಸಹಸ್ರನಾಮದಲ್ಲಿ ಕಾಣಬರುವ ಸಾಕ್ಷಿವರ್ಜಿತ ಎನ್ನುವ ನಾಮವು ಈ ಅವಸ್ಥೆಯನ್ನು ಸರಿಯಾದ ರೀತಿಯಲ್ಲಿ ವರ್ಣಿಸುತ್ತದೆ.

ಒಬ್ಬ ಸಾಧಕನು ವಿವೇಚನಾ ಮಾರ್ಗ ಅಥವಾ ಯೋಗದಿಂದ ಮೂರು ಗ್ರಂಥಿಗಳನ್ನು ದಾಟಿದರೆ, ಅವನು ಸಾಕ್ಷಿಯೇ ಆಗಿಬಿಡುತ್ತಾನೆ. ಇದನ್ನು ಕೈವಲ್ಯ ಎಂದು ಕರೆಯಬಹುದು. ನಾಲ್ಕು ಅವಸ್ಥೆಗಳನ್ನು ಕುರಿತು ಒಬ್ಬ ಶ್ರೇಷ್ಠ ಸ್ವಾಮೀಜಿಯವರು ನೀಡಿದ ವಿವರಣೆಯನ್ನು ಅನುಸರಿಸಿ ಇಲ್ಲಿ ಉದಾಹರಿಸಿದ್ದೇನೆ. ನಾಟಕ ಮಂಡಲಿಯೊಂದು ಶೇಕ್ಸ್‌ಪಿಯರನ ಒಥೆಲೊ ಎಂಬ ರುದ್ರ ನಾಟಕವನ್ನು ಪ್ರಸ್ತುತಪಡಿಸುತ್ತಿದೆ. ಇದರಲ್ಲಿ ಜಾನ್ ಮತ್ತು ಜೇಮ್ಸ್ ಪಾತ್ರಧಾರಿಗಳು. ಅವರು ಒಥೆಲೊ ನಾಟಕದಲ್ಲಿ ಪಾತ್ರ ಮಾಡುತ್ತಿರುವಾಗ, ಆ ಪಾತ್ರಗಳಿಗೆ ಸರಿಹೊಂದುವ ವೇಷಭೂಷಣ, ಭಾಷೆ ಹಾಗೂ ಭಾವೋದ್ರೇಕದ ಸ್ವಭಾವಗಳನ್ನು ಅಳವಡಿಸಿಕೊಂಡಿರುತ್ತಾರೆ. ಆ ಪಾತ್ರಗಳನ್ನು ನಿರ್ವಹಿಸುವ ಅವರಿಗೆ, ಈ

ವೇಷಭೂಷಣ, ಭಾಷೆ ಮತ್ತು ಭಾವನೆಗಳು ತಮ್ಮ ಸ್ವಂತದ್ದಲ್ಲ ಎಂಬುದು ಗೊತ್ತು. ನಾಟಕ ಆಡದಿರುವ ಸಮಯದಲ್ಲಿ ಅವರು ಕೇವಲ ಜಾನ್ ಮತ್ತು ಜೇಮ್ಸ್. ಆದರೆ ನಾಟಕಕ್ಕೆ ಅವರು ವೇಷ ಭೂಷಣ ಮತ್ತು ಇತರ ಪರಿಕರಗಳಿಲ್ಲದೆ ಪೂರ್ವಾಭ್ಯಾಸ ಮಾಡಿಕೊಳ್ಳುತ್ತಿರಬಹುದು. ಇಲ್ಲಿಯೂ ಅವರು ನಾಟಕದ ಪಾತ್ರಧಾರಿಗಳು. ಜಾನ್ ಅಥವಾ ಜೇಮ್ಸ್ ನಾಟಕ ಮಂಡಲಿಯ ಮೇನೇಜರ್ ಆಗಿರಬಹುದು. ಇದೇ ರೀತಿಯಲ್ಲಿ ಜೀವಗಳು ವಿಶ್ವ, ತೈಜಸ, ಪ್ರಜ್ಞ ಅಥವಾ ಸಾಕ್ಷಿಗಳಾಗಿದ್ದು, ವಿವಿಧ ಪರಿಕರಗಳನ್ನು ಹೊಂದಿದ ನಾಟಕದ ವೇಷಧಾರಿಗಳಿಗೆ ಅಥವಾ ಮೇನೇಜರನಿಗೆ ಹೋಲಿಸಬಹುದು. ಜೇಮ್ಸನು ಪಾತ್ರವನ್ನು ಮಾಡುತ್ತಿರುವಾಗ ಅಥವಾ ಪೂರ್ವಾಭ್ಯಾಸವನ್ನು ಮಾಡುತ್ತಿರುವಾಗ ಇಲ್ಲವೇ ನೋಡುತ್ತಿರುವಾಗಲೂ ಅವನು ಜೇಮ್ಸ್ ಆಗಿ ಉಳಿದಿರುತ್ತಾನೆಯೋ ಹೊರತು ತನ್ನ ಪರಿಚಯವನ್ನು ಕಳೆದುಕೊಳ್ಳುವುದಿಲ್ಲ. ಅದೇ ರೀತಿಯಲ್ಲಿ ಜೀವವು ಜಾಗೃತ, ನಿದ್ರೆ ಮತ್ತು ಸುಷುಪ್ತಿಗಳಲ್ಲಿ ಇದ್ದಾಗ್ಯೂ, ಅದು ಈ ಅವಸ್ಥೆಗಳಿಂದ ಭಿನ್ನವಾಗಿರುತ್ತದೆ. ಆದರೆ ಪಾತ್ರವೇಷಧಾರಿಯು ಧರಿಸುವ ವೇಷಭೂಷಣಗಳು ನಿಜವಲ್ಲದಿರುವಂತೆ, ಅವು ಜೀವದ ಪರಿಕರಗಳು ಮಾತ್ರ. ಇದೇ ರೀತಿಯಲ್ಲಿ ವಿಶ್ವ, ತೈಜಸ, ಪ್ರಜ್ಞ ಮತ್ತು ತುರೀಯ ಎಂಬ ಹೆಸರುಗಳು ಅದೇ ಜೀವನ ಸಾಧನಗಳು ಮಾತ್ರವೇ ಹೊರತು, ಅದರಲ್ಲಿ ಅವು ಸೇರಿರುವುದಿಲ್ಲ. ಯಾವ ರೀತಿ ಜೇಮ್ಸ್ ತನ್ನ ಗುರುತನ್ನು ಕಳೆದುಕೊಳ್ಳದೆ ನಾಟಕವನ್ನು ನೋಡುತ್ತಿರುತ್ತಾನೆಯೋ ಅಥವಾ ಪೂರ್ವಾಭ್ಯಾಸ ಮಾಡುತ್ತಿರು ತ್ತಾನೆಯೋ, ಅದೇ ರೀತಿಯಲ್ಲಿ ವೈಯಕ್ತಿಕ ಆತ್ಮವು ತನ್ನ ಪರಿಚಯವನ್ನು ಕಳೆದುಕೊಳ್ಳದೆ, ಎಲ್ಲ ಅವಸ್ಥೆಗಳಲ್ಲಿಯೂ ಸಾಕ್ಷಿಯಾಗಿ ಇರುತ್ತದೆ.

ಈ ಸಂದರ್ಭದಲ್ಲಿ ವಿವಿಧ ಕೋಶಗಳನ್ನು ಉಲ್ಲೇಖಿಸುವುದು ಅಗತ್ಯವೆನಿಸುತ್ತದೆ. ಆಕೆಯು ಪಂಚಕೋಶಗಳಲ್ಲಿ ಅವುಗಳನ್ನು ಆವರಿಸಿಕೊಂಡಿರುವಂತೆ ವಾಸಿಸುತ್ತಾಳೆ ಎಂದು ಶ್ರೀ ಲಲಿತಾ ಸಹಸ್ರನಾಮವು ಉಲ್ಲೇಖಿಸುತ್ತದೆ. ಇವು ಎಲ್ಲವುಗಳಿಗೂ ಸಮಾನವಾಗಿ ಸೇರಿದವುಗಳು. ಸ್ಥೂಲದಿಂದ ಹಿಡಿದು ಸೂಕ್ಷ್ಮದವರೆಗೆ ಅವು ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಹಾಗೂ ಆನಂದಮಯ. ಅನ್ನಮಯವು ಸ್ಥೂಲಶರೀರ. ಪ್ರಾಣಮಯ, ಮನೋಮಯ ಹಾಗೂ ವಿಜ್ಞಾನಮಯಗಳು ಸೂಕ್ಷ್ಮಶರೀರಗಳು. ಆನಂದಮಯವು ಕಾರಣೀಭೂತ ಶರೀರ. ಜೀವವು ಪ್ರಜ್ಞಾಪೂರ್ವಕವಾಗಿ ಸ್ಥೂಲಶರೀರವನ್ನು ಭೇದಿಸುತ್ತದೆಯೋ ಆಗ ಅವನು ಬ್ರಹ್ಮಗ್ರಂಥಿಯನ್ನು ಭೇದಿಸಬೇಕು. ಆಗ ಅವನಿಗೆ ತನ್ನ ಶರೀರದ ಪ್ರಜ್ಞೆ ಇರುವುದಿಲ್ಲ. ಅವನು ಮಾನಸಿಕವಾಗಿ ಶರೀರವನ್ನು

ಮೀರಿದರೆ, ಅವನು ಕಾರಣೀಭೂತ ಶರೀರವನ್ನು ಹೊಂದಿ ಆನಂದಮಯಕೋಶವನ್ನು ಪ್ರವೇಶಿಸುತ್ತಾನೆ. ಅವನು ಇದನ್ನೂ ಭೇದಿಸಬಲ್ಲವನಾದರೆ, ಅವನು ಸಾಕ್ಷಿಯಾಗಿ, ಮೇಲೆ ಹೇಳಿದ ರೀತಿಯಲ್ಲಿ ಕೈವಲ್ಯವನ್ನು ಹೊಂದುತ್ತಾನೆ.

18. ಶ್ರೀ ಲಲಿತಾಸಹಸ್ರನಾಮದಲ್ಲಿ ಪಂಚಕೃತ್ಯಪರಾಯಣ ಎಂಬ ನಾಮವಿದೆ. ಪಂಚಕೃತ್ಯಗಳೆಂದರೆ ಐದು ಕಾರ್ಯಗಳು ಎಂದರ್ಥ. ಅವುಗಳನ್ನು ಯಾವತ್ತೂ ಮಾಡುವುದು ಆಕೆಯ ಸಂಕಲ್ಪ. ಅವು ಯಾವುವೆಂದರೆ ಸೃಷ್ಟಿ, ಸ್ಥಿತಿ, ಲಯ, ಮರೆಯಾಗುವುದು ಹಾಗೂ ಮರೆಯಾದುದನ್ನು ಪುನಃ ಸೃಷ್ಟಿಸುವುದು. ಅವುಗಳನ್ನು ಸೃಷ್ಟಿ, ಸ್ಥಿತಿ, ಸಂಹಾರ, ತಿರೋಧಾನ ಮತ್ತು ಅನುಗ್ರಹ ಎಂದೂ ಕರೆಯುತ್ತಾರೆ. ಸೌಂದರ್ಯಲಹರಿಯ 24ನೆಯ ಶ್ಲೋಕವು ಇವುಗಳನ್ನು ಚೆನ್ನಾಗಿ ವರ್ಣಿಸುತ್ತದೆ. "ಅದರಂತೆ ಬ್ರಹ್ಮನು ಚರಾಚರ ಬ್ರಹ್ಮಾಂಡವನ್ನು ಸೃಷ್ಟಿಸುತ್ತಾನೆ. ಈ ರೀತಿ ಸೃಷ್ಟಿಯಾದುದನ್ನು ಮಹಾವಿಷ್ಣುವು ಕಾಪಾಡುತ್ತಾನೆ. ರುದ್ರನು ಸಕಾಲದಲ್ಲಿ ಇದನ್ನು ನಾಶಮಾಡುತ್ತಾನೆ. ಈಶ್ವರನು ಈ ಮೂರು ಕಾರ್ಯಗಳನ್ನು ಗಮನಿಸಿ, ಮಾಯೆಯಿಂದ ಉಂಟಾದ ಬ್ರಹ್ಮಾಂಡವನ್ನು ತನ್ನೊಳಗೆ ಮತ್ತೆ ಸೇರಿಸಿಕೊಳ್ಳುತ್ತಾನೆ. ಹೀಗೆ ಇಡೀ ಬ್ರಹ್ಮಾಂಡವು ಕಾಣೆಯಾಗುತ್ತದೆ. ಇದನ್ನು ಪುನಃ ಸೃಷ್ಟಿಸಬೇಕಾದಾಗ (ಅನುಗ್ರಹ), ನಿನ್ನ ಹುಟ್ಟಿನ ಚಲನೆಯಿಂದ ದೊರಕುವ ಆಜ್ಞೆಯಿಂದ ಹಾಗೂ ನಿನ್ನ ಶಕ್ತಿಯಿಂದ,

ಸದಾಶಿವನು ಈ ನಾಲ್ಕು ಕಾರ್ಯನಿರ್ವಾಹಕರು ಅವರವರ ಕಾರ್ಯಗಳನ್ನು ಮಾಡುವ ರೀತಿಯಲ್ಲಿ ಮಾಡುವುದರಿಂದ, ಬ್ರಹ್ಮಾಂಡವು ಪುನಃ ಸೃಷ್ಟಿಯಾಗುತ್ತದೆ. ಇದನ್ನೇ ಬ್ರಹ್ಮಾಂಡ ಪ್ರಳಯ ಎಂದು ಹೇಳುತ್ತಾರೆ". ಇದು ಬ್ರಹ್ಮಾಂಡದ ಪೂರ್ಣನಾಶ ಮತ್ತು ಅಂತರ್ಧಾನ ಹಾಗೂ ಪುನರ್ಕಾಣ್ಕೆಗಳನ್ನು ಸೂಚಿಸುತ್ತದೆ. ಆಕೆಯು ಪಂಚಬ್ರಹ್ಮ ಸಿಂಹಾಸನದಲ್ಲಿ ವಿರಾಜಮಾನಳಾಗಿದ್ದಾಳೆ ಎನ್ನುವ ವರ್ಣನೆ ಈ ಸಂದರ್ಭದಲ್ಲಿ ಸೂಕ್ತವಾಗಿ ಕಾಣುತ್ತದೆ.

ಆಗಲೇ ಉಲ್ಲೇಖಿಸಿರುವ ಬ್ರಹ್ಮ, ವಿಷ್ಣು, ರುದ್ರ, ಈಶ್ವರ ಮತ್ತು ಸದಾಶಿವ-ಇವರುಗಳೇ ಈ ಐವರು ಕಾರ್ಯ ನಿರ್ವಾಹಕರು. ಅವಳು ಅವರೆಲ್ಲರಿಗಿಂತ ಎತ್ತರವಾದ ಆಸನದಲ್ಲಿ ಆಸೀನಳಾಗಿದ್ದಾಳೆ ಎಂದರೆ, ಅವರು ತಮ್ಮ ಕೆಲಸಕಾರ್ಯಗಳನ್ನು ಆಕೆಯ ಕೃಪೆಯಿಂದ ಮಾಡುತ್ತಾರೆ ಎಂದು ಸೂಚಿತವಾಗುತ್ತದೆ. ಮುದ್ರೆಗಳಲ್ಲಿ ಪಂಚಕೃತ್ಯಗಳು ಕೈಗಳ ವಿನ್ಯಾಸದಿಂದ ಸೂಚಿತವಾಗುತ್ತವೆ. ನಮಸ್ಕಾರ ಅಥವಾ ಯೋನಿಮುದ್ರೆ ಎಂಬುದು ಒಂದುಂಟು. ಆದಿಸ್ಥಿತಿಯ ಪ್ರಕೃತಿಯು ಪಶ್ಯಂತಿಯಾಗಿದ್ದಾಳೆ ಎಂಬುದರ ಸೂಚನೆಯಾಗಿದ್ದು, ಇದು ಶ್ರೀ ಚಕ್ರದ ಅತ್ಯಂತ ಆಂತರಿಕ ವೃತ್ತದ ವಿಸ್ತರಣೆಯೇ

ಆಗಿದೆ. ಸೃಷ್ಟಿಕಾರ್ಯದ ಆರಂಭಕ್ಕೆ ಇದೇ ಮೊದಲನೆಯ ಚಾಲನೆಯ ಹಂತ. ಆದುದರಿಂದ ಒಬ್ಬ ಸಾಧಕನು ಮುದ್ರೆಗಳ ವಿಷಯಗಳನ್ನು ಸರಿಯಾಗಿ ತಿಳಿದುಕೊಳ್ಳದೇ ಹೋದರೆ, ಶ್ರೀ ಲಲಿತೆಯನ್ನು ಪೂಜಿಸುವಾಗ, ಯೋನಿ ಅಥವಾ ನಮಸ್ಕಾರ ಮುದ್ರೆಗಳನ್ನು, ಇತರ ಮುದ್ರೆಗಳನ್ನು ತಪ್ಪಾಗಿ ತಿಳಿಯುವ ಸಾಧ್ಯತೆ ಉಂಟು. ಇಲ್ಲಿ ಅನುಗ್ರಹ ಮತ್ತು ತಿರೋಧಾನದ ಬಗೆಗೆ ಒಂದು ಮಾತು ಹೇಳಬೇಕು. ಒಬ್ಬ ಕುಂಬಾರನು ಜೇಡಿಮಣ್ಣಿನಿಂದ ಮಡಿಕೆಯನ್ನು ಮಾಡಿದರೆ, ಅವನು ಬಾಯಿ ಮತ್ತು ಹೊಟ್ಟೆ ಇರುವ 'ಮಡಿಕೆ'ಯನ್ನು ಮಾಡಿದನೆಂದು ಅರ್ಥ. ತರ್ಕಶಾಸ್ತ್ರಜ್ಞರು ಈ ರೀತಿ ಪ್ರಶ್ನೆ ಕೇಳುತ್ತಾರೆ: ಕುಂಬಾರನು ಇದನ್ನು ಮಾಡುವುದಕ್ಕೆ ಮುಂಚೆ ಮಡಿಕೆ ಮತ್ತು ಅದರ ಆಕಾರ ಎಲ್ಲಿತ್ತು ಮತ್ತು ಅದು ಅವನಿಗೆ ಎಲ್ಲಿಂದ ಬಂತು ? ಎರಡನೆಯದಾಗಿ ಮಡಿಕೆಯು ಒಡೆದುಹೋಯಿತು ಎಂದು ಭಾವಿಸೋಣ. ಆಗ ಅದು ಆಕಾರವನ್ನುಳ್ಳ ಮಡಿಕೆಯಾಗಿರುವುದಿಲ್ಲ. ಅದು ನಾಶವಾದ ಮೇಲೆ 'ಮಡಿಕೆ' ಮತ್ತು ಅದರ ಆಕಾರ ಎಲ್ಲಿ ಹೋದವು? ಈ ರೀತಿ ಹೆಸರು ಮತ್ತು ಆಕಾರಗಳು ನಾಶವಾಗುವುದಕ್ಕಿಂತ ಭಿನ್ನವಾಗಿ ಕಾಣದೇ ಹೋಗುತ್ತವೆ. ಅದೇ ತಿರೋಧಾನ. ಇದರ ಅರ್ಥ ಏನೆಂದರೆ, ಆಕೆಯ ಮಾಯೆಯ ಮೂಲಕ ಅದನ್ನು ಒಳಗೆ ಎಳೆದುಕೊಂಡ ಹಾಗೆ ಇಲ್ಲವೇ ಆ ಮೂಲಭೂತ ತತ್ವದ ಒಳಗೆ ಅಡಗಿರುವಂತೆ ಇರುತ್ತದೆ. ಅಲ್ಲಿ ಕಾರಣಾತ್ಮಕವಾಗಿದ್ದು ಮತ್ತೆ ಸೃಷ್ಟಿಗಾಗಿ ಇರುವಂತೆ ಕಾಣಬರುತ್ತದೆ. ಬ್ರಹ್ಮಾಂಡ ಪ್ರಳಯದ ಸಮಯದಲ್ಲಿ ಇಡೀ ಬ್ರಹ್ಮಾಂಡವು ಅದರ ಸೃಷ್ಟಿಕರ್ತರ ಜೊತೆಯಲ್ಲಿ ಅವಳಲ್ಲಿ ಲೀನವಾಗುತ್ತದೆ. ಪುನಃ ಇವುಗಳನ್ನು ಸೃಷ್ಟಿಮಾಡಬೇಕಾದಾಗ, ಸದಾಶಿವನು ಆಕೆಯ ಅಪೇಕ್ಷೆಯಂತೆ ಪುನರ್ನಿರ್ಮಿಸುತ್ತಾನೆ. ಇದನ್ನೇ ಅನುಗ್ರಹವೆಂದು ಹೇಳುತ್ತೇವೆ. ಸರಳವಾಗಿ ಹೇಳಬೇಕೆಂದರೆ ಬ್ರಹ್ಮಾಂಡದ ಸೃಷ್ಟಿ ಮತ್ತು ಕಾಣ್ಕೆ ಬಂಧನವಾಗಿಯೂ, ಅದು ಕಾಣೆಯಾದಾಗ ಮೋಕ್ಷವೆನಿಸಿಕೊಳ್ಳುತ್ತದೆ. ಈ ಎರಡೂ ಕ್ರಿಯೆಗಳ ಸಾಮ್ರಾಜ್ಞಿಯೇ ಅವಳು.

19. ಶಂಕರಭಗವತ್ಪಾದರು ದಕ್ಷಿಣಾಮೂರ್ತಿಸ್ತೋತ್ರದಲ್ಲಿ ಇಡೀ ಅದ್ವೈತದ ತತ್ವಗಳನ್ನು ಸಂಗ್ರಹಿಸಿಟ್ಟಿದ್ದಾರೆ. ತನ್ನ ಮೂಲಭೂತ ಶಕ್ತಿಯನ್ನು ಶಿವನ ರೂಪದಲ್ಲಿ ತೋರಿಸಿರುವುದೇ ದಕ್ಷಿಣಾಮೂರ್ತಿ. ಶ್ರೀ ಶಂಕರಾಚಾರ್ಯರು ದಕ್ಷಿಣಾಮೂರ್ತಿಯನ್ನು ಎಂಟು ಶ್ಲೋಕಗಳಲ್ಲಿ ಸ್ತುತಿಸಿದ್ದಾರೆ. ಇದರ ಒಂದು ಶ್ಲೋಕದ ಭಾವಾರ್ಥವು ದಕ್ಷಿಣಾಮೂರ್ತಿಯ ಸ್ವರೂಪವನ್ನು ತಿಳಿದುಕೊಳ್ಳಲು ಅನುಕೂಲವಾಗಿದೆ. "ನಮ್ಮಂತಹ ಮಾನವರಿಗೆ ಅವನ ನಿತ್ಯ ಸತ್ಯವು ಮಾಯೆಯಂತೆ ಕಾಣುತ್ತದೆ. ಆದರೆ ವಿಧೇಯತೆಯಿಂದ ಅವನಿಗೆ ಶರಣಾದ ಜೀವನಿಗೆ ವೇದದ ಮಹಾವಾಕ್ಯದ 'ತತ್ವಮಸಿ'ಯ ದರ್ಶನವಾಗುತ್ತದೆ".

"ಒಂದು ಸಾರಿ ಜೀವನು ಆ ಪರಮಾರ್ಥ ಸತ್ಯವನ್ನು ತಿಳಿದರೆ, ಆ ಜೀವನಿಗೆ

ಸಂಸಾರ ಸಾಗರಕ್ಕೆ ಹಿಂದಿರುಗುವ ಪ್ರಶ್ನೆಯೇ ಇರುವುದಿಲ್ಲ. ಅಂತಹ ಗುರುರೂಪಿ ದಕ್ಷಿಣಾಮೂರ್ತಿಯನ್ನು ನಮಸ್ಕರಿಸುತ್ತೇನೆ".

20. ಶ್ರೀ ಲಲಿತೆಯನ್ನು ಅವಶ್ಯವಾಗಿ ಯಾವಾಗ ಪೂಜಿಸಬೇಕು ಎನ್ನುವುದನ್ನು ಶ್ರೀ ಲಲಿತಾ ಸಹಸ್ರನಾಮ, ಉತ್ತರಾಧ್ಯಾಯದ 20 ಮತ್ತು 21 ನೆಯ ಶ್ಲೋಕಗಳಲ್ಲಿ ವಿವರವಾಗಿ ಹೇಳಲಾಗಿದೆ.

21. ಈ ಯೋನಿಮುದ್ರೆಯನ್ನು ಆಗಲೇ ವರ್ಣಿಸಲಾಗಿದೆ.'ದಶಮುದ್ರಾ ಸಮಾರಾಧ್ಯಾ' ಎನ್ನುವ 977ನೆಯ ನಾಮವನ್ನು ಕುರಿತು ಶ್ರೀ ಭಾಸ್ಕರರಾಯನು ಟೀಕೆಯನ್ನು ಬರೆದಿದ್ದಾನೆ. ಇದಕ್ಕೆ ನಮಸ್ಕಾರ ಮುದ್ರೆ ಎನ್ನುವ ಹೆಸರೂ ಉಂಟು. ಇದನ್ನು ಮಹಾಋಷಿಗಳು ಬಳಸುತ್ತಾರೆ.

22. ಈ ಅರವತ್ತನಾಲ್ಕು ತಂತ್ರಗಳಲ್ಲಿ 'ಭೂತೋಡ್ಡಾಮರಾಸ' ಎನ್ನುವುದೂ ಒಂದು. ಇತರರನ್ನು ಕೊಲ್ಲಲು ಅಥವಾ ಅವರಿಗೆ ಘಾಸಿಯನ್ನುಂಟುಮಾಡಲು ಈ ಮಂತ್ರಗಳನ್ನು ಉಪಯೋಗಿಸಲಾಗುತ್ತದೆ. ಈ ಮಂತ್ರಗಳಲ್ಲಿ ಒಳ್ಳೆಯದಕ್ಕಾಗಿ ಬಳಸುವ ಸಾತ್ವಿಕ, ಸಾಮಾನ್ಯ ಕೆಲಸಕಾರ್ಯಗಳಿಗಾಗಿ ಬಳಸುವ ರಾಜಸಿಕ ಹಾಗೂ ಕೆಟ್ಟದನ್ನು ಮಾಡುವುದಕ್ಕಾಗಿ ಬಳಸುವ ತಾಮಸಿಕ ಮಂತ್ರಗಳೂ ಉಂಟು.

23. ಈ ಸಾಧನೆಯ ಉನ್ನತ ಹಂತ ಎಂದರೆ ಪೂರ್ಣದೀಕ್ಷೆ. ಇದನ್ನು ಯಾವ ಸಾಧಕನಾದರೂ ಸರಿಯಾದ ಮಾನಸಿಕ ಪ್ರವೃತ್ತಿಯಿಂದ ನಿರಂತರ ಅಭ್ಯಾಸವನ್ನು ಮಾಡಿ ಈ ಉನ್ನತ ಹಂತವನ್ನು ಪಡೆಯಬಹುದು. ಹದಿನಾರು ಮಂತ್ರಗಳಿಂದ ಪೂರ್ಣದೀಕ್ಷೆಯನ್ನು ಪಡೆಯಬಹುದೆಂದು ಹೇಳಲಾಗಿದೆ. ಇದನ್ನು ವಸಿಷ್ಠ ಸಂಹಿತೆಯಲ್ಲಿ ವರ್ಣಿಸಲಾಗಿದೆ. ಈ ಹದಿನಾರು ಮಂತ್ರಗಳಿಂದ ಅವುಗಳ ಕೇಂದ್ರ ದೇವತೆಗಳನ್ನು ಪೂಜಿಸಿದರೆ ಈ ಹಂತವು ದೊರಕುತ್ತದೆ ಎಂದು ಹೇಳಲಾಗಿದೆ. ಅವು ಯಾವುವೆಂದರೆ:- ಶುದ್ಧ, ವಿದ್ಯಾ, ಬಾಲಾ, ಮಾತಂಗಿ, ಗುರವೋಃ, ಗಣಪ, ಸೌಭಾಗ್ಯ ವಿದ್ಯಾ, ವಾರಾಹೀ, ತಿರಸ್ಕರಣಿಕ, ಲೋಪಾಮುದ್ರಾ, ತುರೀಯಾಂಬಾ, ಪ್ರಸೋದ, ಷೋಡಶೀ, ಶ್ರೀ ಪರಾಷೋಡಶೀ, ಮತ್ತು ಶ್ರೀ ಮಹಾಪಾದುಕಾ. ವಸಿಷ್ಠ ಸಂಹಿತೆಯು ಈ ಹದಿನಾರನ್ನು ಉಲ್ಲೇಖಿಸುತ್ತದೆ. ಇದು ಸಮಯಾಚಾರದ ಪ್ರಕಾರ ಹೇಳಿರುವಂತಹುದು. ಕೆಲವರು ಈ ಪೂರ್ಣದೀಕ್ಷೆಯನ್ನು ಪಾದುಕಾಂತ ದೀಕ್ಷೆ ಎಂದೂ ಕರೆಯುವುದುಂಟು. ಶ್ರೀವಿದ್ಯಾ ಮಹಾಪಾದುಕ ಎಂಬ ಮಂತ್ರ ಒಂದಿದೆ. ಇದನ್ನು ಹಂಸರಹಸ್ಯ ಸ್ತುತಿಯಲ್ಲಿ ಉಲ್ಲೇಖಿಸಲಾಗಿದೆ. ಇದನ್ನು ಸರಿಯಾಗಿ ಅಭ್ಯಾಸ ಮಾಡಿದರೆ ಸಾಧಕನು ಶ್ರೀವಿದ್ಯಾ ಮಹಾಪಾದುಕಾಂತ ದೀಕ್ಷೆಯ ಹಂತವನ್ನು ತಲಪಬಹುದು. ಶ್ರೀಪಾದುಕ ಹಾಗೂ ಅದರ ಪಾತ್ರ ಮತ್ತು ಅದರ ಮಹತ್ವಗಳನ್ನು ವಾಮಕೇಶ್ವರ ತಂತ್ರದಲ್ಲಿ ವರ್ಣಿಸಲಾಗಿದೆ.

ಈ ಮೇಲಿನ ತಂತ್ರದ ಪ್ರಕಾರ ಇದು ದ್ವಾದಶಾಂತ ಕಮಲದ ಮಧ್ಯದಲ್ಲಿದೆ. ಇದು ಹನ್ನೆರಡನ್ನೂ ಮೀರಿದ ದ್ವಾದಶಾಂತ. ಈ ಹನ್ನೆರಡು ಚಕ್ರಗಳು ಯಾವುವೆಂದರೆ:-

1. ಕುಲಪದ್ಮ -ಮೂಲಾಧಾರದ ಕೆಳಗಿರುವ ಕೆಂಪು ಬಣ್ಣದ ಸಹಸ್ರದಳಗಳ ಪದ್ಮ;
2. ಮೇಲಿನ ಸಂಖ್ಯೆ 1ರಲ್ಲಿರುವುದರ ಮೇಲಿರುವ ಅಷ್ಟದಳ ಪದ್ಮ;
3. ಸಂಖ್ಯೆ 2ರ ಮೇಲಿರುವ ಆರು ದಳಗಳ ಪದ್ಮ;
4. ಮೂಲಾಧಾರ;
5. ಸ್ವಾಧಿಷ್ಠಾನ;
6. ಮಣಿಪುರ;
7. ಅನಾಹತ;
8. ವಿಶುದ್ಧ;
9. ಅದರ ಎಂಟು ದಳಗಳ ಕಾಂಡ;
10. ಆಜ್ಞಾಚಕ್ರ;
11. ಸಹಸ್ರದಳಗಳ ಬಿಳಿಬಣ್ಣದ ಪದ್ಮ;
12. ಅದರ ಕಾಂಡ. ಚಕ್ರವು ಈ ಹನ್ನೆರಡರ ಮೇಲೆ ಇರುವುದರಿಂದ ಅದು ದ್ವಾದಶಾಂಶವನ್ನು ಸೂಚಿಸುತ್ತದೆ. ಅದರ ಮಧ್ಯದಲ್ಲಿ ಬಿಂದು ಹಾಗೂ ಶ್ರೇಷ್ಠ ಗುರುವಿನ ಪಾದುಕಾದ್ವಯಗಳಿರುತ್ತವೆ.

ಓಂ ತತ್ಸತ್